ಸಂಪುಟ: 13 Volume | ಸಂಚಿಕೆ: 336 Issue | ಪುಟಗಳು 08 Pages | ಶುಕ್ರವಾರ 27 ಫೆಬ್ರವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**
ಯಶಸ್ಸು ಸದಾ ಇರಬೇಕೆಂದರೆ ವಿನಯದಿಂದಿರಿ. ಕೀರ್ತಿ ಅಥವಾ ಹಣ ತಲೆಗೆಹತ್ತದಂತೆ ನೋಡಿಕೊಳ್ಳಿ.
–ಎ.ಆರ್.ರೆಹಮಾನ್

ಕರುವಿಗೆ ಜನ್ಮ ನೀಡಿದ ಗೋಮಾತೆಯ ರಕ್ಷಣೆ 6
ಹಣ ಉಳಿತಾಯ ಜ್ಞಾನ ಅಗತ್ಯ: ಕಡಪಟ್ಟಿ 7
ಬಾನಾಮತಿಕಾಟ: ಮೈ ತುಂಬ ಹರಿಯುವ ರಕ್ತ 8

**ಮಲ್ಲಮ್ಮ ನುಡಿ**

**ಯುಗಾದಿ ವಿಶೇಷಾಂಕ- 2026**

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com



ಚಿಟಗುಪ್ಪ: ಲಿಂಗೈಕ್ಯ ಅಯ್ಯಪ್ಪ ಶಿವಾಚಾರ್ಯರರು ಬ್ರಹನ್ಮಠ ಚಾಂಗಲೇರಾ ಮತ್ತು ಚಿಟಗುಪ್ಪ ಇವರ 56ನೇ ಪುಣ್ಯ ಸ್ಮರಣೋತ್ಸವದ –ಆತ್ಮ ಜ್ಯೋತಿ ಕಾರ್ಯಕ್ರಮ ಅಂಗವಾಗಿ ಅರಣ್ಯ ಇಲಾಖೆಯ ಉಪ ವಲಯ ಅರಣ್ಯಾಧಿಕಾರಿ ವೀರಯ್ಯಾ ಪೂಜಾರಿ, ಪತ್ರಕರ್ತ ರಾಜಕುಮಾರ್ ಆರ್. ಹಡಪದ, ಅಯ್ಯಪ್ಪ ಶಿವಾಚಾರ್ಯರ ಗದ್ದುಗೆಯ ದರ್ಶನ ಪಡೆದರು. ಬ್ರಹನ್ಮಠ ಚಾಂಗಲೇರಾ, ಚಿಟಗುಪ್ಪ ಹಿರೇಮಠದ ಪೀಠಾಧಿಪತಿ ಗುರುಲಿಂಗ ಶಿವಾಚಾರ್ಯರಿಗೆ, ಮರುಳಾರಾಧ್ಯ ಶಿವಾಚಾರ್ಯರಿಗೆ ಸಸಿ ನೀಡಿ ಸನ್ಮಾನಿಸಿ ಆಶೀರ್ವಾದ ಪಡೆದರು.

## ಮಳೆ: ನೆಲ ಕಚ್ಚಿದ ರೈತರ ಬೆಳೆ

ಬೆಂಗಳೂರು: ರಾಜ್ಯದ ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಮತ್ತು ಒಳನಾಡು ಜಿಲ್ಲೆಗಳಾದ ದಾವಣಗೆರೆ, ವಿಜಯಪುರ, ಬೆಳಗಾವಿ, ಬಾಗಲಕೋಟೆ, ಯಾದಗಿರಿಗಳಲ್ಲಿ ಮಳೆ ಆಗಿದೆ. ಆಕಾಲಿಕ ಮಳೆಯಿಂದ ದ್ರಾಕ್ಷಿ ಜೋಳ, ಸಜ್ಜೆ ಕಡಲೆ ಬೆಳೆಗಳು ಹಾನಿಯಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಕಳೆದೆರಡು ದಿನಗಳಿಂದ ಬಿರುಗಾಳಿ ಸಹಿತ ಮಳೆ ಆಗಿದ್ದರಿಂದ ವಿಜಯಪುರ, ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಯ ಕೆಲವೆಡೆ ದ್ರಾಕ್ಷಿ ಫಸಲು ಹಾನಿಯಾಗಿದೆ. ಯಾದಗಿರಿ ಜಿಲ್ಲೆಯಲ್ಲಿ ಯಾದಗಿರಿ ಜಿಲ್ಲೆಯ ವಡಗೇರಾ ತಾಲೂಕಿನಾದ್ಯಂತ ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಗೆ ಹಿಂಗಾರು ಬೆಳೆಗಳಾದ ಜೋಳ, ಸಜ್ಜೆ ಕಡಲೆ ನೆಲಕಚ್ಚಿವೆ, ಬೆಳೆದ ಫಸಲು ಕೈಗೆ ಬರುವ ಹಂತದಲ್ಲಿದ್ದಾಗಲೇ ಸುರಿದ ಆಕಾಲಿಕ ಮಳೆ ರೈತರನ್ನು ಸಂಕಷ್ಟಕ್ಕೆ ನೂಕಿದೆ.

## ಕೀನ್ಯಾದಲ್ಲಿ ಭಾರತದ ಭಗವದ್ಗೀತೆ..!

• ಮಲ್ಲಮ್ಮ ನುಡಿ ವಾರ್ತೆ ಕೀನ್ಯಾ



ಕೀನ್ಯಾದಲ್ಲಿ ಯುವ ರಾಜಕೀಯ ನಾಯಕರೊಬ್ಬರು ಬಲಗೈಯಲ್ಲಿ ಭಗವದ್ಗೀತೆ ಹಿಡಿದು ಪ್ರಮಾಣ ವಚನ ಸ್ವೀಕರಿಸಿದ್ದು ಇಡೀ ವಿಶ್ವದ ಗಮನ ಸೆಳೆದಿದ್ದಾರೆ. ಮೊಂಬಾಸಾದ ಕೌಂಟಿಯಲ್ಲಿರುವ ವಿಧಾನಸಭೆಯಲ್ಲಿ ಈ ಚಾರಿತ್ರಿಕ ಘಟನೆ ನಡೆದಿದೆ. ಮೊಂಬಾಸಾ ಕೌಂ–ಟಿಯ ಚಂಗಮ್ವೆ ಕ್ಷೇತ್ರವನ್ನು ಪ್ರತಿನಿಧಿಸುವ ಯುವ ಶಾಸಕ ಕ್ಯಾಲೆಬ್ ಪ್ರಮಾಣವಚನ ಸ್ವೀಕರಿಸಲು ಭಗವದ್ಗೀತೆಯೊಂದಿಗೆ ಬಂದು ಬಲಗೈಯಲ್ಲಿ ಗೀತೆ ಹಿಡಿದು ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಈ ಕುರಿತು ಇಸ್ಕಾನ್ನ ಓಂಕಾರ ಮುಕುಂದ ದಾಸ್ ಮಾತನಾಡಿ, ಈ ನಡೆ ನಾಟಕೀಯವಲ್ಲ, ಪ್ರಚಾರಕ್ಕೂ ಅಲ್ಲ ಆ ಭಾವ ಅವರ ಹೃದಯಲ್ಲಿ ಹುಟ್ಟಿಕೊಂಡಿರುವುದು, ಅದೇ ಸತ್ಯ, ಹಾಗೂ ಇದು ಉದ್ದೇಶ ಪೂರ್ವಕ ನಡೆ ಎಂದಿದ್ದಾರೆ.

## ರಕ್ಷಣೆ–ಭಯೋತ್ಪಾದನೆ ತಡೆಗೆ ಅಸ್ತು

• ಮಲ್ಲಮ್ಮ ನುಡಿ ವಾರ್ತೆ ಟೆಲ್ಅವೀವ್



ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್ ಜೊತೆ ರಕ್ಷಣಾ ಒಪ್ಪಂದಕ್ಕೆ ಮುನ್ನುಡಿ ಬರೆದಿದ್ದಾರೆ. ಜೊತೆಗೆ ವ್ಯಾಪಾರ ಹಾಗೂ ಭಯೋತ್ಪಾದನಾ ನಿಗ್ರಹ ಸಂಬಂಧಗಳನ್ನು ಬಲಪಡಿಸುವುದಾಗಿ ಘೋಷಿಸಿದ್ದಾರೆ. ಈ ಒಪ್ಪಂದ ಉಭಯ ರಾಷ್ಟ್ರಗಳ ನಡುವಿನ ರಕ್ಷಣಾ ಸಂಬಂಧಗಳು ಪಾಲುದಾರಿಕೆಯ ಪ್ರಮುಖ ಆಧಾರಸ್ತಂಭ ಎಂದು ಪ್ರಧಾನಿ ಮೋದಿ ಅವರು ಒಂಬತ್ತು ವರ್ಷಗಳಲ್ಲಿ ಮೊದಲ ಬಾರಿಗೆ ಟೆಲ್ ಅವೀವ್‌ಗೆ ಆಗಮಿಸಿದ ಬಳಿಕ ಅವರು ಇಸ್ರೇಲ್ ಸಂಸತ್ತಿನ ನೆಸೆಟ್‌ನಲ್ಲಿ ಮಾಡಿದ ಭಾಷಣದಲ್ಲಿ ಈ ವಿಷಯ ತಿಳಿಸಿದ್ದಾರೆ. ಬೆಂಜಮಿನ್ ನೆತನ್ಯಾಹು ವ್ಯಾಪಾರವನ್ನು ವಿಸ್ತರಿಸಲು, ಹೂಡಿಕೆ ಹರಿವನ್ನು ಬಲಪಡಿಸಲು ಮತ್ತು ಜಂಟಿ ಮೂಲಸೌಕರ್ಯ ಅಭಿವೃದ್ಧಿಯನ್ನು ಉತ್ತೇಜಿಸಲು ಬದ್ಧರಾಗಿದ್ದಾರೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

# ಒಳ ಮೀಸಲಿನ ತಳಮಳ

### ಸಿಎಂ ನೇತೃತ್ವದಲ್ಲಿ ದಲಿತ ಸಚಿವರ ತುರ್ತು ಸಭೆ | ಭಾರಿ ಪ್ರಮಾಣದ ನೇಮಕಾತಿಗೆ ಸರ್ಕಾರ ತಾತ್ವಿಕ ಒಪ್ಪಿಗೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಒಳ ಮೀಸಲಾತಿ ವಿಷಯ ತಳಮಳ ಉಂಟುಮಾಡಿದೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಚಿವರ ಮಹತ್ವದ ಸಭೆ ನಡೆಯಿತು. ರಾಜ್ಯದಲ್ಲಿ ಬಾಕಿ ಇರುವ ಸರ್ಕಾರಿ ಹುದ್ದೆಗಳ ಭರ್ತಿ ಹಾಗೂ ಒಳಮೀಸಲಾತಿ ಜಾರಿ ಕುರಿತು ಗಂಭೀರ ಚರ್ಚೆ ನಡೆಸಲಾಯಿತು. ಒಳಮೀಸಲು ವಿಧೇಯಕಕ್ಕೆ ರಾಜಭವನದಲ್ಲಿ ತಡೆ ಉಂಟಾಗಿರುವ ಹಿನ್ನೆಲೆಯಲ್ಲಿ ಈ ಸಭೆ ಮಹತ್ವ ಪಡೆದಿದೆ.

**ಹುದ್ದೆ ಭರ್ತಿಗೆ ಅಸ್ತು:** ಇಲಾಖೆ ಸರ್ಕಾರಿ ಹುದ್ದೆಗಳ ನೇಮಕಾತಿಗೆ ಒತ್ತಡ ಮತ್ತು ಪ್ರತಿಭಟನೆಗಳು ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು 60,000 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗಿದೆ. ಯಾವ ಯಾವ ಇಲಾಖೆಗಳಲ್ಲಿ ಎಷ್ಟು ಹುದ್ದೆಗಳೆಂದು ಸಂಖ್ಯೆ ಅಂತಿಮಗೊಳಿಸಲು ವಿವಿಧ ಇಲಾಖೆಗಳೊಂದಿಗೆ ಚರ್ಚೆಗಳು ನಡೆಯುತ್ತಿವೆ.

**ಪ್ರತಿಭಟನೆಯ ಕಿಚ್ಚು:** ಧಾರವಾಡದಲ್ಲಿ ಸಾವಿರಾರು ಉದ್ಯೋಗಾಕಾಂಕ್ಷಿಗಳು ಬೀದಿಗಿಳಿದು, ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸದಿರುವುದಕ್ಕೆ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದರು. ಈ ಬೆಳವಣಿಗೆ ಬಳಿಕ ಭಾರಿ ಪ್ರಮಾಣದ ನೇಮಕಾತಿಗೆ ತಾತ್ವಿಕ ಒಪ್ಪಿಗೆ ನೀಡಲಾಗಿದೆ. ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಲು ನಾವು ಸಮ್ಮತಿ ನೀಡಿದ್ದೇವೆ ಎಂದಿದ್ದಾರೆ ಡಿಸಿಎಂ ಡಿಕೆಶಿ.



### ಮೂರು ಪ್ರಮುಖ ತೀರ್ಮಾನ

ಸಿಎಂ ಸಭೆಯ ಅಂತ್ಯದಲ್ಲಿ ಸರ್ಕಾರ ಮೂರು ಪ್ರಮುಖ ತೀರ್ಮಾನಗಳನ್ನು ಕೈಗೊಂಡಿದೆ. ಮೊದಲು: ಒಳಮೀಸಲಾತಿ ವಿಧೇಯಕಕ್ಕೆ ಕೂಡಲೇ ಅಂಕಿತ ಹಾಕುವಂತೆ ಗೌರ್ವನರ್‌ಗೆ ಮನವಿ ಮಾಡಲು ಸಚಿವರ ನಿಯೋಗ ತೆರಳುವುದು. ಎರಡನೆಯದಾಗಿ, ಪ್ರಸ್ತುತ ನ್ಯಾಯಾಲಯದಲ್ಲಿರುವ ಒಳಮೀಸಲು ಸಂಬಂಧಿತ ಕಾನೂನು ತೊಡಕು ನಿವಾರಿಸುವುದು, ಮೂರನೆಯದಾಗಿ, ನೇಮಕಾತಿ ಪ್ರಕ್ರಿಯೆಯನ್ನು ಹಂತ ಹಂತವಾಗಿ ಶೀಘ್ರವೇ ಆರಂಭಿಸಲು ತೀರ್ಮಾನಿಸಲಾಗಿದೆ.

### ರಾಜ್ಯಪಾಲರ ಆಕ್ಷೇಪಗಳೇನು..?

ರಾಜ್ಯಪಾಲರು ಪ್ರಮುಖವಾಗಿ ಸಮುದಾಯಗಳ ಹಿಂದುಳಿದಿರುವಿಕೆಯನ್ನು ಗುರುತಿಸಲು ಬಳಸಲಾದ ದತ್ತಾಂಶಗಳ ನೈಜತೆಯ ಬಗ್ಗೆ ಪ್ರಶ್ನಿಸಿದ್ದಾರೆ. ಆಯೋಗದ ಕಾರ್ಯವ್ಯಾಪ್ತಿ, ಜಾತಿಗಳ ನಡುವಿನ ಸಮಾನ ಗುಣ ಗುರುತಿಸುವ ಮಾನದಂಡಗಳ ಬಗ್ಗೆ ವಿವರ ಕೇಳಿದ್ದಾರೆ. ಒಂದೇ ರೀತಿಯ ಗುಣಲಕ್ಷಣವಿರುವ ಸಮುದಾಯಗಳು ಬೇರೆ ಬೇರೆ ಗುಂಪುಗಳಲ್ಲಿ ನಮೂದಾಗಿರುವುದು, ವಿವಿಗಳ ನೇಮಕ ರೋಸ್ಟರ್ ವ್ಯವಸ್ಥೆಯಲ್ಲಿನ ಲೋಪಗಳ ಬಗ್ಗೆ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

### ಮೀಸಲು ವಿಧೇಯಕ ವಾಪಸ್

ಕರ್ನಾಟಕ ಅನುಸೂಚಿತ ಜಾತಿಗಳ ಉಪವರ್ಗೀಕರಣ ವಿಧೇಯಕಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಅಂಕಿತ ಹಾಕಲು ನಿರಾಕರಿಸಿದ್ದರೆ. ಹಲವು ಸ್ಪಷ್ಟನೆ ಕೋರಿ ವಿಧೇಯಕವನ್ನು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ. ಇದರಿಂದಾಗಿ ಸರ್ಕಾರದ ಒಳಮೀಸಲು ಜಾ–ರಿಯ ಆಶಯಕ್ಕೆ ತಾತ್ಕಾಲಿಕ ಧಕ್ಕೆಯಾಗಿದೆ. ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ಶಿಫಾರಸ್ಸಿನಂತೆ ಶೇ. 6, 6 ಮತ್ತು 5ರ ಅನುಪಾತದಲ್ಲಿ ಕೋಟಾ ನಿಗದಿಪಡಿಸಲಾಗಿತ್ತು.

### ವಿಳಂಬದ ಆತಂಕ: ಸಚಿವ

ಸಭೆಯ ಬಳಿಕ ಡಿಸಿಎಂ ಅವರನ್ನು ಭೇಟಿ ಮಾಡಿದ ಸಚಿವ ಪ್ರಿಯಾಂಕ್, ಒಳಮೀಸಲಾತಿ ಬಿಲ್ ಬಾಕಿ ಇರುವ ವಿಚಾರವಾಗಿ ರಾಜ್ಯಪಾಲರನ್ನು ಭೇಟಿ ಮಾಡಿ ಚರ್ಚಿಸಿದ್ದಾಗಿ ತಿಳಿಸಿದ್ದಾರೆ. ಯುವಕರಿಗೆ ನೇಮಕಾತಿಯಲ್ಲಿ ಅನ್ಯಾಯವಾಗಬಾರದು. ರಾಜ್ಯಪಾಲರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅವರಿಗೆ ಕೆಲವು ಕಾನೂನಾತ್ಮಕ ಪ್ರಶ್ನೆಗಳಿದ್ದು, ಅದನ್ನು ಲೀಗಲ್ ಟೀಮ್ ಜೊತೆ ಚರ್ಚಿಸಿ ಕ್ಲಿಯರ್ ಮಾಡುವುದಾಗಿ ಹೇಳಿದ್ದಾರೆ ಎಂದು ಖರ್ಗೆ ಮಾಹಿತಿ ನೀಡಿದ್ದಾರೆ.


## ಸಿಎಂ-ಉಪ ಮುಖ್ಯಮಂತ್ರಿ ಕುರ್ಚಿ ಕದನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಕಾಂಗ್ರೆಸ್ ಸರ್ಕಾರವು ಇಲಾಖೆಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಚುನಾವಣಾ ಭರವಸೆಯನ್ನು ಪಾಲಿಸಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಟೀಕಿಸಿದ್ದಾರೆ.


ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಎಲ್ಲಾ ಖಾಲಿ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ತಮ್ಮ ಚುನಾವಣಾಪೂರ್ವ ಭರವಸೆ ನೀಡಿದ್ದರು. ರಾಹುಲ್ ಗಾಂಧಿ ಅವರು ಬೆಳಗಾವಿಗೆ ಬಂದಾಗ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 2.5 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ ಎಂದು ಹೇಳಿದ್ದರು. ಆದರೆ ಮುಖ್ಯಮಂತ್ರಿ ಎಲ್ಲವನ್ನೂ ಮರೆತಂತಿದ್ದಾರೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಡುವಿನ 'ಕುರ್ಚಿ ಯುದ್ಧ'ದಿಂದ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅವರಿಗೆ ಸಮಯವೇ ಇಲ್ಲ ಎಂದು ದೂರಿದ್ದಾರೆ.







## ಕಲಬುರಗಿ ಡಿ.ಸಿ ಕಾರು ಜಪ್ತಿ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಗರ ವ್ಯಾಪ್ತಿಯಲ್ಲಿ ಭೂಸ್ವಾಧೀನ ಮಾಡಿಕೊಂಡ ಬಳಿಕ ಹಲವು ವರ್ಷ ಕಳೆದರೂ ಪರಿಹಾರ ನೀಡದೆ ವಿಳಂಬ ಮಾಡಿರುವುದಕ್ಕಾಗಿ ಜಿಲ್ಲಾಧಿಕಾರಿಗಳ ಕಾರು ಜಪ್ತಿ ಮಾಡಿಕೊಂಡಿರುವ ಘಟನೆ ನಡೆದಿದೆ. ಪ್ರಧಾನ ಸಿವಿಲ್ ನ್ಯಾಯಾಲಯದ ದಿವಾಣಿ ಹಿರಿಯ ಶ್ರೇಣಿ ನ್ಯಾಯಾಧೀಶರು, ಜಿಲ್ಲಾಧಿಕಾರಿಗಳ ಕಾರು ಆಗಿರುವ ಇನ್ನೋವಾ ಕ್ರಿಷ್ಟಾ ಕಾರನ್ನು ಜಪ್ತಿ ಮಾಡುವಂತೆ ಆದೇಶಿಸಿದ್ದಾರೆ. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರು, ಡಿ.ಸಿ ಕಾರ್‌ಜಪ್ತಿ ಮಾಡಿಕೊಳ್ಳಲು ಆದೇಶ ಹೊರಡಿಸಿದ್ದಾರೆ. ಮಹಾನಗರ ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತ ಸಾಹಿತ್ಯ ಆಲದಕಟ್ಟಿ ಅವರು ವಕೀಲರ ಮನವೊಲಿಸಲು ಮುಂದಾಗಿದ್ದರು. ಪ್ರಕಾಶ್ ಮಲಕಪ್ಪ ಅವರು ತಮ್ಮ ಭೂಮಿ ಸ್ವಾಧೀನಪಡಿಸಿಕೊಂಡು ಪರಿಹಾರ ನೀಡಿಲ್ಲ ಎಂದು ನ್ಯಾಯಾಲಯಕ್ಕೆ ಮೊರೆ ಹೋಗಿದ್ದರು.

## 28 ಸೇವೆಗಳ ತ್ವರಿತ ಜಾರಿಗೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯದಲ್ಲಿ ಸುಲಲಿತ ವಾಣಿಜ್ಯ ಸಂಸ್ಕೃತಿಯನ್ನು ತರಲು ರಾಜ್ಯ ಸರಕಾರವು ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದೆ. ಈ ನಿಟ್ಟಿನಲ್ಲಿ ಇನ್ನೂ ಬಾಕಿ ಇರುವ 28 ಸೇವೆಗಳನ್ನು ಸುಗಮಗೊಳಿಸಿ, ಕೈಗಾರಿಕಾ ಸ್ನೇಹಿಯನ್ನಾಗಿ ಮಾಡಲಾಗುವುದು. ಇದರ ಭಾಗವಾಗಿ ಅಗತ್ಯತಿದ್ದುಪಡಿಗಳನ್ನು ತ್ವರಿತವಾಗಿ ಮಾಡಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದರು.



ಈ ಉದ್ದೇಶದಿಂದ ಅವರು ಗುರುವಾರ ವಿಧಾನಸೌದದ ಸಮ್ಮೇಳನ ಸಭಾಂಗಣದಲ್ಲಿ ಇಲ್ಲಿ ಸುಲಲಿತ ವಾಣಿಜ್ಯ ಸಂಸ್ಕೃತಿ ಮತ್ತು ಏಕಗವಾಕ್ಷಿ ಸಮಿತಿಗಳ ಮಹತ್ವದ ಸಭೆ ನಡೆಸಿದರು. ಎಲ್ಲ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಬಳಿಕ ಮಾತನಾಡಿದ ಸಚಿವರು, ನಮಗೆ ನೆರೆಹೊರೆ ರಾಜ್ಯಗಳಿಂದ ತೀವ್ರಸ್ಪರ್ಧೆ ಇದೆ. ನಾವು ಅಲ್ಲಿಯ ನೀತಿ ನಿಯಮಾವಳಿಗಳನ್ನೂ ಅಧ್ಯಯನ ಮಾಡಿದ್ದು, ಅದಕ್ಕಿಂತ ಉತ್ತಮವಾದ ಮತ್ತು ಕೈಗಾರಿಕಾ ಸ್ನೇಹಿಯಾದ ವ್ಯವಸ್ಥೆಯನ್ನು ತರಲು ಪಣ ತೊಟ್ಟಿದ್ದೇವೆ. ಏಕಗವಾಕ್ಷಿ ಯೋಜನೆಯಡಿ ಇದುವರೆಗೆ 20 ಇಲಾಖೆಗಳ 115 ಸೇವೆಗಳನ್ನು ಜೋಡಣೆ ಮಾಡಿದ್ದು, ಬಾಕಿ ಇರುವ 28 ಸೇವೆಗಳನ್ನು ಆದ್ಯತಾ ಕ್ಷೇತ್ರಗಳೆಂದು ಪರಿಗಣಿಸಿ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ ಎಂದು ವಿವರಿಸಿದ್ದಾರೆ.

# ಹೇಮರೆಡ್ಡಿ ಮಲ್ಲಮ್ಮ ಸಮುದಾಯ ಭವನ ಕಾಮಗಾರಿ: ಗುದ್ದಲಿ ಪೂಜೆ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ಕ್ಷೇತ್ರದ ಸಮಗ್ರ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ಕೈಗೆತ್ತಿಕೊಳ್ಳುತ್ತಿರುವ ಕಾಮಗಾರಿಗಳು ಜನ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಭವಿಷ್ಯದ ಪ್ರಗತಿಗೆ ಬಲವಾದ ಅಡಿಪಾಯವಾಗಿವೆ ಎಂದು ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಹೇಳಿದರು. ತಾಲೂಕಿನ ನಿರ್ಣಾ ಗ್ರಾಮದ ಶ್ರೀ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದ ಸಮೀಪ ಸುಮಾರು 20 ಲಕ್ಷ ರೂಪಾಯಿ ವೆಚ್ಚದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ನನ್ನ ಮೊದಲ ಆದ್ಯತೆ. ಸಾರ್ವಜನಿಕರಿಂದ ಬರುತ್ತಿರುವ ಕುಂದುಕೊರತೆಗಳ ಅಹವಾಲುಗಳನ್ನು ತಕ್ಷಣ ಸ್ವೀಕರಿಸಿ, ಸಂಬಂಧ ಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಶೀಘ್ರ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಜನರ ಮೂಲಭೂತ ಸೌಲಭ್ಯಗಳು, ರಸ್ತೆ, ಕುಡಿಯುವ ನೀರು, ವಿದ್ಯುತ್, ಶಿಕ್ಷಣ ಹಾಗೂ ಆರೋಗ್ಯ ಸೇವೆಗಳ ಸಂಬಂಧಿತ ಸಮಸ್ಯೆಗಳಿಗೆ ವಿಶೇಷ ಗಮನ ನೀಡಲಾಗುತ್ತಿದ್ದು, ಶಾಶ್ವತ ಪರಿಹಾರಕ್ಕಾಗಿ ಯೋಜಿತ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಜನಸೇವೆಯೇ ನನ್ನ ಮುಖ್ಯ ಗುರಿಯಾಗಿದ್ದು, ಜನರು ತಮ್ಮ ಸಮಸ್ಯೆಗಳನ್ನು ನೇರವಾಗಿ ತಿಳಿಸಬಹುದು ಎಂದು ತಿಳಿಸಿದರು.

ಸಮುದಾಯ ಭವನ ಕಾಮಗಾರಿ ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲೂಕ ಪಂಚಾಯತ ಮಾಜಿ ಅಧ್ಯಕ್ಷ ಸಂಜೀವರೆಡ್ಡಿ ಮಾತನಾಡಿ, ನಮ್ಮ ಸಮಾಜ ಜನರ ಕನಸು ಶಾಸಕರು ನನಸು ಮಾಡುತ್ತಿರುವುದು ತುಂಬಾ ಸಂತೋಷವಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಶಂಕರಾವ ಪಾಟೀಲ್, ರಾಜ–ರೆಡ್ಡಿ, ಮಾಣಿಕಪ್ಪ ಖಾಶೆಂಪುರ, ಶ್ರೀನಿವಾಸ ಪೊದ್ದಾರ, ವೆಂಕಟರೆಡ್ಡಿ, ನಾರಾಯಣ ರೆಡ್ಡಿ, ಚನ್ನಬಸವ ಸೊಪ್ಪಣ್ಣೊರ, ರವಿಸ್ವಾಮಿ, ನರ್ಸಾರೆಡ್ಡಿ ಇದ್ದಾರೆಡ್ಡಿ, ಕೃಷ್ಣರೆಡ್ಡಿ, ಸಂತೋಷ ರೆಡ್ಡಿ, ಜಗನ್ನಾಥರೆಡ್ಡಿ ಏಖೇಳ್ಳಿ, ಶಿವರಾಜ ಬಶೆಟ್ಟಿ, ವೀರಶೆಟ್ಟಿ ಭದ್ರಪ್ಪನೋರ, ಶಿವ ಶರಣಪ್ಪ ಪೊಲೀಸ್ ಪಾಟೀಲ್, ಶಂಕರ ಉದಗೀರೆ, ವೀರಶೆಟ್ಟಿ ನಾಗವಾರ, ವಿಠಲ ರೆಡ್ಡಿ ಚೂಡಾ, ವಿಜಯ–ರೆಡ್ಡಿ., ಅನೀಲರೆಡ್ಡಿ ಲಚ್ಚನಗಾರ್, ಮಚೇಂದ್ರರೆಡ್ಡಿ, ಅಶೋಕ್ ರೆಡ್ಡಿ, ವೀರಪ್ಪ ಮಂಗಲಗಿ, ಭರತರೆಡ್ಡಿ ಚಿಟನಳ್ಳಿ, ದೀಪಕ ರೆಡ್ಡಿ, ಶೇಷಾರೆಡ್ಡಿ, ಪ್ರಶಾಂತ ರೆಡ್ಡಿ, ವೆಂಕಟ ರೆಡ್ಡಿ, ಸುನೀತಾ ಮಂಗಲಗಿ, ಸುಪ್ರೀತ್ ನಾಗರಾವ ಸೇರಿದಂತೆ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಡಾ. ರವಿ ಸ್ವಾಮಿ ನಿರ್ಣಾ ನಿರೂಪಿಸಿದರು. ಗುಂಡುರೆಡ್ಡಿ ಟೇಕಳಿ ವಂದಿಸಿದರು.

### ಜಗದ್ಗುರು ರೇಣುಕಾಚಾರ್ಯರ ಜಯಂತಿ: ಅದ್ಧೂರಿ ಮೆರವಣಿಗೆ

# ಜಾತಿ ಮತ ಪಂಥಗಳ ಭೇದವಿಲ್ಲದೆ ಸರ್ವರೂ ಪಾಲ್ಗೊಳ್ಳಿ: ರಾಜಶೇಖರ ಪಾಟೀಲ



• **ಮಲ್ಲಮ್ಮ ನುಡಿ ವಾರ್ತೆ ಬೀದರ**

ಮಾರ್ಚ್ 1ರಂದು ಜಿಲ್ಲಾಡಳಿತದ ವತಿಯಿಂದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಸಮಾರಂಭವನ್ನು ನಗರದ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಆಚರಣೆ ಮಾಡಲಾಗುತ್ತಿದೆ. ಆದ್ದರಿಂದ ಜಿಲ್ಲೆಯ ಜನತೆ ಯಾವುದೇ ಜಾತಿ ಮತ ಪಂಥಗಳ ಹಾಗೂ ಪಕ್ಷಭೇದವಿಲ್ಲದೆ ಪ್ರತಿಯೊಬ್ಬರೂ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಮಾಜಿ ಸಚಿವರು ಹಾಗೂ ಜಗದ್ಗುರು ರೇಣುಕಾಚಾರ್ಯರ ಜಯಂತಿ ಉತ್ಸವದ ಸಮಿತಿಯ ಅಧ್ಯಕ್ಷ ರಾಜ ರಾಜಶೇಖರ ಪಾಟೀಲ ಹುಮನಾಬಾದ ತಿಳಿಸಿದರು.

ಈ ಕುರಿತು ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ಕರೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಕಳೆದ ಹಲವು ವರ್ಷಗಳಿಂದ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಜಿಲ್ಲೆಯಲ್ಲಿ ಆಚರಣೆ ಮಾಡಿಕೊಂಡು ಬರಲಾಗುತಿತ್ತು. ಇದೀಗ ಮೂರು ವರ್ಷಗಳಿಂದ ಸರ್ಕಾರದ ವತಿಯಿಂದ ಆಚರಣೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಈ ಜಯಂತಿ ಉತ್ಸವದಲ್ಲಿ ಜಿಲ್ಲೆಯ ಮಠಾಧೀಶರು, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಸಂಸದ ಸಾಗರ ಖಂಡ್ರೆ ಸೇರಿದಂತೆ ಜಿಲ್ಲೆಯ ಎಲ್ಲಾ ಕ್ಷೇತ್ರದ ಶಾಸಕರು, ವಿಧಾನ ಪರಿಷತ್ ಸದಸ್ಯರು, ರಾಜಕೀಯ ಧುರೀಣರು, ಸಮಾಜದ ಗಣ್ಯರು, ಸಾಹಿತಿಗಳು, ಕಲಾವಿದರು, ಮಹಿಳೆಯರು, ಯುವಕರು ಹಾಗೂ ಮಕ್ಕಳು ಪಾಲ್ಗೊಳ್ಳುತ್ತಿದ್ದಾರೆ. ಆದ್ದರಿಂದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಸಂಭ್ರಮದಿಂದ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ರಾಜಶೇಖರ ಪಾಟೀಲ ಅವರು ಕೋರಿದರು.

ಜಗದ್ಗುರು ರೇಣುಕಾಚಾರ್ಯರ ಜಯಂತಿ ಉತ್ಸವ ಸಮಿತಿ ಕಾರ್ಯಾಧ್ಯಕ್ಷರು ಹಾಗೂ ಜಂಗಮ ಸಮಾಜದ ಜಿಲ್ಲಾಧ್ಯಕ್ಷ ಸಿದ್ರಾಮಯ್ಯ ಸ್ವಾಮಿ ಮಾತನಾಡಿ ಮಾರ್ಚ್ 1 ರಂದು ಬೆಳಿಗ್ಗೆ 8 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪೂಜೆ ಸಲ್ಲಿಸಿದ ಬಳಿಕ, ಬೆ.9 ಗಂಟೆಗೆ ನಗರದ ಗಣೇಶ ಮೈದಾನದಿಂದ ಮೆರವಣಿಗೆ ವಿವಿಧ ಕಲಾತಂಡಗಳೊಂದಿಗೆ ಆರಂಭವಾಗಿ ಹರಳಯ್ಯ ವೃತ್ತ, ಶಿವಾಜಿ ವೃತ್ತ, ಅಂಬೇಡ್ಕರ ವೃತ್ತ, ಬಸವೇಶ್ವರ ವೃತ್ತ, ಜನರಲ್ ಕಾರಿಯಪ್ಪ ವೃತ್ತ ಮಾರ್ಗವಾಗಿ ರಂಗಮಂದಿರ ತಲುಪಲಿದೆ. ಅಲ್ಲಿ ಕಾರ್ಯಕ್ರಮದ ಉದ್ಘಾಟನೆ, ವಿಶೇಷ ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು, ಅತಿಥಿ ಗಣ್ಯರ ನುಡಿಗಳು ಹಾಗೂ ಸಮಾರೋಪ ಸಮಾರಂಭ ಜರುಗಲಿದೆ. ಆದ್ದ–ರಿಂದ ಜಿಲ್ಲೆಯ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಸಿದರು.

ಇದೇ ವೇಳೆ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಸಮಿತಿಯ ಪದಾಧಿಕಾರಿಗಳಾದ ಗಂಗಾಧರ ಶಾಸ್ತ್ರಿ, ಅಂಬರೀಶ ಸ್ವಾಮಿ, ಮಲ್ಲಿಕಾರ್ಜುನ ಮಾಶೆಟ್ಟಿ, ಶ್ರೀಕಾಂತ ಸ್ವಾಮಿ ಸೋಲಪುರ, ಅಬ್ದುಲ್ ಮನ್ನಾನ್ ಸೇಠ್, ವೈಜಿನಾಥ ಯನಗುಂದಿ, ರೇವಣಸಿದ್ದಯ್ಯ ಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



# ಗ್ಯಾರಂಟಿ ಯೋಜನೆಗಳು: ನಿಜವಾದ ಅಗತ್ಯವಿರುವವರಿಗೆ ತಲುಪಲಿ

ರಾಜ್ಯ ಸರ್ಕಾರಗಳು ಜನಪರ ಆಡಳಿತದ ಹೆಸರಿನಲ್ಲಿ ಅನೇಕ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುತ್ತಿವೆ. ವಿಶೇಷವಾಗಿ ಏಚಿಡಿಟಚಿಣಚಿಇಚಿ ರಾಜ್ಯದಲ್ಲಿ ಜಾರಿಯಲ್ಲಿರುವ ಗೃಹಲಕ್ಷ್ಮಿ, ಅನ್ನಭಾಗ್ಯ, ಉಚಿತ ವಿದ್ಯುತ್ ಮೊದಲಾದ ಯೋಜನೆಗಳು ಬಡಜನರಿಗೆ ನೆರವಾಗುವ ಉದ್ದೇಶದಿಂದ ರೂಪುಗೊಂಡಿವೆ. ಆದರೆ, ಒಂದು ಪ್ರಮುಖ ಪ್ರಶ್ನೆ ಈಗ ಸಮಾಜದಲ್ಲಿ ಕೇಳಿಬರುತ್ತಿದೆ ಈ ಗ್ಯಾರಂಟಿ ಯೋಜನೆಗಳು ನಿಜವಾಗಿಯೂ ಅಗತ್ಯವಿರುವವರಿಗೆ ತಲುಪುತ್ತಿವೆಯೇ? ಅಥವಾ ಶ್ರೀಮಂತರಿಗೂ, ಆದಾಯ ತೆರಿಗೆ ಪಾವತಿ ಮಾಡುವವರಿಗೂ, ನಿವೃತ್ತ ಉನ್ನತ ಅಧಿಕಾರಿಗಳಿಗೂ ಲಾಭವಾಗುತ್ತಿವೆಯೇ?

ಸರ್ಕಾರದ ಕಲ್ಯಾಣ ಯೋಜನೆಗಳ ಮೂಲ ಉದ್ದೇಶ ಸಾಮಾಜಿಕ ಅಸಮಾನತೆಯನ್ನು ಕಡಿಮೆ ಮಾಡುವುದು. ದಿನಗೂಲಿ ಕಾರ್ಮಿಕರು, ಸಣ್ಣ ರೈತರು, ವೃದ್ಧರು, ವಿಧವೆಯರು, ಬಡ ಕುಟುಂಬಗಳು ಇವರೆಲ್ಲರ ಜೀವನಮಟ್ಟವನ್ನು ಸುಧಾರಿಸುವುದು ಸರ್ಕಾರದ ಜವಾಬ್ದಾರಿ. ಆದರೆ ಆದಾಯ ತೆರಿಗೆ ಪಾವತಿ ಮಾಡುವವರು, ತಿಂಗಳಿಗೆ ಉತ್ತಮ ಪಿಂಚಣಿ ಪಡೆಯುವ ನಿವೃತ್ತ ಅಧಿಕಾರಿಗಳು, ಆರ್ಥಿಕವಾಗಿ ಸಬಲ ಕುಟುಂಬಗಳು ಕೂಡ ಈ ಸೌಲಭ್ಯಗಳನ್ನು ಪಡೆಯುವಂತಾದರೆ, ಅದು ಯೋಜನೆಯ ಆತ್ಮಕ್ಕೆ ವಿರುದ್ಧವಾಗುತ್ತದೆ.

• **ಇದರಿಂದ ಎರಡು ಪ್ರಮುಖ ಸಮಸ್ಯೆಗಳು ಉಂಟಾಗುತ್ತವೆ:**

1. ಸರ್ಕಾರದ ಮೇಲೆ ಆರ್ಥಿಕ ಭಾರ ಈಗಾಗಲೇ ಸಾಲದ ಹೊರೆ ಹೊತ್ತಿರುವ ಸರ್ಕಾರಕ್ಕೆ ಎಲ್ಲ ವರ್ಗಗಳಿಗೂ ಉಚಿತ ಸೌಲಭ್ಯ ನೀಡುವುದು ದೀರ್ಘಕಾಲಿಕವಾಗಿ ತಾಳಲಾಗದ ಭಾರವಾಗಬಹುದು. ಅಭಿವೃದ್ಧಿ ಕಾಮಗಾರಿಗಳು, ಮೂಲಸೌಕರ್ಯ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಮೀಸಲಾದ ಅನುದಾನ ಕಡಿಮೆಯಾಗುವ ಅಪಾಯವಿದೆ.

2. ನ್ಯಾಯದ ಪ್ರಶ್ನೆ ನಿಜವಾಗಿಯೂ ಅವಶ್ಯಕತೆ ಇರುವ ಬಡಜನರಿಗೆ ತಲುಪಬೇಕಾದ ನೆರವು, ಆರ್ಥಿಕವಾಗಿ ಸಬಲರಿಗೆ ಸಿಗುವುದು ಸಾಮಾಜಿಕ ನ್ಯಾಯಕ್ಕೆ ಧಕ್ಕೆ ತರುತ್ತದೆ.

ಹೀಗಾಗಿ, ಗ್ಯಾರಂಟಿ ಯೋಜನೆಗಳಲ್ಲಿ ಆದಾಯ ಆಧಾರಿತ ಅರ್ಹತೆ ಕಡ್ಡಾಯಗೊಳಿಸಬೇಕು. ತೆರಿಗೆ ಪಾವತಿ ಮಾಡುವವರು, ಹೆಚ್ಚಿನ ಪಿಂಚಣಿ ಪಡೆಯುವವರು, ನಿಗದಿತ ಮಿತಿ ಮೀರಿ ಆದಾಯ ಹೊಂದಿರುವವರು ಸ್ವಯಂಪ್ರೇರಿತವಾಗಿ ಯೋಜನೆಗಳಿಂದ ಹೊರಗುಳಿಯುವ ವ್ಯವಸ್ಥೆ ರೂಪಿಸಬೇಕು. ಡೇಟಾ ಆಧಾರಿತ ಪರಿಶೀಲನೆ, ಪಾರದರ್ಶಕ ಆಯ್ಕೆ ಪ್ರಕ್ರಿಯೆ, ಸಾಮಾಜಿಕ ತಪಾಸಣೆ . **ಇವುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.**

ಜನಪರ ಯೋಜನೆಗಳು ಶಾಶ್ವತವಾಗಿರಬೇಕಾದರೆ ಅವು ಗುರಿತಪ್ಪದೇ ಜಾರಿಯಾಗಬೇಕು. ಎಲ್ಲರಿಗೂ ಉಚಿತ ಎಂಬ ಧೋರಣೆ ಜನಪ್ರಿಯವಾಗಬಹುದು, ಆದರೆ ಆರ್ಥಿಕವಾಗಿ ಸಮರ್ಥವಲ್ಲ. ಕಲ್ಯಾಣ ರಾಜ್ಯದ ತತ್ವವು ಬಡವರ ಕಣ್ಣೀರು ಒರೆಸುವುದೇ ಹೊರತು, ಶ್ರೀಮಂತರಿಗೆ ಮತ್ತಷ್ಟು ಸೌಲಭ್ಯ ನೀಡುವುದಲ್ಲ.

ಸರ್ಕಾರಗಳು ಜನರ ಭಾವನೆಗಿಂತಲೂ ರಾಜ್ಯದ ಆರ್ಥಿಕ ಸ್ಥಿರತೆಯನ್ನು ಗಮನದಲ್ಲಿಟ್ಟುಕೊಂಡು, ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಪುನರ್‌ವಿಮರ್ಶೆ ಮಾಡಬೇಕು. ಆಗ ಮಾತ್ರ ಜನಪರ ಆಡಳಿತ ಮತ್ತು ಆರ್ಥಿಕ ಶಿಸ್ತಿನ ನಡುವೆ ಸಮತೋಲನ ಸಾಧಿಸಬಹುದು.

# 15ನೇ ಘಟಿಕೋತ್ಸವ



• **ಮಲ್ಲಮ್ಮ ನುಡಿ ವಾರ್ತೆ ಬೀದರ**

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರನ 15ನೇ ಘಟಿಕೋತ್ಸವವನ್ನು ಫೆಬ್ರವರಿ.27 ರಂದು ಬೆಳಿಗ್ಗೆ 10 ಗಂಟೆಗೆ ವಿಶ್ವವಿದ್ಯಾಲಯದ ಆಡಿಟೊರಿಯಂ, ನಂದಿನಗರ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೋ. ಕೆ. ಸಿ. ವೀರಣ್ಣ ಹೇಳಿದರು.

ಅವರು ಗುರವಾರ ನಗರದ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು.

ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರು 15ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ. ಅತಿಥಿಗಳಾಗಿ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಹಾಗೂ ವಿಶ್ವವಿದ್ಯಾಲಯದ ಸಹಕುಲಾಧಿಪತಿಗಳಾದ ಕೆ. ವೆಂಕಟೇಶ, ಮುಖ್ಯ ಅಥಿಗಳಾಗಿ ಇಕ್ರಿಸ್ಯಾಟ್, ಹೈದ್ರಾಬಾದನ ಮಹಾನಿರ್ದೇಶಕ ಡಾ. ಹಿಮಾಂಶು ಪಾಠಕ ಭಾಗವಹಿಸಲಿದ್ದಾರೆ.

# ನಾಗಮಾರಪಳ್ಳಿ ಸಹಕಾರ ಆಸ್ಪತ್ರೆಯಿಂದ ಚಿಲ್ಲರ್ಗಿಯಲ್ಲಿ ಉಚಿತ ಆರೋಗ್ಯ ಶಿಬಿರ




• **ಮಲ್ಲಮ್ಮ ನುಡಿ ವಾರ್ತೆ ಬೀದರ**

ತಾಲೂಕಿನ ಚಿಲ್ಲರ್ಗಿ ಗ್ರಾಮದ ಹನುಮಾನ ಮಂದಿರ ಬಳಿ ಬೀದರಿನ ಗುರುಪಾದಪ್ಪ ನಾಗಮಾರಪಳ್ಳಿ ಮಲ್ಟಿಸೂಪರ್ ಸ್ಪೇಷಾಲಿಟಿ ಸಹಕಾರ ಆಸ್ಪತ್ರೆಯಿಂದ ವಿಶೇಷ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು.

ನಾಗಮಾರಪಳ್ಳಿ ಆಸ್ಪತ್ರೆಯ ತಜ್ಞ ವೈದ್ಯರು, ಆರೋಗ್ಯ ತಪಾಸಣೆ ನಡೆಸಿದರು. ಗ್ರಾಮೀಣ ಪ್ರದೇಶದಲ್ಲಿ ತಜ್ಞವೈದ್ಯರಿಂದ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಂಡಿರುವುದು ಮಾದರಿಯಾಗಿದೆ ಎಂದು ಗ್ರಾಮಸ್ಥರು ಮೆಚ್ಚುಗೆವ್ಯಕ್ತಪಡಿಸಿದರು. ನಾಗಮಾರಪಳ್ಳಿ ಆಸ್ಪತ್ರೆಯು ಜನಾರೋಗ್ಯ ರಕ್ಷಣೆಗೆ ಕಾಳಜಿಯಿಂದ ಶ್ರಮಿಸುತ್ತಿದೆ ಎಂದು ಶ್ಲಾಘಿಸಿದರು.

> “ಪ್ರತಿಯೊಬ್ಬರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಗ್ರಾಮೀಣ ಪ್ರದೇಶದಲ್ಲಿ ತಜ್ಞವೈದ್ಯರಿಂದ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಂಡಿರುವುದು ಮಾದರಿಯಾಗಿದೆ ಗುರುಪಾದಪ್ಪ ನಾಗಮಾರಪಳ್ಳಿ ಮಲ್ಟಿಸೂಪರ್ ಸ್ಪೇಷಾಲಿಟಿ ಸಹಕಾರ ಆಸ್ಪತ್ರೆ
>
> **ತರುಣ್ ಸೂರ್ಯಕಾಂತ ಗುರುಪಾದಪ್ಪ ನಾಗಮಾರಪಳ್ಳಿ ಮಲ್ಟಿಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯ ಅಧ್ಯಕ್ಷರು**

ಆಸ್ಪತ್ರೆಯ ಅಧ್ಯಕ್ಷರಾದ ತರುಣ್ ಸೂರ್ಯಕಾಂತ ನಾಗಮಾರಪಳ್ಳಿ ಅವರು ಮಾತನಾಡಿ, ಪ್ರತಿಯೊಬ್ಬರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಪ್ರಮುಖರಾದ ವಿಜಯಕುಮಾರ ಚಂದ್ರಪ್ಪ ಪಾಟೀಲ್, ಅಶೋಕ ಪಾಟಿಲ್, ವಿಲ್ಸನ್ ಚೇರಮನ್, ಮಾಜಿ ತಾಪಂ ಸದಸ್ಯ ದಿಲೀಪ್ ಜಾಂಪಾಡೆ, ಶ್ರೀಕಾಂತ ಪಾಟೀಲ್, ಸಚಿನ್ ಜಾಂಪಾಡೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ಶಿಬಿರಲ್ಲಿ 160 ಕ್ಕೂ ಹೆಚ್ಚು ಜನರ ಆರೋಗ್ಯ ತಪಾಸಣೆ ಮಾಡಲಾಯಿತು.

# ತ್ಯಾಜ್ಯ ವಿಲೇವಾರಿ ಬೇರೆಕಡೆ ಸ್ಥಳಾಂತರಿಸಲು ಭೀಮರೆಡ್ಡಿ ಸಿಂಧನಕೇರಾ ಮನವಿ

**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ**

ತಾಲ್ಲೂಕಿನ ಸಿಂಧನಕೇರಾ ಗ್ರಾಮದಲ್ಲಿ ಅಕ್ರಮ ತ್ಯಾಜ್ಯ ವಿಲೇವಾರಿ ಪರಿಸರ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಗಂಭೀರ ಹಾನಿ ಕುರಿತು ತಕ್ಷಣ ಕಾನೂನು ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಕಾರ್ಯಕರ್ತರಾದ ಭೀಮರೆಡ್ಡಿ ಸಿಂಧನಕೇರಾ ಹಾಗೂ ಯುವರಾಜ್ ಎಸ್ ಐಹೋಳ್ಳಿ ಸಿಂಧನಕೇರಾ ರವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಛೇರಿಯ ಸದಸ್ಯ ಹಾಗೂ ಕಾರ್ಯದರ್ಶಿರವರಿಗೆ ಬರೆದ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಗ್ರಾಮದಲ್ಲಿನ 200 ಮೀಟರ್ ದೂರ ಪ್ರದೇಶದಲ್ಲಿ ನಿರಂತರವಾಗಿ ನಿಯಮ ವಿರುದ್ಧವಾಗಿ ಘನ/ವೈದ್ಯಕೀಯ/ಕೈಗಾರಿಕಾ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗುತ್ತಿದೆ.

ಈ ಅಕ್ರಮ ಚಟುವಟಿಕೆಗಳಿಂದ ಭೂಮಿಯ ಮತ್ತು ನೀರಿನ ಮಾಲಿನ್ಯ ಉಂಟಾಗಿದೆ.

ವಾಯು ಮಾಲಿನ್ಯ ಮತ್ತು ದುರ್ವಾಸನೆ ವ್ಯಾಪಕವಾಗಿದೆ. ಗ್ರಾಮದಲ್ಲಿ ಸೊಳ್ಳೆಗಳ ಹೆಚ್ಚಳದಿಂದ ಸಾಂಕ್ರಾಮಿಕ ರೋಗ ಪ್ರಕರಣಗಳು ಹೆಚ್ಚುತ್ತಿವೆ. ಜನರ ಆರೋಗ್ಯ ಹಾಗೂ ಜೀವನ ಮಟ್ಟಕ್ಕೆ ಗಂಭೀರ ಹಾನಿ ಉಂಟಾಗಿದೆ.

ಈ ಕೃತ್ಯವು ಪರಿಸರ ಸಂರಕ್ಷಣೆ ಕಾಯ್ದೆ, 1986, ವಾಯು (ಮಾಲಿನ್ಯ ನಿಯಂತ್ರಣ) ಕಾಯ್ದೆ, 1981 ಹಾಗೂ ನೀರು (ಮಾಲಿನ್ಯ ನಿಯಂತ್ರಣ) ಕಾಯ್ದೆ, 1974 ರ ಸ್ಪಷ್ಟ ಉಲ್ಲಂಘನೆಯಾಗಿದೆ. ಅದರಂತೆ, ನಿಮ್ಮ ಗೌರವಾನ್ವಿತ ಮಂಡಳಿಯು ತಕ್ಷಣ: ಸ್ಥಳಕ್ಕೆ ಪರಿಶೀಲನಾ ತಂಡ ಕಳುಹಿಸಬೇಕು ನೀರು/ವಾಯು ಮಾದರಿ ಸಂಗ್ರಹಿಸಿ ಪ್ರಯೋಗಾಲಯ ಪರೀಕ್ಷೆ ನಡೆಸಬೇಕು

ಹೊಣೆಗಾರ ವ್ಯಕ್ತಿ/ಸಂಸ್ಥೆಗಳ ವಿರುದ್ಧ ದಂಡಾತ್ಮಕ ಕ್ರಮ ಕೈಗೊಳ್ಳಬೇಕು,

ಅಕ್ರಮ ತ್ಯಾಜ್ಯ ವಿಲೇವಾರಿಯನ್ನು ತಕ್ಷಣ ನಿಲ್ಲಿಸಬೇಕು

ಸ್ಥಳೀಯ ಆಡಳಿತಕ್ಕೆ ತುರ್ತು ನಿರ್ದೇಶನ ನೀಡಬೇಕು

ಈ ಕುರಿತು ತಕ್ಷಣ ಕ್ರಮ ಕೈಗೊಳ್ಳದಿದ್ದಲ್ಲಿ, ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (PIL) ಸಲ್ಲಿಸುವುದಾಗಿ ಮತ್ತು ಇತರ ಕಾನೂನು ಪರಿಹಾರಗಳನ್ನೂ ಅನುಸರಿಸಬೇಕು.

ಇದು ತುರ್ತು ಸಾರ್ವಜನಿಕ ಹಿತಾಸಕ್ತಿಯ ವಿಷಯವಾಗಿದ್ದು, ದಯವಿಟ್ಟು ತಕ್ಷಣ ಮಧ್ಯಸ್ಥಿಕೆ ವಹಿಸಬೇಕು ಎಂದು ಭೀಮರೆಡ್ಡಿ ಸಿಂಧನಕೇರಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಒಳ ಮೀಸಲಾತಿ: ಬೃಹತ್ ಪ್ರತಿಭಟನೆ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ಒಳ ಮೀಸಲಾತಿಯಲ್ಲಿ ಬಲಗೈ ಸಮೂದಾಯಕ್ಕೆ ಆಗಿರುವ ಅನ್ಯಾಯವನ್ನು ಖಂಡಿಸಿ ತಾಲೂಕಿನ ಮನ್ನಾಎಖ್ಖೇಳ್ಳಿ ಕ್ರಾಸನಿಂದ ಮನ್ನಾಎಖ್ಖೇಳ್ಳಿ ಗ್ರಾಮದ ವರೆಗೆ ಒಳ ಮೀಸಲಾತಿ ಬಲಗೈ ಹೋರಾಟ ಸಮಿತಿ ವತಿಯಿಂದ ಗುರುವಾರ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿದರು. ರೊಸ್ಟರ್ ಬಿಂದುವಿನಲ್ಲಿರುವ ನ್ಯೂನ್ಯತೆಗಳನ್ನು ಹಾಗು ಸರಕಾರ ತಮಗೆ ಕಳುಹಿಸಿರುವ ಒಳ ಮೀಸಲಾತಿಯ ವರದಿಯನ್ನು ಪ್ರವರ್ಗ ಬಿ ಮತ್ತು ಸಿ ರವರಿಗೆ ಮರಣ ಶಾಸನವಾಗಿದ್ದು, ಇದನ್ನು ಸರಕಾರ ಹಿಂದಕ್ಕೆ ಕಳುಹಿಸಬೇಕು. ಪ್ರವರ್ಗ ಎ ಮತ್ತು ಸಿ ರವರಿಗೆ ಸಮಾನ ಅವಕಾಶ ಕಲ್ಪಿಸುವಂತಹ ಕಾಯ್ದೆಯನ್ನು ರೂಪಿಸಬೇಕು ಮತ್ತು ಒಳ ಮೀಸಲಾತಿಗೆ ಅನ್ವಯಿಸುವ ರೋಸ್ಟರ ಬಿಂದುವನ್ನು ಪರಿಷ್ಕರಿಸಿ ಸರಿಪಡಿಸಬೇಕು. ಶೈಕ್ಷಣಿಕ ವಲಯ ಮತ್ತು ಉದ್ಯೋಗಕ್ಕೆ ಅನ್ವಯಿಸುತ್ತಿರುವ ಒಳ ಮೀಸಲಾತಿಯ ಕಾರ್ಯ ಚಟುವಟಿಕೆಗಳನ್ನು ಶೀಘ್ರವೇ ತಡೆ ಹಿಡಿಯಬೇಕು. ಹೊಸ ಜಾತಿ ಪ್ರಮಾಣ ಪತ್ರ ವಿತರಿಸುವುದನ್ನು ತುರ್ತಾಗಿ ನಿಲ್ಲಿಸಿ, ಹಳೆ ಜಾತಿ ಪ್ರಮಾಣ ಪತ್ರವನ್ನು ಮುಂದುವರೆಸಬೇಕು.

ಒಳ ಮೀಸಲಾತಿಯ ಗೊಂದಲಗಳನ್ನು ಹಾಗೂ ನ್ಯೂನ್ಯತೆಗಳನ್ನು ಬಗ್ಗೆ ಹರಿಸುವ ವರೆಗೂ ಹಳೆ ಮೀಸಲಾತಿ ಅನ್ವಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕೆಂಬ ಇತರೆ ಬೇಡಿಕೆಗಳ ಹಕ್ಕೊತ್ತಾಯವನ್ನು ಪ್ರತಿಭಟನಾಕಾರರು ರ್‍ಯಾಲಿ ನಡೆಸಿ ಚಿಟಗುಪ್ಪ ತಹಶೀಲ್ದಾರ್ ಮಂಜುನಾಥ ಪಂಚಾಳ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ರಾಜಕುಮಾರ ಸಿಂಧೆ ಮೀನಕೇರಾ, ರಾಜಕುಮಾರ ಎಸ್. ಅಗಸಿ, ದೀಲೀಪಕುಮಾರ ವರ್ಮಾ, ರಾಹುಲ ಭಂಗೂರೆ, ಕಾಶಿನಾಥ ಗುಜಗರ, ಶಾಂತಕುಮಾರ ಪಟ್ನೆ, ಸಂದೀಪ ಕಟ್ಟಿಮನಿ, ಭರತ ಜಾಬಾ, ಗೌತಮ ಬಗದಲಕರ, ಶಿವಕುಮಾರ ಮುತ್ತಂಗಿ, ವಿದ್ಯಾಸಾಗರ ಅಲಿಪೂರ, ಓಂಕಾರ ಮಂಗಲಗಿ, ಶಿವುಕಾಂತ ಹಾರೊರಗೇರಿಕರ, ಬಸವರಾಜ ಹೊಚಕನಳ್ಳಿ, ಮಿಥುನ ವರ್ಮಾ, ಶ್ರೀಕಾಂತ ಹೊಸಮನಿ, ಪ್ರೇಮ ಬೋರಾಳ ಸೇರಿದಂತೆ ಇತರರು ಇದ್ದರು.

# ಪೊಲೀಸರಿಂದ ಪಡಿತರ ಅಕ್ಕಿ ಜಪ್ತಿ



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಪಡಿತರ ಅಕ್ಕಿ ಹಾಗೂ ವಾಹನವನ್ನು ಕಮಲನಗರ ಪೊಲೀಸರು ಕರ್ನಾಟಕ–ಮಹಾರಾಷ್ಟ್ರ ಗಡಿಯ ಸಮೀಪದಲ್ಲಿ ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ.

ಬೀದರ್ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳಾದ ಪ್ರದೀಪ್ ಗುಂಟಿ (ಖಕಖ) ರವರ ನೇರ ಮಾರ್ಗದರ್ಶನದಲ್ಲಿ ಈ ದಾಳಿ ನಡೆದಿದೆ. ಕರ್ನಾಟಕ–ಮಹಾರಾಷ್ಟ್ರಗಡಿಯ ಸಮೀಪದಲ್ಲಿ ಪಡಿತರ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವ ಉದ್ದೇಶದಿಂದ ವಾಹನದಲ್ಲಿ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಪೊಲೀಸರಿಗೆ ಮಾಹಿತಿ ಸಿಕ್ಕಿದು.

ಈ ಮಾಹಿತಿಯ ಮೇರೆಗೆ ಕಾರ್ಯಪ್ರವೃತ್ತರಾದ ಕಮಲನಗರ ಪೊಲೀಸ್ ಠಾಣೆಯ ಪಿ.ಎಸ್.ಐ ಆಶಾ ರಾಠೋಡ ಹಾಗೂ ಅವರ ಸಿಬ್ಬಂದಿ ವರ್ಗದವರು, ಕಮಲನಗರ ತಹಸಿಲ್ ಕಚೇರಿಯ ಆಹಾರ ನಿರೀಕ್ಷಕರಾದ ಶ್ರೀ ಪರಮೇಶ್ವರ ಅವರ ಸಮ್ಮುಖದಲ್ಲಿ ದಾಳಿ ನಡೆಸಿದರು.

ಜಪ್ತಿ ಮಾಡಿದ ವಸ್ತುಗಳ ವಿವರ:

ಪಡಿತರ ಅಕ್ಕಿ: ಸುಮಾರು 3 ಕ್ವಿಂಟಾಲ್ 85 ಕೆ.ಜಿ (ಅಂದಾಜು ಮೊತ್ತ 11,550).

ವಾಹನ: ಸಾಗಾಟಕ್ಕೆ ಬಳಸುತ್ತಿದ್ದ ಆಟೋ ರಿಕ್ಷಾ (ಅಂದಾಜು ಮೊತ್ತ 1,00,000). ಒಟ್ಟು ಮೌಲ್ಯ: 1,11,550 ಮೊತ್ತದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಸ್ತುತ ಆರೋಪಿಗಳ ವಿರುದ್ಧ ಕಾನೂನು ರೀತ್ಯಾ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗಿದೆ. ಸಕಾಲದಲ್ಲಿ ಕಾರ್ಯಾಚರಣೆ ನಡೆಸಿ ಅಕ್ರಮವನ್ನು ತಡೆದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕಾರ್ಯಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮೆಚ್ಚುಗೆವ್ಯಕ್ತಪಡಿಸಿದ್ದಾರೆ. ಜಿಲ್ಲೆಯಲ್ಲಿ ಇಂತಹ ಅಕ್ರಮ ತಡೆಗಟ್ಟಲು ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಅವರು ತಿಳಿಸಿದ್ದಾರೆ.

# ಭಕ್ತಿ ಭಾವದಿಂದ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 431ನೇ ವರ್ಧಂತಿ ಮಹೋತ್ಸವ



• **ಮಲ್ಲಮ್ಮ ನುಡಿ, ಹಗರಿಬೊಮ್ಮನಹಳ್ಳಿ**

ಕಲಿಯುಗದ ಕಾಮಧೇನು ಕಲ್ಪವೃಕ್ಷ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 431ನೇ ವರ್ದಂತಿ ಮಹೋತ್ಸವದ ಅಂಗವಾಗಿ ಬೆಳಿಗ್ಗೆಯಿಂದ ಸಾಯಂಕಾಲದ ವರೆಗೆ ಮಠದಲ್ಲಿ ಅದ್ದೂರಿ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ, ಎಂದು ಟ್ರಸ್ಟ್ ಅಧ್ಯಕ್ಷ ಮಂಜುನಾಥ್ ಶೆಟ್ಟಿ ಹೇಳಿದರು,

ಪಟ್ಟಣದ ರಾಯರ ಮಠದಲ್ಲಿ ಪ್ರತಿವರ್ಷದಂತೆ ಈ ಬಾರಿ ಸಹ ವರ್ಧಂತಿ ಉತ್ಸವವನ್ನು ಎಲ್ಲಾ ನಿಯಮಗಳ ಅನುಸಾರವಾಗಿ ಬದ್ರಿನಾಥ್ ಆಚಾರ್ಯ ಹಾಗೂ ಸುಬ್ರಮಣ್ಯ ಆಚಾರ್ಯರ ನೇತೃತ್ವದಲ್ಲಿ ಸರ್ವ ಸ್ವಾಮಿ ನೇತೃತ್ವದಲ್ಲಿ ಸರ್ವ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು, ಅದೇ ರೀತಿ ಶ್ರೀ ರಾಘವೇಂದ್ರ ಸ್ವಾಮಿ ಹಸ್ತಾಕ್ಷರ ಅಷ್ಟಾಕ್ಷರ ಜಪ ಪಾರಾಯಣವನ್ನು ಆಯೋಜಿಸಲಾಗಿದ್ದು, ಇದರಲ್ಲಿ ನೂರಾರು ಭಕ್ತರು ಭಾಗವಹಿಸಿದ್ದು ವಿಶೇಷವಾಗಿತ್ತು, ಕಾರ್ಯಕ್ರಮದ ನಂತರ ಆಗಮಿಸಿದ ಎಲ್ಲಾ ರಾಯರ ಭಕ್ತರಿಗೂ ಪ್ರಸಾದ ವ್ಯವಸ್ಥೆಯನ್ನು ಆಯೋಜಿಸಿದ್ದೇವೆ ಎಂದು ಹೇಳಿದರು,

ಮಠದ ಸುಬ್ರಮಣ್ಯ ಹಾಚಾರ್ ಮಾತನಾಡಿ ರಾಯರ ವರ್ಧಂತಿ ಉತ್ಸವ ಅಂಗವಾಗಿ ಬೆಳಿಗ್ಗೆಯಿಂದಲೇ ಭಜನಾ ಮಂಡಳಿಯಿಂದ ಭಜನೆ ಹಾಗೂ ಪಲ್ಲಕ್ಕಿ ಉತ್ಸವ ಕನಕ ಅಭಿಷೇಕ ದೀಪಗಳ ಬೆಳಗಿಸುವುದರ ಮೂಲಕ ರಾಯರ ಜನ್ಮದಿನವನ್ನು ಆಚರಿಸಲಾಯಿತು, ಮಧ್ಯಾಹ್ನ 1:30ಕ್ಕೆ ಸರ್ವರಿಗೂ ತೀರ್ಥ ಫಲ ಮಂತಕ್ಷತೆ ಮತ್ತು ಪ್ರಸಾದವನ್ನು ವಿತರಿಸಲಾಯಿತು, ಸಂಜೆ 6 ಗಂಟೆಗೆ ದೀಪ ಹಚ್ಚುವ ಮತ್ತು ರಾಯರ ವೀಣಾ ಭಜನೆ ಮಂಡಳಿಯಿಂದ ಭಜನೆ ಸ್ವಸ್ತಿಕ್ ವಾಚನಗಳ ಸೇವೆ ಮಹಾಮಂಗಳಾರತಿ ತೀರ್ಥ ಫಲ ಮುಂತಕ್ಷತೆ ನೀಡಲಾಯಿತು,

ಪುರಸಭೆ ಅಧ್ಯಕ್ಷ ಮರಿ ರಾಮಪ್ಪ ಮಾತನಾಡಿ ಎಲ್ಲ ಸಂಕಷ್ಟಗಳಿಗೂ ರಾಯರು ಆಸರೆಯಾಗಿ ನಿಲ್ಲುತ್ತಾರೆ ಎಂಬ ಬಲವಾದ ನಂಬಿಕೆ ನನ್ನಂತಹ ಭಕ್ತರದ್ದು ಹಾಗಾಗಿ ಏನೇ ಕಷ್ಟ ಬಂದರೂ ನಾವು ಗುರು ರಾಯರ ಸೇವೆ ಮಾಡುವುದೇ ಪುಣ್ಯ ಕಾರ್ಯವಾಗಿದೆ ಎಂದರು,

ರಾಯರ ವೀಣಾ ಭಜನಾ ಮಂಡಳಿ ಅಧ್ಯಕ್ಷರಾದ ಎಂಎಂ,ಸಾವಿತ್ರಿ, ಮಾತನಾಡಿ ರಾಯರ ವರ್ಧಂತಿ ಮಹೋತ್ಸವದ ಅಂಗವಾಗಿ ಫಲ ಪುಷ್ಪ ಅಭಿಷೇಕ, ಪಂಚಾಮೃತ ಅಭಿಷೇಕ, ಕನಕ ಅಭಿಷೇಕ, ಹಣ್ಣಿನ ಸೇವೆ, ರಥೋತ್ಸವ ಸೇವೆ, ಅನ್ನದಾನ ಸೇವೆ, ಶ್ರೀ ಗುರುರಾಯರಿಗೆ ಹೂವಿನ ಸೇವೆ, ಸೇರಿದಂತೆ ಸರ್ವ ಸೇವೆಗಳನ್ನು ಮಠದಲ್ಲಿ ಆಯೋಜಿಸಲಾಗಿತ್ತು ಭಕ್ತರು ಇದರಲ್ಲಿ ಪಾಲ್ಗೊಂಡಿದ್ದರು,

# ಪ್ರಶಸ್ತಿಗಳಿಗಾಗಿ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

2026ರ ಏಪ್ರಿಲ್ 5ರಂದು ಡಾ. ಬಾಬು ಜಗಜೀವನರಾಂರವರ ಹಾಗೂ ಏಪ್ರಿಲ್ 14 ರಂದು ಡಾ. ಬಿ.ಆರ್.ಅಂಬೇಡ್ಕರ್‌ರವರ ಜನ್ಮ ದಿನಾಚರಣೆಯನ್ನು ರಾಜ್ಯ ಮಟ್ಟದಲ್ಲಿ ಸರ್ಕಾರದ ವತಿಯಿಂದ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ ಗಣನಿಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ 2026–27ನೇ ಸಾಲಿನ ಡಾ. ಬಾಬು ಜಗಜೀವನರಾಂರವರ ಹಾಗೂ ಡಾ. ಬಿ.ಆರ್.ಅಂಬೇಡ್ಕರ್‌ರವರ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ. ಇದಕ್ಕಾಗಿ ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಅರ್ಹ ವ್ಯಕ್ತಿಗಳು ನಿಗದಿತ ಅರ್ಜಿ ನಮೂನೆಯನ್ನು ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಯಿಂದ ಪಡೆದು ಭರ್ತಿ ಮಾಡಿ ಅವಶ್ಯಕ ದಾಖಲೆಗಳೊಂದಿಗೆ 2026ರ ಮಾರ್ಚ್ 10 ರೊಳಗಾಗಿ ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು.

ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಮಿನಿ ವಿಧಾನ ಸೌಧ ಎದುರುಗಡೆಯಿರುವ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472–278621 ಮೊಬೈಲ್ ಸಂಖ್ಯೆ 9844295134ಗೆ ಸಂಪರ್ಕಿಸಲು ಕೋರಲಾಗಿದೆ.

# ಕಾಲಚಕ್ರ ನಾಟಕ ಪ್ರದರ್ಶನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಕಲಬುರಗಿ ನಾಟಕೋತ್ಸವ–26ರ ಅಂಗವಾಗಿ ಫೆಬ್ರವರಿ 27ರಂದು ಶುಕ್ರವಾರ ಸಂಜೆ 7 ಗಂಟೆಗೆ ಕಲಬುರಗಿ ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಹುಲುಗಪ್ಪ ಕಟ್ಟೀಮನಿ ಇವರ ನಿರ್ದೇಶನದ "ಕಾಲಚಕ್ರ" ನಾಟಕವು ಕಲಬುರಗಿ ಕರ್ನಾಟಕ ರಂಗಾಯಣ ತಂಡದಿಂದ ಪ್ರದರ್ಶನಗೊಳ್ಳಲಿದೆ.

# ಕೇದಾರ ಜಗದ್ಗುರು ಅಡ್ಡಪಲ್ಲಕ್ಕಿ ಉತ್ಸವ





• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ಉತ್ತರಾಖಂಡ ರಾಜ್ಯದ ಕೇದಾರನಾಥ ರಾವಲು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಉತ್ಸವ ಗುರುವಾರ ಸಂಜೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿವಿಧ ಕಲಾ ತಂಡಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಪಟ್ಟಣದ ಗಣೇಶ ಮಂದಿರದಿಂದ ಆರಂಭವಾದ ಶ್ರೀಶ್ರೀಶ್ರೀ 1008 ಜಗದ್ಗುರು ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ರಾಹುಲಪದವಿ ವಿಧಾಷಿತ ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಕೇದಾರ ಮಹಾಪೀಠ ಸನ್ನಿಧಿಯವರ ಭವ್ಯ ಅಡ್ಡಪಲ್ಲಕಿ ಉತ್ಸವ ಅದ್ಧುರಿಯಾಗಿ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ದೇವಸ್ಥಾನಕ್ಕೆ ತಲುಪಿತ್ತು. ಪಲ್ಲಕ್ಕಿ ಉತ್ಸವದಲ್ಲಿ ತುಂಬಿದ ಕಳಶ ಹೊತ್ತ ಮಹಿಳೆಯರು, ಬಾಜಾ ಭಜಂತ್ರಿ, ಡೊಳ್ಳು ಸೇರಿದಂತೆ ವಿವಿಧ ಕಲಾ ತಂಡಗಳು ಉತ್ಸವಕ್ಕೆ ಮೆರಗು ನೀಡಿದವು. ಉತ್ಸವದಲ್ಲಿ ಅಯ್ಯಪ್ಪ ಸ್ವಾಮಿ ಹಿರೇಮಠದ ಗುರುಲಿಂಗ ಶಿವಾಚಾರ್ಯರು, ಮರುಳಾರಾಧ್ಯ ಶಿವಾಚಾರ್ಯರು, ಐನಾಪುರ ಉಪಮನ್ಯ ಶಿವಾಚಾರ್ಯರು, ಮಡಿವಾಳಯ್ಯ ಶಾಸ್ತ್ರಿ, ವಿವಿಧ ಮಠಾಧೀಶರು, ದೇವಸ್ಥಾನ ಸಮಿತಿ ಅಧ್ಯಕ್ಷ ವಿಜಯಕುಮಾರ ಬೊಮ್ಮಣಿ, ವೀರಪ್ಪ ಹೊಸಳ್ಳಿ, ಅಮೀತ ತೋಗಲೂರ ಸೇರಿದಂತೆ ದೇವಸ್ಥಾನ ಸಮಿತಿ ಸದಸ್ಯರು ಹಾಗೂ ಸಹಸ್ರಾರು ಭಕ್ತರು ಪಾಲ್ಗೊಂಡು ಶ್ರೀಗಳ ದರ್ಶನಾಶೀರ್ವಾದ ಪಡೆದರು.

# ಉರ್ದು ಭಾಷೆ ಮುದ್ರಣ: ಕನ್ನಡಕ್ಕೆ ಭಾಷೆಗೆ ಮಾಡಿದ ದ್ರೋಹೆ

ಬಸವನಬಾಗೇವಾಡಿ : ರಾಜ್ಯ ಸರ್ಕಾರದ ಅಧಿಕೃತ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಉರ್ದು ಭಾಷೆಯಲ್ಲಿ ಮುದ್ರಣ ಮಾಡಿರುವುದು ಕನ್ನಡ ಭಾಷೆಗೆ ಮಾಡಿದ ದ್ರೋಹವಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಹಾಗೂ ಚೆನ್ನಬಸವೇಶ್ವರ ಪ್ರತಿಷ್ಠಾನದ ಅಧ್ಯಕ್ಷ ವಿವೇಕಾನಂದ ಕಲ್ಯಾಣಶೆಟ್ಟಿ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಅಧಿಕೃತ ಭಾಷೆಯಾದ ಕನ್ನಡದಲ್ಲಿ ಪ್ರತಿಯೊಂದು ಆಮಂತ್ರಣ ಪತ್ರಿಕೆಯನ್ನು ಮುದ್ರಣ ಮಾಡುವುದು ಸರಕಾರದ ಜವಾಬ್ದಾರಿಯಾಗಿದೆ. ಮಾತಿದ್ದರೆ ಕನ್ನಡ ಅಸ್ಮಿತೆ ಬಗ್ಗೆ ಮಾತನಾಡುವ ಸಿಎಂ ಹಾಗೂ ಆರೋಗ್ಯ ಸಚಿವರು ಅದನ್ನು ಸಮರ್ಥಿಸಿರುವುದು ಸರಿಯಾದ ಕ್ರಮ ಅಲ್ಲ. ಇದೇ ಪರಂಪರೆ ಮುಂದುವರೆದರೆ ನಾಳೆ ತಮಿಳು ತೆಲುಗಿನಲ್ಲಿ ಮಲಯಾಳ ಭಾಷೆಯಲ್ಲಿ ಆಮಂತ್ರಣ ಪತ್ರಿಕೆಯನ್ನು ಮುದ್ರಣ ಮಾಡಲು ಒತ್ತಾಯ ಬಂದರೂ ಬರಬಹುದು. ಸಚಿವರಾದ ದಿನೇಶ ಗುಂಡೂರಾವ್ ಅವರು ದಿನಪತ್ರಿಕೆಯ ಜಾಹೀರಾತುಗಳನ್ನು ಉಲ್ಲೇಖಿಸಿ ಸಮರ್ಥನೆ ಮಾಡಿಕೊಳ್ಳುತ್ತಾರೆ. ಆಮಂತ್ರಣ ಪತ್ರಿಕೆಗೂ ಜಾಹೀರಾತಿಗೂ ವ್ಯತ್ಯಾಸವಿದೆ. ಜಾಹೀರಾತುಗಳನ್ನು ಎಲ್ಲಾ ಭಾಷೆಯಲ್ಲಿ ಕೊಡಬಹುದು

ಕನ್ನಡ ಭಾಷೆಯ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವ ಸರಕಾರದ ಗುಲಾಮರಾಗಿ ಕೆಲಸ ಮಾಡುತ್ತಿರುವ ಪ್ರಗತಿಪರರು ಎಂದು ತಮ್ಮನ್ನೇ ತಾವು ಕರೆದುಕೊಳ್ಳುವ ಯಾವೊಬ್ಬ ಸಾಹಿತಿಯೂ ಕೂಡ ಈ ಕುರಿತು ಮಾತನಾಡದೇ ಇರುವುದು ವಿಪರ್ಯಾಸದ ಸಂಗತಿಯಾಗಿದೆ. ಹಿಂದಿ ಭಾಷೆ ಬಗ್ಗೆ ವಿರೋಧ ವ್ಯಕ್ತಪಡಿಸುವ ಕನ್ನಡಪರ ಸಂಘಟನೆಗಳು ಈ ವಿಷಯದಲ್ಲಿ ಮೌನವಾಗಿರುವುದು ಏಕೆ ಎನ್ನುವುದು ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ. ಈ ಕುರಿತು ಕೆಲವೇ ಸಂಘಟನೆಗಳು ಧ್ವನಿ ಎತ್ತಿರುವುದು ನಾವು ಗಮನಿಸಬೇಕಾಗಿದೆ. ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ಜನತೆ ಕ್ಷಮೆಯನ್ನು ಕೇಳಬೇಕು. ಕನ್ನಡದ ಮುಖ್ಯಮಂತ್ರಿ ಕರೆದುಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಕುರಿತು ಸ್ಪಷ್ಟೀಕರಣ ನೀಡಬೇಕು. ಎಲ್ಲ ಸಾಹಿತಿಗಳು ಹಾಗೂ ಕನ್ನಡ ಪರ ಸಂಘಟನೆಗಳು ಒಂದಾಗಿ ಖಂಡಿಸಬೇಕು. ಮುಂದೆ ಈರೀತಿ ತಪ್ಪಾಗದಂತೆ ನೋಡಿಕೊಳ್ಳಬೇಕು ಎಂದಿದ್ದಾರೆ.

# ಮಕ್ಕಳಲ್ಲಿ ಮಾನವೀಯ ಮೌಲ್ಯ ಬೆಳಸಿ: ಹಂಚಲಿ



• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ**

ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳು ಕಡಿಮೆ ಆಗುತ್ತಿವೆ ಇದು ಕಳವಳಕಾರಿ ಸಂಗತಿಯಾಗಿದೆ ಇದರ ಕುರಿತು ಎಲ್ಲರೂ ಚಿಂತಿಸುವ ಅಗತ್ಯ ಇದೆ ಎಂದು ಶಿಕ್ಷಕ ಸಾಹಿತಿ ಅಶೋಕ ಹಂಚಲಿ ಹೇಳಿದರು. ತಾಲೂಕಿನ ಹಿರೂರ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಇದರ 7ನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಬುಧವಾರ ಅವರು ಮಾತನಾಡಿದರು. ಇವತ್ತು ಮಕ್ಕಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಒಳ್ಳೆಯ ಸಂಸ್ಕಾರಗಳನ್ನೂ ಕೊಡಬೇಕಾಗಿದೆ ಇದರಲ್ಲಿ ಪಾಲಕರ ಜವಾಬ್ದಾರಿ ಹೆಚ್ಚಿಗಿದೆ ಮಕ್ಕಳನ್ನು ಮೊಬೈಲ್ ದಾಸರಾಗದಂತೆ ನೋಡಿಕೊಳ್ಳಲು ಸ್ವತಃ ಪಾಲಕರು ಅವರ ಮುಂದೆ ಮೊಬೈಲ್ ಬಳಕೆ ಕಡಿಮೆ ಮಾಡಬೇಕು. ಮಗು ಹೆತ್ತವರನ್ನು ಅನುಸರಿಸುತ್ತದೆ ಎಲ್ಲರೂ ಪೂರಕವಾಗಿ ಕೆಲಸ ಮಾಡಿದಾಗ ಮಾತ್ರ ಮಕ್ಕಳ ಉಜ್ವಲ ಭವಿಷ್ಯವನ್ನು ನಿರ್ಮಾಣ ಮಾಡಲು ಸಾಧ್ಯ. ಸರ್ಕಾರಿ ಶಾಲೆಯಲ್ಲಿ ಇಂತಹದೊಂದು ಅದ್ಭುತ ಕಾರ್ಯಕ್ರಮ ಮಾಡಿರುವುದಕ್ಕೆ ಎಸ್ ಡಿ ಎಮ್ ಸಿ ಅಧ್ಯಕ್ಷರು ಹಾಗೂ ಶಿಕ್ಷಕ ವರ್ಗಕ್ಕೆ ಅಭಿನಂದಿಸುತ್ತೇನೆ ಎಂದರು. ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರ ಮಠ ಮಾತನಾಡಿ ಇಂದು ಸರ್ಕಾರಿ ಶಾಲೆಗಳು ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಪೈಪೋಟಿ ನಡೆಸುವಷ್ಟು ಸಶಕ್ತವಾಗಿವೆ, ದೇಶದಲ್ಲಿ ದೊಡ್ಡ ಸಾಧನೆಗಳನ್ನು ಮಾಡಿದವರಲ್ಲಿ ಅತಿ ಹೆಚ್ಚು ಸರ್ಕಾರಿ ಶಾಲೆಗಳಿಂದಲೇ ಹೊರಹೊಮ್ಮಿದವರು, ಇವುಗಳ ರಕ್ಷಣೆ ಹಾಗೂ ಬೆಳವಣಿಗೆಗೆ ಎಲ್ಲರೂ ಕೈಜೋಡಿಸಬೇಕಾಗಿದೆ ಎಂದರು. ಸಿಆರ್‌ಪಿ ಎಸ್ ಎಸ್ ಯಾಳವಾರ ಪ್ರಸ್ತಾವಿಕವಾಗಿ ಮಾತನಾಡಿದರು. ಸಮಾರಂಭದ ಸಾನಿಧ್ಯವಹಿಸಿದ್ದ ವೇ.ಮೂ. ಸಿ.ಎಸ್.ಹಿರೇಮಠ ಆಶೀರ್ವಚನ ನೀಡಿದರು. ಎಸ್ ಡಿ ಎಂ ಸಿ ಅಧ್ಯಕ್ಷ ಸಂಗನಗೌಡ ಅಸ್ಕಿ ಅಧ್ಯಕ್ಷತೆ ವಹಿಸಿ ಮಾತನಾಡಿ ಶಾಲೆಯ ಅಭಿವೃದ್ಧಿಗೆ ಶಕ್ತಿಮೀರಿ ಪ್ರಯತ್ನಿಸಿದ್ದೇನೆ ಇದಕ್ಕೆ ನಮ್ಮ ಸಮಿತಿಯ ಎಲ್ಲ ಸದಸ್ಯರ ಹಾಗೂ ಶಿಕ್ಷಕರ ಸಹಕಾರವೂ ಇದೇ ಎಂದರು. ಇದೇ ಸಂದರ್ಭದಲ್ಲಿ ವಿವಿಧ ಕ್ರೀಡೆ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಿ ಉತ್ತಮ ಸಾಧನೆ ತೋರಿದ ಮಕ್ಕಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು. ಜಿ.ಪಿ.ಟಿ.ತಾಲೂಕಾಧ್ಯಕ್ಷ ಎನ್.ಎಸ್.ನೀರಲಗಿ, ಶಿಕ್ಷಕಿ ಜಿ.ಎಸ್.ಮದ್ದರಕಿ ಕಾರ್ಯಕ್ರಮ ನಿರ್ವಹಿಸಿದರು. ಕೆ.ಎಸ್. ಪಿ.ಎಸ್.ಟಿ.ಎ.ತಾಲೂಕ ಘಟಕದ ಅಧ್ಯಕ್ಷ ಬಿ.ಟಿ.ವಜ್ಜಲ, ಪ್ರಧಾನ ಕಾರ್ಯದರ್ಶಿ ಎಸ್.ಬಿ.ಬೀರಗೊಂಡ, ಗ್ರಾ.ಪಂ. ಕಾರ್ಯದರ್ಶಿ ಬಿರಾದಾರ, ಗುರಣ್ಣ ಚೌದರಿ, ಮಾನಪ್ಪ ಬಡಿಗೇರ, ಬಿ.ಆರ್.ಸಿ.ಕಾಶಿನಾಥ ಸಜ್ಜನ, ಸಿ.ಆರ್.ಸಿ. ರಾಜು ವಿಜಾಪುರ, ಪ್ರಾ.ಶಾ.ಶಿ.ಸ.ಸಂ.ಉಪಾಧ್ಯಕ್ಷ ಪಿ.ವೈ.ಚಲವಾದಿ, ಮು.ಗು.ಎಲ್.ಎಸ್.ಗಸ್ತಿ, ಸಹ ಶಿಕ್ಷಕ ಎಸ್ ಬಿ ಹಡಪದ, ಶಿಕ್ಷಕರಾದ ದಿನೇಶರ ಯರಲಡ್ಡಿ, ಎಸ್ ನೀರಲಗಿ, ಶಿಕ್ಷಕಿಯರಾದ ಜಿ.ಎಸ್.ಮದ್ದರಕಿ,ಎಂ.ಜಿ. ಬಿರಾದಾರ, ಶಿಕ್ಷಕ ವರ್ಗ, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಸಾಮಾಜಿಕ ನ್ಯಾಯವೇ ಸಮಾಜದ ಬುನಾದಿ

• **ಮಲ್ಲಮ್ಮ ನುಡಿ ವಾರ್ತೆ ಆಳಂದ**



ಸಾಮಾಜಿಕ ನ್ಯಾಯವೇ ಸಮಾಜದ ಬುನಾದಿಯಾಗಿದೆ ಇದನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬ ನಾಗರಿಕನ ಕರ್ತವಾಗಿದೆ ಎಂದು ಸ್ಥಳೀಯ ಪ್ರಧಾನ ಸಿವಿಲ್ ನ್ಯಾಯಾಧೀಶೆ ಕುಮಾರಿ ಸುಮನ್ ಚಿತ್ತರಗಿ ಅವರು ಹೇಳಿದರು.

ಪಟ್ಟಣದ ನ್ಯಾಯಾಲಯ ಆವರಣದಲ್ಲಿ ಕಾನೂನು ಸೇವಾ ಸಮಿತಿ ಹಾಗೂ ನ್ಯಾಯವಾದಿಗಳ ಸಂಘದ ಆಶ್ರಯದಲ್ಲಿ ಹಮ್ಮಿಕೊಂಡ ವಿಶ್ವ ಸಾಮಾಜಿಕ ನ್ಯಾಯ ದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

"ಸಾಮಾಜಿಕ ನ್ಯಾಯವು ಕೇವಲ ಕಾನೂನಿನ ಪುಸ್ತಕಗಳಲ್ಲಿ ಉಳಿಯುವುದಲ್ಲ, ಅದು ಪ್ರತಿಯೊಬ್ಬ ನಾಗರಿಕನ ಜೀವನದಲ್ಲಿ ಪ್ರತಿಫಲಿಸಬೇಕು. ನಮ್ಮ ಸಂವಿಧಾನದ ಪೀಠಿಕೆಯಲ್ಲಿ 'ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ' ಎಂದು ಘೋಷಿಸಿದ ಡಾ. ಬಿ.ಆರ್. ಅಂಬೇಡ್ಕರ್ ಅವರ ದೂರದೃಷ್ಟಿಯನ್ನು ನಾವು ನೆನಪಿಸಿಕೊಳ್ಳಬೇಕು. ಆರ್ಟಿಕಲ್ 14, 15, 16 ಮತ್ತು 39ರಂತಹ ನಿಬಂಧನೆಗಳು ಸಮಾನತೆಯನ್ನು ಖಚಿತಪಡಿಸುತ್ತವೆ. ಆದರೆ ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ, ಮಹಿಳೆಯರಲ್ಲಿ, ದಲಿತ–ಪರಿಶಿಷ್ಟ ವರ್ಗಗಳಲ್ಲಿ ನ್ಯಾಯದ ಪ್ರವೇಶಕ್ಕೆ ಅಡೆತಡೆಗಳಿವೆ. ನ್ಯಾಯಾಲಯಗಳು ಕೇವಲ ವಿವಾದಗಳನ್ನು ತೀರಿಸುವ ಸ್ಥಳಗಳಲ್ಲ, ಸಾಮಾಜಿಕ ಬದಲಾವಣೆಯ ಎಂಜಿನ್‌ಗಳಾಗಬೇಕು ಲೀಗಲ್ ಎಯ್ಡ್, ಲೋಕಾದಲತ್‌ಗಳು, ಜನಜಾಗೃತಿ ಕಾರ್ಯಕ್ರಮಗಳ ಮೂಲಕ ನಾವು ಈ ಗುರಿಯನ್ನು ಸಾಧಿಸಬೇಕಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಕಮಲ ವಿ. ರಾಠೋಡ್, ಉಪನ್ಯಾಸ. ವಕೀಲ ದೇವಾನಂದ ಹೊದಲೂರಕರ ಮಾತನಾಡಿದರು.

ಸಹಾಯಕ ಸರಕಾರಿ ಅಭಿಯೋಜಕ ಇಸ್ಮಾಯಿಲ್ ಪಟೇಲ್, ಸಂಘದ ಕಾರ್ಯದರ್ಶಿ ಬಿ.ಟಿ.ಸಿಂಧೆ ಸೇರಿ ಇನ್ನಿತರರು ಉಪಸ್ಥಿತರಿದ್ದರು. ನ್ಯಾಯವಾದಿ ಶಿವಲಿಂಗಪ್ಪ ಉಡಗಿ ನಿರೂಪಿಸಿದರು. ನಾಗರಾಜ ದೇಕುನ ವಂದಿಸಿದರು.

# ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಸೇರಿಸುವುದನ್ನು ವಿರೋಧಿಸಿ ಗ್ರಾಮದ ಪೋಷಕರ ಆಗ್ರಹ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ತಾಲ್ಲೂಕಿನ ಮಳ್ಳಿಕೇರಿ ಗ್ರಾಮದ ಸರ್ಕಾರಿ ಶಾಲೆಯನ್ನು ಹ್ಯಾಟಿ ಕೆಪಿಎಸ್ ಶಾಲೆಗೆ ಮುಚ್ಚುವುದನ್ನು ವಿರೋಧಿಸಿ ಗ್ರಾಮದ ಶಾಲೆಯ ಎದುರು ಎಐಡಿಎ ನೇತೃತ್ವದಲ್ಲಿ ಪೋಷಕರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿಎ ವಿದ್ಯಾರ್ಥಿ ಸಂಘಟನೆಯ ರಾಜ್ಯ ಮುಖಂಡರಾದ ಸಿಂಧು ಕೌದಿ ಮಾತನಾಡಿ ನಮ್ಮ ಕೊಪ್ಪಳದ ಅನೇಕ ಹಳ್ಳಿಗಳಲ್ಲಿ ಇರುವುದು ಎಲ್ಲಾ ದುಡಿದು ಬದುಕುವ ಬಡವರು, ಕಾರ್ಮಿಕರು ಮತ್ತು ರೈತರು ಹಾಗೂ ಮಧ್ಯಮ ವರ್ಗದ ಜನರು ಈ ಭಾಗದ ಮಕ್ಕಳಿಗೆ ಶಿಕ್ಷಣ ಕೊಡುಸುವುದೇ ಕಷ್ಟವಾಗಿದೆ. ಇತ್ತೀಚಿನ ದಿನಗಳಲ್ಲಿ ಜಿಲ್ಲೆಯ ಶಾಲಾ, ಕಾಲೇಜು ಮತ್ತು ವಸತಿ ಶಾಲೆಗಳಲ್ಲಿ ಓದುವ ನಮ್ಮ ಹೆಣ್ಣುಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ.

ಹಿಂಗಿರುವಾಗ ಪಕ್ಕದ 05 ಕಿಲೋಮೀಟರ್ ದೂರದಲ್ಲಿರುವ ಹ್ಯಾಟಿ ಶಾಲೆಗೆ ಮಳ್ಳಿಕೇರಿ ಶಾಲೆಯ ಮಕ್ಕಳನ್ನು ಹೇಗೆ ಸಾಧ್ಯ. ಸರ್ಕಾರಿ ಶಾಲೆ ಮುಚ್ಚಿದರೆ, ನಮ್ಮ ಮಕ್ಕಳು ಕಲಿಯೋಕೆ ಆಗೋದಿಲ್ಲ ಶಾಲೆಗಳನ್ನು ಮುಚ್ಚಿ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ 5 ವರ್ಷದ ಮಕ್ಕಳು 6–7 ಕಿಲೋ ಮೀಟರ್ ದೂರ ಹೇಗೆ ಹೋಗಬೇಕು? ಬಡವರ ಮಕ್ಕಳೆ ಹೆಚ್ಚು ಸಂಖ್ಯೆಯಲ್ಲಿ ದಾಖಲಾತಿ ಇರುವ ಮಳ್ಳಿಕೇರಿ ಸರ್ಕಾರಿ ಶಾಲೆ ಮುಚ್ಚುವುದು ಎಷ್ಟು ಸರಿ? ಈಗಾಗಲೇ ಮಾನ್ಯ ಕೊಪ್ಪಳದ ಶಾಸಕರು ಹ್ಯಾಟಿ, ಗಿಣಿಗೇರ ಕೆಪಿಎಸ್ ಶಾಲೆಗಳ ಕಾಮಗಾರಿಗೆ ಅಧಿಕೃತವಾಗಿ ಬಹಳ ವೇಗವಾಗಿ ಚಾಲನೆ ನೀಡುತ್ತಿದ್ದಾರೆ. ಆ ಕೆಪಿಎಸ್ ಶಾಲೆಗಳಿಗೆ ಸುತ್ತಲಿನ 5 ರಿಂದ 15 ಕಿಲೋಮೀಟರ್ ವ್ಯಾಪ್ತಿಯ ಶಾಲೆಗಳನ್ನು ಮುಚ್ಚುವತ್ತ ಸಾಗುತ್ತಿದ್ದಾರೆ. ಕೊಪ್ಪಳದ ಜನತೆ ಇಂತಹ ಬಡವರ ವಿರೋಧಿ, ಜನ ವಿರೋಧಿ ಯೋಜನೆಯನ್ನು ಪ್ರಶ್ನಿಸಿ ಬೃಹತ್ ಪ್ರತಿರೋಧ ಚಳುವಳಿ ಬೆಳೆಸುವ ಮೂಲಕ ಶಾಲೆಗಳನ್ನು ರಕ್ಷಿಸಲು ಮುಂದಾಗಬೇಕು ಎಂದರು.

ಊರಿನ ಮಹಿಳೆಯರು ಮಾತನಾಡಿ ನಮ್ಮ ಊರಿನಲ್ಲಿ ಒಂದೇ ಒಂದು ಮಗು ಶಾಲೆಗೆ ಬಂದ್ರು ನಮ್ಮ ಮಕ್ಕಳನ್ನ ನಮ್ಮೂರಿನ ಶಾಲೆಯಲ್ಲಿಯೇ ಶಿಕ್ಷಣ ಕೊಡಬೇಕು. ಬೇರೆಕಡೆ ನಮ್ಮ ಮಕ್ಕಳನ್ನು ಕಳುಹಿಸಿ ನಾವು ಓದಿಸೋಕೆ ಆಗಲ್ಲ ಹಾಗಾಗಿ ನಮ್ಮೂರ ಶಾಲೆ ಮುಚ್ಚೋಕೆ ನಾವು ಬಿಡುವುದಿಲ್ಲ, ಹೋರಾಡುತ್ತೇವೆ ಎಂದರು.

ಹಾಗೇ ಊರಿನ ಹಿರಿಯರು, ಯುವಕರು ಮತ್ತು ಪೋಷಕರು ಮಾತನಾಡಿದರು. ಪ್ರತಿಭಟನೆಯಲ್ಲಿ ಎಐಡಿಎ ಜಿಲ್ಲಾ ಸಂಘಟನಾಕಾರರಾದ ಪ್ರದೀಪ್, ಸಾರ್ವಜನಿಕ ಶಿಕ್ಷಣ ಉಳಿಸುವ ಸ್ವಯಂ ಸೇವಕರರಾದ ಶಾರದಾ ಗಡ್ಡಿ, ಊರಿನ ಪೋಷಕರಾದ ಮುತ್ತನ ಗೌಡ, ಶಿವನಗೌಡ, ಹನುಮರೆಡ್ಡಿ, ಮೈಲಾರಪ್ಪ, ನಿಂಗಪ್ಪ, ನಾಗರಾಜ, ಚಿನ್ನಪ್ಪ, ಮಂಜುನಾಥ್, ಕೋಟೇಶ್, ವಸಂತ ಸೇರಿದಂತೆ ಊರಿನ ಮಹಿಳೆಯರು ಭಾಗವಹಿಸಿದ್ದರು.

# ಟ್ರಾಫಿಕ್ ಸಮಸ್ಯೆ ಮಹತ್ವದ ಪರಿಹಾರದ ಮಹತ್ವ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**




ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸಂಚಾರ ದಟ್ಟಣೆ, ಇದರಿಂದಾಗಿ ಸಾರ್ವಜನಿಕರಿಗೆ ಆಗುವ ಸಮಸ್ಯೆ ಹಾಗೂ ಪರಿಹಾರ ಕುರಿತು ಚರ್ಚಿಸಲು ಇಂದು ಫೆ.26 ರಂದು ಸಂಜೆ 4 ಗಂಟೆಗೆ ನಗರದ ಬಿಡಿಎಎ ಮೈದಾನದ ಸಭಾಂಗಣದಲ್ಲಿ ಸಭೆ ಆಯೋಜಿಸಲಾಗಿದೆ..

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್ ನೇತೃತ್ವದಲ್ಲಿ. ಮಹಾನಗರ ಪಾಲಿಕೆ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಜೆಸ್ಕಾಂ ಇಲಾಖೆ, ಲೋಕೋಪಯೋಗಿ ಮತ್ತು ಕೆಕೆಆರ್ಟಿಸಿ ಇಲಾಖೆಗಳ ಅಧಿಕಾರಿಗಳನ್ನ ಒಳಗೊಂಡು ನಡೆಯುವ ಈ ಸಭೆಯಲ್ಲಿ . ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರು, ಸದಸ್ಯರು, ಕಿರಾಣಿ ಅಂಗಡಿ ವ್ಯಾಪಾರಸ್ಥರು, ಖಾಸಗಿ ಬಸ್ ಮಾಲೀಕರು, ಚಾಲಕರು, ಲಾರಿ ಸಂಘದ

ಅಧ್ಯಕ್ಷರು, ಸದಸ್ಯರು, ಆಟೋ, ಟ್ಯಾಕ್ಸಿ ಯೂನಿಯನ್, ಅಧ್ಯಕ್ಷರು, ಮಾಲೀಕಕರು, ಚಾಲಕರು,, ಬೀದಿ ಬದಿ ವ್ಯಾಪಾರಸ್ಥರು ಮತ್ತು ನಗರದ ಸಾರ್ವಜನಿಕರು ಸಭೆಗೆ ಹಾಜರಾಗಿ ಸಲಹೆ– ಸೂಚನೆ ನೀಡಬಹುದು ಎಂದು ಸಂಚಾರ ಪೊಲೀಸ್ ಠಾಣೆಯ ಇನ್ಸೆಕ್ಟರ್ ತಿಳಿಸಿದ್ದಾರೆ.

ಸಭೆಯಲ್ಲಿ ಆಟೋಗಳು ಎಲ್ಲಂದರಲ್ಲಿ ನಿಲ್ಲಿಸುವುದು, ಬಾರ್, ಹೋಟೇಲ್ ಗಳ ಮುಂದೆ ನಿಗಧಿಗಿಂತ ಹೆಚ್ಚಿನ ಸಾಲಿನಲ್ಲಿ ಬೈಕ್ ಗಳನ್ನು ನಿಲ್ಲಿಸುವುದು. ಟ್ರಾಫಿಕ್ ಸಿಗ್ನಲ್ ಉಲ್ಲಂಘನೆ, ಫುಟ್ ಪಾತ್ ಒತ್ತುವರಿ ಮೊದಲಾದವುಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮಕ್ಕೆ ಸಭೆ ನಿರ್ಣಯಿಸಬೇಕಿದೆ.

# ಬಹುದಿನಗಳ ಬೇಡಿಕೆಗೆ ಸ್ಪಂದಿಸಿದ ಸಾರಿಗೆ ಇಲಾಖೆ ಗ್ರಾಮಸ್ಥರಿಂದ ವಿಶೇಷ ಪೂಜೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ತಾಲೂಕಿನ ಕಿಲ್ಲನಕೇರಾ ಗ್ರಾಮದಲ್ಲಿ ನೂತನ ಯಾದಗಿರಿ ವಾಯ ರಾಯಚೂರ ಬಸ್ ಗೆ ವಿಶೇಷ ಪೂಜೆಯನ್ನು ಸಲ್ಲಿಸಿ ಚಾಲನೆಯನ್ನು ನೀಡಿದರು.

ಬಹುದಿನಗಳಿಂದ ಬೇಡಿಕೆ–ಯಾಗಿದ್ದು ಈ ಸಮಸ್ಯೆಯನ್ನು ಯಾದಗಿರಿ ಜಿಲ್ಲಾ ಸಾರಿಗೆ ಘಟಕದ ಅಧಿಕಾರಿಗಳು ಜನರ ಅನುಕೂಲಕ್ಕಾಗಿ ಮೂಲಸೌಕರ್ಯಗಳಲ್ಲಿ ಒಂದಾದ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ.

ಕಿಲ್ಲನಕೇರಾ ಗ್ರಾಮಕ್ಕೆ ಮುಂಜಾನೆ, ಮಧ್ಯಾಹ್ನ, ಸಾಯಂಕಾಲ ಬಸ್ಸುಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ, ಆದ್ದರಿಂದ ಗ್ರಾಮದ ಹಿರಿಯ ಮುಖಂಡರಿಂದ ಸಾರಿಗೆ ಪೂಜೆಯನ್ನ ನೆರವೇರಿಸಿ ಸಾರಿಗೆ ನಿಗಮದ ವಿಭಾಗೀಯ ನಿಯತ್ರಣಾಧಿಕಾರಿ ಮಂಜುನಾಥ್, ಹಾಗೂ ವಿಭಾಗೀಯ ಸಾರಿಗೆ ಅಧಿಕಾರಿ ರವೀಂದ್ರ, ಯಾದಗಿರಿ ಘಟಕ ವ್ಯವಸ್ಥಾಪಕರಾದ ರಮೇಶ್ ತಾಳಿಕೋಟಿ ಹಾಗೊ ಸಂಚಾರಿ ನಿರೀಕ್ಷಕ ಮಹಮೂದ್ ರವರಿಗೆ ಹೃದಯ ಸ್ಪರ್ಶಿ ಕೃತಜ್ಞಗಳನ್ನು ಸಲ್ಲಿಸಿದರು.

ಯಾದಗಿರಿ ಕೇಂದ್ರ ಬಸ್ಸು ನಿಲ್ದಾಣದಿಂದ ಬಿಡುವ ಸಮಯ ಬೆಳಿಗ್ಗೆ 8:30 ಯಾದಗಿರಿ 11:15 ರಾಯಚೂರು 14:30, ಯಾದಗಿರಿ 16:00, ಸೈದಾಪುರ 17:30, ಯಾದಗಿರಿ 19:00 ಸೈದಾಪುರ ಈ ಮೇಲಿನ ಸಮಯದಲ್ಲಿ ವಾಯ ಶಟ್ಟಿಕೇರಾ, ಗೌಡಗೇರಾ, ಕಿಲ್ಲನಕೇರಾ, ಸೈದಾಪುರ್ ಮಾರ್ಗದಿಂದ ರಾಯಚೂರಿಗೆ ತಲುಪುತ್ತದೆ,

ಈ ಗ್ರಾಮದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸಕ್ಕಾಗಿ ಹೋಗುವ ವಿದ್ಯಾರ್ಥಿಗಳು, ಸರಕಾರಿ ನೌಕರು, ಖಾಸಗಿ ನೌಕರರಿಗೆ ಮತ್ತು ವಯೋವೃದ್ಧಾರಿಗೆ, ರೈತರಿಗೆ ಹಾಗೂ ರಾಯಚೂರು ಆಸ್ಪತ್ರೆಗೆ /ಮಾರುಕಟ್ಟೆಗೆ ಹೋಗಿಬರಲು ವ್ಯವಸ್ಥೆನ ಕಲ್ಪಿಸಲಾಗಿದೆ ಇದನ್ನು ಪ್ರತಿಯೊಬ್ಬರು ಸದುಪಯೋಗ ಪಡೆದುಕೊಳ್ಳಬೇಕು.

ಈ ಸಂದರ್ಭದಲ್ಲಿ ಸಹಾಯಕ ಸಾರಿಗೆ ನಿರೀಕ್ಷಕ ಮಹಿಮ್ಮದ್, ಮಲ್ಲಿಕಾರ್ಜುನ್ ಮಾಲಿ ಪಟೇಲ್, ಹಳ್ಳೆಪ್ಪ ಧೋತ್ರೆ, ದೊಡ್ಡ ಯಂಕಪ್ಪ, ಬಸವರಾಜ ಬಾವುರ್, ಇಮಾಮ್ ಸಾಬ್, ಹುಸೇನ್ ಸಾಬ್, ಭೀಮರಾಯ ಧೋತ್ರೆ, ಮೋದಿನ್ ಕತ್ತಣೋರ್, ಮಹಬೂಬ್ ಡ್ರೈವರ್, ಹಣಮಂತ ಧೋತ್ರೆ, ಮಲ್ಲಿಕಾರ್ಜುನ ಶೆಟ್ಟಿ , ನಾಗಪ್ಪ ಕುಂಬಾರ್, ಭೀಮರಾಯ ಬಾವುರ, ಹಣಮಂತ ಕಲಾಲ್, ಸಾಬಣ್ಣ, ನಿಂಗಪ್ಪ, ಮಹೆಬೂಬ್ ಕತ್ತಣೋರ್ ಮತ್ತು ಗ್ರಾಮಸ್ಥರು ವಿದ್ಯಾರ್ಥಿಗಳು ಇದ್ದರು.

# ರೈತರ ಬೇಡಿಕೆ ಈಡೇರದಿದ್ದಲ್ಲಿ ಉಗ್ರ ಹೋರಾಟ: ಭೀಮಣ್ಣ ಮೇಟಿ ಎಚ್ಚರಿಕೆ

• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ



ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ರೈತರ ಜಮೀನಿಗಳಿಗೆ ತೇರಳಲು ಅಲ್ಲಲ್ಲಿ ಅಂಡರ್ ಪಾಸ್ ರಸ್ತೆಗಳ ನಿರ್ಮಿಸಿ ರೈತರ ಬೇಡಿಕೆ ಈಡೇರಿಸುವಂತೆ ಕಾಂಗ್ರೆಸ್ ಪ್ರಚಾರ ಸಮಿತಿ ರಾಜ್ಯ ಉಪಾಧ್ಯಕ್ಷ ಡಾ.ಭೀಮಣ್ಣ ಮೇಟಿ ಆಗ್ರಹಿಸಿದ್ದಾರೆ. ಭಾರತದ ಮಾಲಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಂಡರ್ ಪಾಸ್ ರಸ್ತೆ ನಿರ್ಮಿಸುವಂತೆ ಒತ್ತಾಯಿಸಿ ಬುಧವಾರದಂದು ತಾಲೂಕಿನ ಗೋನಾಲ ಗ್ರಾಮದ ರೈತರು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಬೆಂಬಲ ನೀಡಿ ಅವರು ಮಾತನಾಡಿದರು.

ರಸ್ತೆ ನಿರ್ಮಾಣದ ನೆಪದಲ್ಲಿ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಅಧಿಕಾರಿಗಳ ವಿರುದ್ಧ ಕಿಡಿ–ಕಾರಿದರು. ಮೊದಲಿನಿಂದಲೂ ಜಮೀನುಗಳಿಗೆ ಓಡಾಡಲು ಅಲ್ಲಲ್ಲಿ ನಕ್ಷೆಯ ಪ್ರಕಾರ ದಾರಿಗಳಿವೆ ಆದರೆ ಅವುಗಳನ್ನು ಲೆಕ್ಕಿಸದೆ ಅಧಿಕಾರಿಗಳು ಮನಬಂದಂತೆ ರಸ್ತೆ ನಿರ್ಮಿಸಿದ್ದಾರೆ.

ಇದರಿಂದ ರೈತರು ತಮ್ಮ ಜಮೀನಿಗೆ ತೆರಳಲು ತುಂಬಾ ತೊಂದರೆಯಾಗುತ್ತಿದೆ ಕೂಡಲೇ ಜಿಲ್ಲಾಡಳಿತ ಈ ಕುರಿತು ಎಚ್ಚೆತ್ತು–ಕೊಂಡು ರೈತರ ಬೇಡಿಕೆಯನ್ನು ಈಡೇರಿಸಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ರೈತರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಉಗ್ರ ಹೋರಾಟ ಮಾಡುವುದಾಗಿ ಕಾಂಗ್ರೆಸ್ಸಿನ ಪ್ರಚಾರ ಸಮಿತಿ ರಾಜ್ಯ ಉಪಾಧ್ಯಕ್ಷ ಡಾ.ಭೀಮಣ್ಣ ಮೇಟಿ ಎಚ್ಚರಿಸಿದ್ದಾರೆ. ಪ್ರತಿಭಟನೆಯಲ್ಲಿ ಗ್ರಾಮಸ್ಥರು ರೈತರು ಇನ್ನಿತರರು ಇದ್ದರು.

# ಸಂಪೂರ್ಣ ಒಳ ಮೀಸಲಾತಿ ಜಾರಿಗಾಗಿ ಬೃಹತ್ ಪ್ರತಿಭಟನೆ




• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ರಾಜ್ಯಾದ್ಯಂತ ಸಾಮಾಜಿಕ ನ್ಯಾಯಕ್ಕಾಗಿ, ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ಹಾಗೂ ಅಲೆಮಾರಿಗಳು ಸೇರಿದಂತೆ ವಿವಿಧ ಸಂಘಟನೆ ಮುಖಂಡರು ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಮಾತನಾಡಿದ ರಾಜ್ಯ ಸಂಚಾಲಕರಾದ ಕರಿಯಪ್ಪ ಗುಡಿಮನಿ. ರಾಜ್ಯದಲ್ಲಿ ಸಂಪೂರ್ಣ ಒಳಮೀಸಲಾತಿ ಜಾರಿ ಆಗಬೇಕು ಸರ್ಕಾರ ಒಳ ಮೀಸಲಾತಿ ಜಾರಿ ಮಾಡಿ ಕಳೆದ 6 ತಿಂಗಳವಾದರೂ ಇನ್ನೂ ಸಂಪೂರ್ಣವಾಗಿ ಜಾರಿಯಾಗಿಲ್ಲ ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ,ಎಚ್ ಸಿ ಮಹಾದೇವಪ್ಪ ಅವರು ಸ್ವಜಾತಿಗೆ ಸೀಮಿತವಾಗಿ

ಒಳಮೀಸಲಾತಿಯನ್ನೇ ಎಳ್ಳುನೀರು ಬಿಟ್ಟು ಹಳ್ಳ ಹಿಡಿಸಲು ಹುನ್ನಾರ ನಡೆಸಿದ್ದಾರೆ. ಒಳ ಮೀಸಲಾತಿ ವಿರೋಧಿ ವಿದ್ಯಾರ್ಥಿ ಒಕ್ಕೂಟ ರಚನೆ ಮಾಡುವದಕ್ಕೆ ಕಾರಣ–ರಾಗಿದ್ದಾರೆ. ರಾಜ್ಯದಲ್ಲಿ ಮಾದಿಗರು ಒಳ ಮೀಸಲಾತಿ ಹೋರಾಟ ಮಾಡಿದ್ದು.101 ಜಾತಿಗಳ ಸಮುದಾಯಗಳಿಗೆ ನ್ಯಾಯ ಒದಗಿಸಲು ಮುಂದಾಗಬೇಕು. ಸರ್ಕಾರ ನಾಗಮೋಹನದಾಸ ಆಯೋಗ ರಚನೆ ಮಾಡಿದರು. ಆಗಸ್ಟ್19, ಅಧಿವೇಶನದಲ್ಲಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ತೀರ್ಮಾನ ಆಧರಿಸಿ ಒಳ ಮೀಸಲಾತಿ ಜಾರಿ ಮಾಡಿದ ಸರ್ಕಾರ ಅಲೆಮಾರಿ ಸಮುದಾಯಕ್ಕೆ ನರಕ ತೋರಿಸಿದೆ ಎರಡು ಬಾರಿ ಬೆಂಗಳೂರು ವಿಧಾನ ಸೌಧ ಮತ್ತು ಬೆಳಗಾಂ ಸರ್ಕ್ಯೂಟ್ ಹೌಸ್ ನಲ್ಲಿ ಸಭೆ ಮಾಡಿ ಅಲೆಮಾರಿ ಸಮುದಾಯಕ್ಕೆ ನ್ಯಾಯ ಒದಗಿಸಲು ನಾನು ಶತ ಪ್ರಯತ್ನ ಮಾಡಿರುತ್ತೇನೆ. ಈ ಸಮುದಾಯಗಳಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವೆ ಅಂತ ಬರವಸೆ ನೀಡಿದ್ದಾರೆ ಆದ್ರೆ ಇನ್ನೂ ಬೇಡಿಕೆ ಇರೈಸಿಲ್ಲ ಮುಂಬರುವ ಅಧಿವೇಶನದಲ್ಲಿ ಸಂಪೂರ್ಣ ಒಳ ಮೀಸಲಾತಿ ಜಾರಿ ಮಾಡಬೇಕು. ಅಲೆಮಾರಿ ಸಮುದಾಯಕ್ಕೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಲೇಬೇಕು ಹಾಗೂ ಮನವಿ ಪತ್ರದಲ್ಲಿ ತೋರಿಸಿರುವ 7 ಬೇಡಿಕೆ ಈಡೇರಿಸಲು ಹಕ್ಕೊತ್ತಾಯ ಮಾಡುತ್ತೇವೆ. ಉಸ್ತುವಾರಿ ಸಚಿವರಿಗೆ ಜಿಲ್ಲಾಧಿಕಾರಿಗಳ ಪತ್ರದ ಮೂಲಕ ಒತ್ತಾಯಿಸಲಾಗಿದೆ.

ಈ ವೇಳೆ ಹೋರಾಟದಲ್ಲಿ ನಗರಸಭೆ ಮಾಜಿ ಸದಸ್ಯ ಗೋವಿಂದ ರಾಜ್ ,ವಿವಿಧ ಸಂಘಟನೆ ಮುಖಂಡರು ವೀರಸ್ವಾಮಿ, ಬಸವರಾಜ, ಮಾರೇಶ್, ಶೇಷು, ಈಧನಂಜಯ್, ಓಬಳೇಶ್, ರಾಮಲಿ,, ಜಗನ್ನಾಥ , ಜೈರಾಮ ,ಸುಮಲತಾ, ಬಾಲುಮಲ್ಲಿಕಾರ್ಜುನ ಕೋಟಿಗಿನಳ ದೇವಲಾಪುರ ಮಾರೇಶ ಹಾಗೂ ಮುಖಂಡರು. ಪ್ರಮುಖರು ಹೋರಾಟದಲ್ಲಿ ಭಾಗವಹಿಸಿದ್ದರು.

# ವಿಕಲಚೇತನರಿಗೆ ನೆರವು; ಎಪಿಡಿ ಸಂಸ್ಥೆ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ



ಮಲ್ಲಮ್ಮನುಡಿ ವಾರ್ತೆ, ಯಾದಗಿರಿ ಹುಣಸಗಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ಸಂಸ್ಥೆಯ ವತಿಯಿಂದ ವಿಕಲಚೇತನರಿಗೆ ಅಗತ್ಯ ಸಾಧನ ಸಲಕರಣೆಗಳ ಮಾಪನ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದಲ್ಲಿ ವಿವಿಧ ರೀತಿಯ ಶಾರೀರಿಕ ಸಮಸ್ಯೆಯಿಂದ ಬಳಲುತ್ತಿರುವ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ವಿಕಲಚೇತನರಿಗೆ ಅವಶ್ಯಕ ಸಲಕರಣೆಗಳ ಮಾಪನ ಮಾಡಲಾಯಿತು. ಕಾಲಿಪರ್, ವೀಲ್ಚೇರ್, ಸಿ.ಪಿ. ಚೇರ್, ಕೇನ್, ವಾಕಿಂಗ್ ಫ್ರೇಮ್, ಕ್ಯಾಲಿಫರ್, ಲಿಂಬ್ಸ ಹಾಗೂ ಇತರೆ ಸಹಾಯಕ ಉಪಕರಣಗಳಿಗೆ ಒಟ್ಟು 92 ಜನಕ್ಕೆ ಮಾಪನ ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಎಪಿಡಿ ಸಂಸ್ಥೆಯ ಸಿಬ್ಬಂದಿಗಳು ವಿಕಲಚೇತನರಿಗೆ ಮಾರ್ಗದರ್ಶನ ನೀಡಿದರು. ತಾಲೂಕು ಆಸ್ಪತ್ರೆಯ ವೈದ್ಯರು, ಫಿಸಿಯೋಥೆರಪಿಸ್ಟ್ ಹಾಗೂ ಸಿಬ್ಬಂದಿಗಳು ಸಹಕರಿಸಿದರು. ಶಿಬಿರದಲ್ಲಿ ವಿವಿಧ ಗ್ರಾಮಗಳ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಕನ್ನಡ ಶಾಲೆ ಉಳಿಸಿ ಬೆಳೆಸಿ ಮಹಿಳಾ ಘಟಕ ಅಧ್ಯಕ್ಷೆ ನೇಮಕ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕನ್ನಡ ಭಾಷೆ ಮತ್ತು ಸರ್ಕಾರಿ ಕನ್ನಡ ಶಾಲೆಗಳ ಉಳಿಸಿ ಬೆಳೆಸಿ ಬೆಳವಣಿಗೆಗಾಗಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಶಾಲೆ ಉಳಿಸಿ ಬೆಳೆಸಿ ಸಂಘಟನೆಯ ರಾಜ್ಯಾಧ್ಯಕ್ಷ ಉನ್ನೈಸ ಫರಾಜ್ ಯಾದಗಿರಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷ ರುದ್ರಬಿಕಾ ಆರ್ ಪಾಟೀಲ್ ರವರನ್ನು ನೇಮಕಮಾಡಿ ಆದೇಶ ಪತ್ರವನ್ನು ನೀಡಿದರು. ಈ ಸಂದರ್ಭದಲ್ಲಿ ಕನ್ನಡ ಶಾಲೆ ಉಳಿಸಿ ಬೆಳೆಸಿ ಸಂಘಟನೆಯ ಜಿಲ್ಲಾಧ್ಯಕ್ಷ ಡಾ. ಸಿದ್ದಲಿಂಗ ರೆಡ್ಡಿ ಕಂದಕೂರ, ಕಲಬುರಗಿ ಜಿಲ್ಲಾಧ್ಯಕ್ಷ, ಯಾದಗಿರಿ ಯುವ ಘಟಕದ ಅಧ್ಯಕ್ಷ ಭೀಮು ಪೂಜಾರಿ ಮುಂತಾದವರಿದ್ದರು.

# ವಡಗೇರಾದಲ್ಲಿ ಸೂಕ್ತ ಚರಂಡಿ ವ್ಯವಸ್ಥೆ : ಸ್ವಚ್ಛತೆ ಕಾಪಾಡಲು ಕರವೇ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ





ಪಟ್ಟಣದಲ್ಲಿ ಸ್ವಚ್ಛತೆ ಕಾಪಾಡಿ ಚರಂಡಿ ಸಿಸಿ ರಸ್ತೆಗಳ ನಿರ್ಮಾಣಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಕಲ್ಯಾಣ ಕರ್ನಾಟಕ ಅಧ್ಯಕ್ಷ ಶರಣು ಇಟಗಿ ಒತ್ತಾಯಿಸಿದ್ದಾರೆ.ಈ ಕುರಿತು ಪಟ್ಟಣದ ಮೂರು ಮತ್ತು ನಾಲ್ಕನೇ ವಾರ್ಡಿನಲ್ಲಿ ಬರುವ ಬಾಶುಮಿಯಾ ನಾಯ್ಕೋಡಿ ರವರ ಮನೆಯಿಂದ ಶಿವಪುತ್ರಪ್ಪ ಅಂಗಡಿ ರವರ ಕಾಂಪ್ಲೆಕ್ಸ್ ವರೆಗೆ ಮುಖ್ಯ ಚರಂಡಿಯು ಸಂಪೂರ್ಣವಾಗಿ ತುಂಬಿ ಹಲ್ಲಲ್ಲಿ ಹೊಡೆದುಕೊಂಡು ನೀರುಗಳು ಎಲ್ಲೆಂದರಲ್ಲಿ ಹರಿದು ದುರ್ನಾಥ ಬೀರುತ್ತಿದೆ ಈ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತಂದರು ಕೂಡ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪಟ್ಟಣದ ನಿವಾಸಿಗಳಾದ ಬಸವರಾಜ್ ಮಾತಪಳ್ಳಿ, ಮಲ್ಲು ನಾಯಕ್ ಇಟಗಿ ಆರೋಪಿಸಿದ್ದಾರೆ.

ಪಟ್ಟಣಕ್ಕೆ ಬರುವ ಜನರಿಗೆ ಪ್ರಮುಖ ರಸ್ತೆಯಲ್ಲಿನ ಕಸದ ರಾಶಿಯ ಗಬ್ಬುನಾಥದಿಂದ ಮೂಗು ಮುಚ್ಚಿಕೊಂಡು ಓಡಾಡುವಂತ ಪರಿಸ್ಥಿತಿ ಎದುರಾಗಿದೆ ಸಾಕಷ್ಟು ಅನುದಾನ ಇದ್ದರೂ ಕೂಡಾ ಅಧಿಕಾರಿಗಳು ಸ್ವಚ್ಚತೆಗೆ ಆದ್ಯತೆ ನೀಡದೆ ನಿರ್ಲಕ್ಷ ವಹಿಸುತ್ತಿರುವುದು ಸರಿಯಲ್ಲ ಪಟ್ಟಣದಲ್ಲಿ ಅ ಸ್ವಚ್ಛತೆ ಇರುವುದರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿ ಅಲ್ಲಿನ ನಿವಾಸಿಗಳಿಗೆ ರೋಗ ರುಜಿನಿಗಳು ಹರಡುತ್ತಿವೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತುಕೊಂಡು ಪಟ್ಟಣದಲ್ಲಿ ಸ್ವಚ್ಛತೆ ಕಾಪಾಡಿ ಚರಂಡಿಗಳ ನಿರ್ಮಾಣ ಮಾಡಬೇಕು ಒಂದು ವೇಳೆ ನಿರ್ಲಕ್ಷ ವಹಿಸಿದ್ದಲ್ಲಿ ಪಟ್ಟಣದ ಸಾರ್ವಜನಿಕರೊಂದಿಗೆ ಸೇರಿ ಉಗ್ರಹೋರಾಟ ಮಾಡುವುದಾಗಿ ಕರ್ನಾಟಕ ರಕ್ಷಣಾ ವೇದಿಕೆ ಕಲ್ಯಾಣ ಕರ್ನಾಟಕ ಅಧ್ಯಕ್ಷ ಶರಣು ಇಟಗಿ ಎಚ್ಚರಿಸಿದ್ದಾರೆ.

# ಕುಡಿಯುವ ನೀರಿನ ಸಮಸ್ಯೆಕ್ಕೆ ಕಂಟ್ರೋಲ್ ರೂಮ್ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕುಡಿಯುವ ನೀರಿನ ಸಮಸ್ಯೆ ಕುರಿತು ದಾಖಲಾಗುವ ದೂರುಗಳಿಗೆ ಕ್ರಮ ವಹಿಸಲು ಕಂಟ್ರೋಲ್ ರೂಮ್ ಆರಂಭಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ತಿಳಿಸಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮತ್ತು ಸಮಸ್ಯಾತ್ಮಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮುಂದಿನ ಮೂರು ತಿಂಗಳುಗಳ ಕಾಲ ಸಹಾಯವಾಣಿ ಆರಂಭಿಸಿದೆ. ಅವಶ್ಯವಿರುವುದು ಕಂಡು ಬಂದಿರುವುದರಿಂದ ಜಿಲ್ಲಾಮಟ್ಟದಲ್ಲಿ ಹಾಗೂ ತಾಲ್ಲೂಕುವಾರು ಈ ಕೆಳಕಂಡಂತೆ ನೋಡಲ್ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಗಳನ್ನು ನೇಮಿಸಲಾಗಿದೆ.

ಜಿಲ್ಲಾ ಪಂಚಾಯತ ಕಾರ್ಯಾಲಯದಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಸ್ವೀಕೃತ ಹಾಗೂ ದೂರುಗಳನ್ನು ಆಲಿಸಲು ಈ ಸಹಾಯವಾಣಿ ಲ್ಯಾಂಡ್ ಲೈನ್ ಸಂ. 08473253758ಗೆ ಆರಂಭಿಸಿದೆ. ತಾಲೂಕುವಾರು ನೋಡಲ್ ಅಧಿಕಾರಿಗಳ ವಿವರ ಯಾದಗಿರಿ ತಾಲೂಕ ಪಂಚಾಯತ ಸಹಾಯಕ ನಿರ್ದೇಶಕರು (ಮನರೇಗಾ) ಸಹಾಯಕ ನಿರ್ದೇಶಕರು ಮಲ್ಲಣ್ಣ ಮೊ.ನಂ. 9945606247, ಗುರುಮಠಕಲ್ ತಾಲೂಕ ಪಂಚಾಯತ ಸಹಾಯಕ ನಿರ್ದೇಶಕರು ರಾಮಚಂದ್ರ ಬಸೂದೆ ಮೊ.ನಂ.9535311975, ವಡಗೇರಾ ತಾಲೂಕ ಯೋಜನಾಧಿಕಾರಿಗಳು ಶಶಿಧರ ಹಿರೇಮಠ ಮೊ.ನಂ. 9448781142, ಶಹಾಪೂರ ತಾಲೂಕ ಯೋಜನಾಧಿಕಾರಿಗಳು ಹಾಗೂ ವ್ಯವಸ್ಥಾಪಕರು ಅಂಬ್ರೇಶ ಮೊ.ನಂ. 8296342523, ಸುರಪುರ ತಾಲೂಕ ಪಂಚಾಯತ (ಪಂ.ರಾಜ್) ಸಹಾಯಕ ನಿರ್ದೇಶಕರು ಶರಣಗೌಡ ಮೊ.ನಂ. 9880028701, ಹುಣಸಗಿ ತಾಲೂಕ ಪಂಚಾಯತ್ (ಪಂ.ರಾಜ್) ಸಹಾಯಕ ನಿರ್ದೇಶಕರು ಮಲ್ಲನಗೌಡ ಮೊ.ನಂ. 9901531989ಗೆ ಸಂಪರ್ಕಿಸಬೇಕು.

ತಾಲೂಕುವಾರು ಸಹಾಯವಾಣಿ ಸಿಬ್ಬಂದಿಗಳ ವಿವರ ಯಾದಗಿರಿ ತಾಲೂಕ ಪಂಚಾಯತ ವಿಷಯ ನಿರ್ವಾಹಕರು ಹಾಗೂ ಕಾರ್ಯದರ್ಶಿ ಗ್ರೇಡ್–2 ಸಾಯಿಕುಮಾರ ಮೊ.ನಂ.7353135431, ಗುರುಮಠಕಲ್ ತಾಲೂಕ ಪಂಚಾಯತ ವಿಷಯ ನಿರ್ವಾಹಕರು ಪ್ರಥಮ ದರ್ಜೆ ಸಹಾಯಕ ವಿದ್ಯಾಸಾಗರ ಕುಲಕರ್ಣಿ ಮೊ.ನಂ.9886014473, ವಡಗೇರಾ ತಾಲೂಕ ಪಂಚಾಯತ ವಿಷಯ ನಿರ್ವಾಹಕರು ಹಾಗೂ ಕಾರ್ಯದರ್ಶಿ ಗ್ರೇಡ್–1 ಸಂಗೀತಾ ಮೊ.ನಂ.6360906389, ಸುರಪುರ ತಾಲೂಕ ಪಂಚಾಯತ ವಿಷಯ ನಿರ್ವಾಹಕರು ದ್ವಿತೀಯ ದರ್ಜೆ ಸಹಾಯಕ ಬಾಲಾಜಿ ರಜಪೂತ ಮೊ.ನಂ.9964654091, ಸುರಪುರ ತಾಲೂಕ ಪಂಚಾಯತ ವಿಷಯ ನಿರ್ವಾಹಕರು ದ್ವಿತೀಯ ದರ್ಜೆ ಸಹಾಯಕ ವಿಜಯಕುಮಾರ ಮೊ.ನಂ.9900721846, ಹುಣಸಗಿ ತಾಲೂಕ ಪಂಚಾಯತ ವಿಷಯ ನಿರ್ವಾಹಕರು ಹಾಗೂ ಕಾರ್ಯದರ್ಶಿ ಗ್ರೇಡ್–2 ರವಿಶಂಕರ ಅಡ್ಡಿ ಮೊ.ನಂ.9731423525ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉತ್ತಮ ಆರೋಗ್ಯಕ್ಕೆ ಯೋಗ ಸಹಕಾರಿ




• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮನುಷ್ಯನ ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಯೋಗವು ಅತ್ಯಂತ ಸಹಕಾರಿಯಾಗಿದೆ ಎಂದು ಓಂಲಕ್ಷ್ಮಿ ಸೌಹಾರ್ದ ಬ್ಯಾಂಕ್‌ನ ಉಪಾಧ್ಯಕ್ಷ ಓಂಕಾರ ಕನಶೆಟ್ಟೆ ಹೇಳಿದರು.

ಪಟ್ಟಣದ ಮಹರ್ಷಿ ಪತಂಜಲಿ ಲೇಔಟ್ ನಲ್ಲಿ ಓಂ ಲಕ್ಷ್ಮಿ ಸೌಹಾರ್ದ ಬ್ಯಾಂಕ್, ಪತಂಜಲಿ ಯೋಗ ಸಮಿತಿ ಮತ್ತು ಜೈ ಗುರುದೇವ ಯೋಗ ಟ್ರಸ್ಟ್ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಉಚಿತ ಯೋಗ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಯಾವಾಗಲು ನಮ್ಮ ಮನಸ್ಸು ಪ್ರಫುಲ್ಲವಾಗಿರಲು ಧ್ಯಾನ ಹಾಗೂ ಯೋಗ ಸಹಕಾರಿಯಾಗುವುದರಿಂದ ಇವುಗಳಿಂದ ನಮ್ಮ ದಿನಚ–ರಿಯು ಪ್ರಾರಂಭವಾಗಬೇಕು ಎಂದರು.

ತಾಲೂಕು ಪತಂಜಲಿ ಯೋಗ ಸಮಿತಿ ಸಂಚಾಲಕ ಹರಿದೇವ ರುದ್ರಮಣಿ ಮಾತನಾಡಿ, ಪತಂಜಲಿ ಯೋಗ ಸಮಿತಿ ಯೋಗದ ಮೂಲಕ ನಿರಂತರ ಜಾಗೃತಿ ಮೂಡಿಸುತ್ತಿದೆ ಎಂದು ತಿಳಿಸಿದರು. ಪ್ರತಿಯೊಬ್ಬರು ಸರಳ ಮತ್ತು ನಿಯಮಿತ ಯೋಗದ ಮೂಲಕ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಹಿರಿಯ ಯೋಗ ಶಿಕ್ಷಕ ಪಂಡಿತ ಪಾಟೀಲ್, ಜೈ ಗುರುದೇವ ಯೋಗ ಟ್ರಸ್ಟ್ ಅಧ್ಯಕ್ಷ ಸಂತೋಷ ಬಿಜಿ ಪಾಟೀಲ್ ಮಾತನಾಡಿ, ಮಾ.1ರ ವರೆಗೆ ಉಚಿತ ಯೋಗ ಶಿಬಿರ ನಡೆಯಲಿದ್ದು ಸಾರ್ವಜನಿಕರು ಹೆಚ್ಚಿನಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಓಂ ಲಕ್ಷ್ಮಿ ಸೌಹಾರ್ದ ಬ್ಯಾಂಕ್‌ನ ಅಧ್ಯಕ್ಷೆ ಲಕ್ಷ್ಮಿ ಓಂಕಾರ ಕನಶೆಟ್ಟೆ, ನೀಲಕಂಠ ಬಿರಾದಾರ್,

ಮಲ್ಲಿಕಾರ್ಜುನ್ ಕೌಡಗೆ, ಶಿವಕುಮಾರ, ಪುಂಡಲಿಕ, ಪೀರಗುಂಡೆ, ಸುಭಾಷ ಬಾವುಗೆ, ಸಂಜೀವಕುಮಾರ ಪ್ರಭಾ ಸೇರಿದಂತೆ ಹಲವರು ಇದ್ದರು.

# ನೂತನ ನಾಮ ನಿರ್ದೇಶಿತ ಸದಸ್ಯರ ಆಯ್ಕೆಗೆ ಅರ್ಜಿ ಆಹ್ವಾನ.

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಪರಿಶಿಷ್ಟ ಜಾತಿ ಅಲೆಮಾರಿ ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತೀ ಸೂಕ್ಷ [illegible] ಸಮುದಾಯದವರ ನೂತನ ನಾಮ ನಿರ್ದೇಶಿತ ಸದಸ್ಯರ ಆಯ್ಕೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಚನ್ನಬಸಪ್ಪ ಅವರು ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ ಅಲೆಮಾರಿ ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಸಮುದಾಯದವರ ಅಭಿವೃದ್ಧಿಗಾಗಿ ಇರುವ ಹಾಲಿ ಜಿಲ್ಲಾ ಮಟ್ಟದ ಜಿಲ್ಲಾ ಅನುಷ್ಠಾನ ಸಮಿತಿಯ ನಾಮನಿರ್ದೇಶಿತ ಸದಸ್ಯರ ಅವಧಿ ಎರಡು ವರ್ಷ ಮುಗಿದಿದ್ದು, ನೂತನ ಜಿಲ್ಲಾ ಅನುಷ್ಠಾನ ಸಮಿತಿಯ ನಾಮ ನಿರ್ದೇಶಿತ ಸದಸ್ಯರ ಆಯ್ಕೆ ಮಾಡಬೇಕಾಗಿರುವುದರಿಂದ, ಪರಿಶಿಷ್ಟ ಜಾತಿ ಅಲೆಮಾರಿ ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿಗಾಗಿ ಸೇವೆಸಲ್ಲಿಸಿದ ಅನುಭವವುಳ್ಳ ಆಸಕ್ತರಿಂದ 2026ರ ಮಾರ್ಚ್ 25ರ ಒಳಗೆ ಅರ್ಜಿಸಲ್ಲಿಸಬೇಕು. ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಸಿ ಬ್ಲಾಕ್ ಕೊಠಡಿ ಸಂಖ್ಯೆ ಸಿ–1, 2ನೇ ಮಹಡಿ ಜಿಲ್ಲಾಡಳಿತ ಭವನ ಚಿತ್ತಾಪೂರ ರಸ್ತೆ ಯಾದಗಿರಿ ಹಾಗೂ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಯಾದಗಿರಿ ದೂ.ಸಂ. 9480843223, ಶಹಾಪೂರ ದೂ.ಸಂ. 9480843221, ಸುರಪುರ ದೂ.ಸಂ. 9480843222ಗೆ (ಖುದ್ದಾಗಿ) ಆಫ್‌ಲೈನ್ ಮುಖಾಂತರ ಸಲ್ಲಿಸಬೇಕು, ತದನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕಛೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೂಕ್ತ ಗುಣಮಟ್ಟದಿಂದ ನಿಗದಿತ ಅವಧಿ ಒಳಗಡೆ ಕಾಮಗಾರಿ ಮುಗಿಸಿ: ಬಸನಗೌಡ



• ಮಲ್ಲಮ್ಮ ನುಡಿ ವಾರ್ತೆ ಮಸ್ಕಿ

ಪಟ್ಟಣದಲ್ಲಿ ಒಂದು ಕೋಟಿ 80 ಲಕ್ಷ ವೆಚ್ಚದಲ್ಲಿ ನಡೆಯುತ್ತಿರುವ ಒಳಾಂಗಣ ಕ್ರೀಡಾಂಗಣ ಕಾಮಗಾರಿಯನ್ನು ಖಾದಿ ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್ ಬಸನಗೌಡ ತುರುವಿಹಾಳ ಅವರು ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮಸ್ಕಿ ಪಟ್ಟಣವು ತಾಲೂಕು ಕೇಂದ್ರವಾಗಿದ್ದು ಇಲ್ಲಿ ಪ್ರತಿನಿತ್ಯ ಕ್ರೀಡಾಭಿಮಾನಿಗಳಿಗೆ ಹಾಗೂ ಕ್ರೀಡಾಪಟುಗಳಿಗೆ ಸುಸಜ್ಜಿತವಾದ ಒಳಾಂಗಣ ಕ್ರೀಡಾಂಗಣ ನಿರ್ಮಿಸುವುದಕ್ಕಾಗಿ ಈಗಾಗಲೇ ಕಾಮಗಾರಿ ಆರಂಭವಾಗಿದ್ದು ಗುತ್ತಿಗೆದಾರರು ಸಹ ಸೂಕ್ತ ಗುಣಮಟ್ಟದಿಂದ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಮಾಡಿ ಮುಗಿಸಿ ಇದರಿಂದ ಜನರಿಗೆ ಅನುಕೂಲವಾಗಲಿದೆ ಅಲ್ಲದೆ ಮುಂಬರುವ ದಿನಗಳಲ್ಲಿ ಪಟ್ಟಣದ ಅಭಿವೃದ್ಧಿಗಾಗಿ ಇನ್ನಷ್ಟು ಯೋಜನೆಗಳನ್ನು ರೂಪಿಸಲಾಗುವುದು. ಸಾರ್ವಜನಿಕರ ಅನುಕೂಲಕ್ಕಾಗಿ ಸುಸಜ್ಜಿತವಾದ ಉದ್ಯಾನವನವನ್ನು ಸಹ ನಿರ್ಮಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು

ಈ ಸಂದರ್ಭದಲ್ಲಿ ಪುರಸಭೆ ಮುಖ್ಯ ಅಧಿಕಾರಿ ನರಸ ರೆಡ್ಡಿ ಸೇರಿದಂತೆ ಪುರಸಭೆ ಸದಸ್ಯರು ಹಾಗೂ ಇನ್ನಿತರ ಕಾಂಗ್ರೆಸ್ ಮುಖಂಡರಾದ ನಿರುಪಾದೆಪ್ಪ ವಕೀಲರು ಸೇರಿದಂತೆ ಇಂಜಿನಿಯರ್ ತಿಮ್ಮಣ್ಣ ಹಾಗೂ ಇನ್ನಿತರರು ಇದ್ದರು.

# ಜೋಳ ಖರೀದಿಲ್ಲದೆ ರೈತರು ಸಂಕಷ್ಟ, ವಿದೇಶದಲ್ಲಿ ಶಾಸಕರು ಮಂದಹಾಸ: ನಾಡಗೌಡ ವ್ಯಂಗ್ಯ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು




ಈಗಾಗಲೇ ರೈತರು ಜೋಳ ಕಟಾವು ಮಾಡಿ ಸುಮಾರು ಒಂದುವರಿ ತಿಂಗಳ ಕಳೆದರೂ ಸಹ ಇವತ್ತಿನವರೆಗೂ ಸರ್ಕಾರದ ಅಧಿಕಾರಿಗಳು ಜೋಳ ನನ್ನು ಖರೀದಿ ಮಾಡುವುದಕ್ಕೆ ಮುಂದಾಗುತ್ತಿಲ್ಲ. ಎಂದು ರೈತರು ಸಂಕಷ್ಟವನ್ನು ಎದುರಿಸುತ್ತಿದ್ದಾರೆ ಆದರೆ ಅರಿವು ಇಲ್ಲದೇ ಶಾಸಕ ಹಂಪನಗೌಡ ಬಾದರ್ಲಿ ಅವರು ವಿದೇಶಿ ಪ್ರವಾಸ ಕೈಗೊಳ್ಳುವ ಅವಶ್ಯಕತೆ ಇತ್ತು ಎಂದು ಮಾಜಿ ಸಚಿವ ವೆಂಕಟರಾವ್ ನಾಡಗೌಡ ಅವರು ಪ್ರಶ್ನೆ....? ಲೇವಡಿ ಮಾಡಿದರು.

ನಗರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಜೋಳ ಖರೀದಿ ಪ್ರಕಾರ ಖರೀದಿ ಆಗಬೇಕು ಆದರೆ 26 ಇವತ್ತು ನಿರ್ಣಯ ಮಾಡುತ್ತಾರೆ ಎಂದರೆ ಇಷ್ಟು ದಿನ ಶಾಸಕರು ಅಧಿಕಾರಿಗಳು ಏನು ಮಾಡುತ್ತಿದ್ದರು. ಈಗಾಗಲೇ ಮಳೆ ಪ್ರಾರಂಭ ರಾಯಚೂರು ಮಾನ್ವಿ ತಾಲೂಕುಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿ ಮಳೆಯಾಗಿದ್ದು ಇಂತಹ ಸನ್ನಿಧಿ ಪರಿಸ್ಥಿತಿಯಲ್ಲಿ ಶಾಸಕರು ವಿದೇಶ ಪ್ರವಾಸ ಕೈಗೊಳ್ಳುವ ಅವಶ್ಯಕತೆ ಇದೆಯೇ....? ಆದರೆ ಇಲ್ಲಿವರೆಗೂ ಚೀಲ ಖರೀದಿಯಾಗಿಲ್ಲ ಎಂದು ಹೇಳುತ್ತಾರೆ. ಸರ್ಕಾರ ಸತ್ತಿದೊ ಬದುಕಿದೊ ಗೋತ್ತಿಲ್ಲ. ಯಾವಾಗ ನೋಂದಣಿ ಅದು ತಕ್ಷಣ ಚೀಲವನ್ನು ಖರೀದಿ ಮಾಡಬೇಕು ವೇರ್ ಹೌಸ್ (ಗೋಡಾನ್ ಗಳು) ವಾಹನಗಳು. ಹಮಾಲರ ಇವುಗಳನ್ನು ತಯಾರಿ ಮಾಡಿಕೊಳ್ಳುವುದಕ್ಕೆ ಇವರಿಗೇನು ತೊಂದರೆ ಎಂದು ಸರ್ಕಾರಕ್ಕೆ ಮಾಜಿ ಸಚಿವ ನಾಡಗೌಡ ಅವರು ಪ್ರಶ್ನೆ...? ಮಾಡಿದರು.

ಇಷ್ಟೆಲ್ಲಾ ಸಮಸ್ಯೆಗಳು ಅಧಿಕಾರಿಗಳೇ ಗೋತ್ತಿಲ್ಲ.ಸಿದ್ದರಾಮಯ್ಯ ಹಾಗೂ ಡಿ. ಕೆ. ಶಿವಕುಮಾರ್ ಇವರಿಬ್ಬರ ನಡುವೆ ಕುರ್ಚಿ ಗುದ್ದಾಟದಲ್ಲಿ ಯಾವ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ.ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಕೇಳುವವರು ಯಾರು.....? ಸ್ಥಳಿಯ ಶಾಸಕರು ಹೋಗಿ ಕೇಳಬೇಕು...!ಮತ್ತು ಅದನ್ನು ಬಗೆಹರಿಸಬೇಕು.. ಅದು ಅವರು ಜವಾಬ್ದಾರಿ..! ಇದನ್ನು ಅರಿಯದೇ...? ಶಾಸಕರು ಬಾದರ್ಲಿ ಅವರು ವಿದೇಶಿ ಪ್ರವಾಸದಲ್ಲಿ ಮಂದಹಾಸದಿಂದ ಆರಾಮಾಗಿ ಕುಳಿತುಕೊಂಡಿದ್ದಾರೆ.ಎಂದು ಶಾಸಕ ಹಂಪನಗೌಡ ಬಾದರ್ಲಿ ವಿರುದ್ದ ಮಾಜಿ ಸಚಿವ ವೆಂಕಟರಾವ್ ನಾಡಗೌಡ ವಾಗ್ದಾಳಿ ನಡೆಸಿದರು..

ಕಳೆದ ಎರಡು ವರ್ಷ ಹಿಂದೆ ಖರೀದಿ ಮಾಡಿದ್ದು. ಸೋಸೈಟಿಗಳ ಜೋಳ ಖರೀದಿ ಮಾಡಿದ್ದು. 50.60.1ಕೋಟಿ ರೂ ವರೆಗೆ ಹೋಗಿದೆ. ಅವರಿಗೆ ಇವತ್ತಿನವರೆಗೂ ದುಡ್ಡು ಕೊಟ್ಟಿಲ್ಲ. ಯಾಕೆ....? ಮತ್ತೆ ಅವರಿಗೆ ಖರೀದಿ ಮಾಡಿರಿ ಎಂದು ಹೇಳುತ್ತಾರೆ ..

ಸರ್ಕಾರ ದಿವಾಳಿ ಆಗಿದೆ ಅವರಿಗೆ ದುಡ್ಡು ಕೊಡಲಾರದಷ್ಟು ಸರ್ಕಾರಕ್ಕೆ ಬಡತನ ಬಂದಿದೆಯಾ..! ದೊಡ್ಡ ದೊಡ್ಡ ಕಾರ್ಯಕ್ರಮದಲ್ಲಿ ಹಣಕಾಸಿನ ತೊಂದರೆ ಇಲ್ಲ ...! ಎಂದು ಭಾಷಣ ಮಾಡುತ್ತಾರೆ..

ಇಂತಹ ಪರಿಸ್ಥಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಾಗೂ ಡಿಸಿಎಂ ಡಿ ಕೆ ಶಿವಕುಮಾರ್ ಸರ್ಕಾರ ಇದೆ..,? ಎಂದು ವಿರುದ್ದ ವಾಗ್ದಾಳಿ ನಡೆಸಿದರು. ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ಜೋಳವನ್ನು ಖರೀದಿ ಮಾಡಬೇಕು ಮತ್ತು ಬೇರೆ ಬೇರೆ ಕಡೆಗಳಿಂದ ಖರೀದಿ ಮಾಡದೇ ನಮ್ಮಲ್ಲಿ ಖರೀದಿ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಈ ಸಂದರ್ಭದಲ್ಲಿ ಕೆ.ಸತ್ಯನಾರಾಯಣ ಹಂಚಿನಾಳ ಕ್ಯಾಂಪ್. ನಗರ ಸಭೆ ಮಾಜಿ ಸದಸ್ಯರು ಸತ್ಯನಾರಾಯಣ . ನಗರ ಸಭೆ ಮಾಜಿ ಸದಸ್ಯರು ಸಣ್ಣ ವೀರಭದ್ರಪ್ಪ. ಎಸ್. ದೇವೇಂದ್ರ ಗೌಡ. ಕಲ್ಲೂರು ವೆಂಕೋಬಾ ಗೌಡ .ಎಸ್ ಬಿ ಟೇಲರ್. ಸಿಂಧನೂರು ಆಸಿಫ್ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ರಾಜ್ಯದಲ್ಲಿ ಒಳಮೀಸಲಾತಿ ಮುನ್ನವೇ ನೇಮಕಾತಿ ಅಧಿಸೂಚನೆ

# ಛಲವಾದಿ ಸಮಾಜಕ್ಕೆ ಘೋರ ಅನ್ಯಾಯ



• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾಗುವ ಮುನ್ನವೇ ಒಂದು ಸಮುದಾಯದ ಓಲೈಕೆಗಾಗಿ ಅವೈಜ್ಞಾನಿಕ ರೋಸ್ಟರ್ ಬಿಂದು ಆಧರಿಸಿ ವಿವಿಧ ಇಲಾಖೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿರುವುದು ಛಲವಾದಿ ಸಮಾಜಕ್ಕೆ ಮರಣ ಶಾಸನವಾಗಿಸಿದೆ ಎಂದು ಛಲವಾದಿ ಸಮಾಜದ ಮುಖಂಡ ಜೈಭೀಮ್ ಮುತ್ತಗಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿಯೇ ರಾಜ್ಯದಲ್ಲಿ ಇನ್ನೂ ಜಾರಿಯಾಗಿಲ್ಲ, ಅದಕ್ಕೆ ಇನ್ನೂ ರಾಜ್ಯಪಾಲರ ಅಂಕಿತವೇ ಬಿದ್ದಿಲ್ಲ, ಅಲೆಮಾರಿ ಸಮುದಾಯ ಒಳ ಮೀಸಲಾತಿ ಹಂಚಿಕೆ ವಿಷಯವಾಗಿ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದೆ, ಕೇವಲ ಒಂದು ಸಮುದಾಯದ ಓಲೈಕೆ ಮಾಡುವುದಕ್ಕಾಗಿ ರೋಸ್ಟರ್ ಬಿಂದುವಿನ ಮುಖಾಂತರ ವಿವಿಧ ಇಲಾಖೆಗಳ ಖಾಲಿ ಹುದ್ದೆಗಳ ನೇಮಕಾತಿ ಅಧಿಸೂಚನೆ ಹೊರಡಿಸಿರುವುದು ಸರಿಯಲ್ಲ, ಇದು ಛಲವಾದಿ ಸಮಾಜಕ್ಕೆ ಮರಣ ಶಾಸನವಾಗಿದೆ ಅಷ್ಟೇ ಅಲ್ಲದೇ ಪ್ರವರ್ಗ ಬಿ, ಪ್ರವರ್ಗ ಸಿ ಸಮುದಾಯಗಳಿಗೂ ದೊಡ್ಡ ಅನ್ಯಾಯವಾಗಿದೆ, ಒಂದು ಸಮುದಾಯಕ್ಕೆ ಸುಣ್ಣ, ಒಂದು ಸಮುದಾಯದ ಬೆಣ್ಣೆ ಕೊಡುವುದು ಸರಿಯಲ್ಲ ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಸಾಬೂನು-ಮಾರ್ಜಕ ಅಭಿವೃದ್ಧಿ ನಿಗಮ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಅನೇಕ ಹುದ್ದೆಗಳಿಗೆ ಪ್ರವರ್ಗ 1 ರ ಸಮುದಾಯಕ್ಕೆ ಹೆಚ್ಚಿನ ಹುದ್ದೆಗಳನ್ನು ಮೀಸಲಿರಿಸಲಾಗಿದೆ, ನಾವು ಪ್ರವರ್ಗ -1 ರ ಸಮುದಾಯದ ವಿರೋಧಿಗಳಲ್ಲ, ನಮ್ಮ ಹಕ್ಕನ್ನು ಮಾತ್ರ ನಾವು ಕೇಳುತ್ತಿದ್ದೇವೆ, ನ್ಯಾ.ನಾಗಮೋಹನ್‌ದಾಸ್ ವರದಿ ಸಂಪೂರ್ಣ ಒಪ್ಪಿಗೆಯಾಗುವವರೆಗೆ ನೋಟಿಫಿಕೇಷನ್ ಹೊರಡಿಸಬೇಡಿ ಎಂದು ಒತ್ತಾಯಿಸಿದರು.

ಛಲವಾದಿ ಸಮಾಜದವರು ರಾಜ್ಯ ಸರ್ಕಾರದ ಪ್ರಭಾವಿ ಸಚಿವರು, ಶಾಸಕರಿದ್ದಾರೆ, ಆದರೆ ಅವರೆಲ್ಲರೂ ಸೇರಿ ನಮಗೆ ಮರಣ ಶಾಸನ ಬರೆಯಲು ಮುಂದಾಗಿರುವುದು ದುರ್ದೈವ, ಅವರು ನಮ್ಮ ಪರವಾಗಿ ಧ್ವನಿ ಎತ್ತದೇ ಇರುವುದು ನಮಗೂ ನೋವು ತರಿಸಿದೆ ಎಂದರು.

ಸಂಘಟನಾತ್ಮಕವಾಗಿ, ಜನಸಂಖ್ಯೆಯಾಗಿ ಛಲವಾದಿ ಸಮಾಜ ಪ್ರಬಲವಾಗಿದೆ ಆದರೂ ಈ ಸಮಾಜಕ್ಕೆ ಅನ್ಯಾಯ ಮಾಡಲಾಗುತ್ತಿದೆ, ಇನ್ನೂ ಅಲೆಮಾರಿ ಸಮುದಾಯದವರ ನೋವು ಆಲಿಸುವವರು ಯಾರು? ಹೀಗಾಗಿ ಧ್ವನಿ ಇಲ್ಲದ ಅಲೆಮಾರಿ ಸಮುದಾಯಗಳಿಗೂ ಸಹ ಯಾವ ಅನ್ಯಾಯವಾಗಬಾರದು ಎಂಬುದು ನಮ್ಮ ಭಾವನೆ, ಛಲವಾದಿ ಸಮಾಜದವನ್ನು ಈ ಸರ್ಕಾರ ಕಡೆಗಣಿಸಿದರೆ ಮುಂದೆ ಈ ಸರ್ಕಾರ ಅಸ್ತಿತ್ವಕ್ಕೆ ಬರುವುದು ಕಷ್ಟವಾಗುತ್ತದೆ ಎಂದರು.

ಈ ಪತ್ರಿಕಾಗೋಷ್ಠಿಯಲ್ಲಿ ಛಲವಾದಿ ಸಮಾಜ ಮುಖಂಡರಾದ ಗುರು ಪ್ರಸಾದ್, ಗುರುರಾಜ್ ಓಲೇಕಾರ, ಹುಚ್ಚಪ್ಪ ಬಾವಿಮನಿ ಮೊದಲಾದವರು ಉಪಸ್ಥಿತರಿದ್ದರು.

# ಹೆಣ್ಣು ಅಬಲೆ ಯಲ್ಲ ಸಬಲೆ: ಕಲ್ಯಾಣಿ ಅಭಿಮತ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ




ಮಹಿಳೆ ತಾಯಿಯಾಗಿ ಶಿಕ್ಷಕಿಯಾಗಿ ಅಕ್ಕನಾಗಿ ನಾಯಕಿಯಾಗಿ ಮಗಳಾಗಿ ಸಮಾಜದಲ್ಲಿ ಎಲ್ಲರೊಳಗೆ ನೆಲೆ ನಿಲ್ಲುತ್ತಾಳೆ, ನೋವು ನಲಿವಿನಲ್ಲಿ ಸಹಭಾಗಿ ಆಗುತ್ತಾಳೆ, ಸಮಾನತೆಗೆ ಅಂತರಂಗ ಮತ್ತು ಬಹಿರಂಗದ ಸಂವೇದನೆಗಳು ಬಹಳ ಪ್ರಮುಖ ಪಾತ್ರ ವಹಿಸುತ್ತವೆ. ಧರ್ಮಗಳು ತಾತ್ವಿಕ ನೈತಿಕತೆಯನ್ನು ತಿಳಿಸುವುದರ ಜೊತೆಗೆ ಎಲ್ಲರನ್ನೂ ಪ್ರೀತಿಸುವ ಗುಣವನ್ನು ಎಲ್ಲಾ ಧರ್ಮಗಳು ತಿಳಿಸುತ್ತವೆ, ಎಂದು ಡಾ. ಕಲ್ಯಾಣಿ ಅಭಿಪ್ರಾಯಪಟ್ಟರು.

ಶ್ರೀಮತಿ ಅಲ್ಲಮ್ಮ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದಿಂದ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಹೆಣ್ಣಿನ ಮಹತ್ವವನ್ನು ವಿವರಿಸಿದರುಯಪ್ರಾರ್ಥನೆಯನ್ನು ಕಾಲೇಜಿನ ವಿದ್ಯಾರ್ಥಿನಿಯಾದ ಕುಮಾರಿ ಕೆ ಎಮ್ ಚೈತನ್ಯ ನೆರವೇರಿಸಿದರು, ಗಣ್ಯಮಾನ್ಯರನ್ನು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸುವರ್ಣಮ್ಮ ಡಿ ಸಹಾಯಕ ಪ್ರಾಧ್ಯಾಪಕರು ಸ್ವಾಗತಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷರಾದ ನಾಗರೆಡ್ಡಿ ಕೆ.ವಿ.ಮಾತನಾಡಿ, ಗಡಿಭಾಗದಲ್ಲಿರುವ ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವವನ್ನು ತಾವೆಲ್ಲರೂ ಮಾಡಿಕೊಳ್ಳಿ ಎಂದು ಮನವಿ ಮಾಡಿಕೊಂಡರು. ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷರು ಶ್ರೀಮತಿ ಎಂ ಕಾತ್ಯಾಯಿನಿ ಮರಿದೇವಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಿ, ಕನ್ನಡ ಉಳಿಸಿ ಬೆಳೆಸುವುದರ ಜೊತೆಗೆ ನಾವೆಲ್ಲರೂ

ಅಭಿಮಾನದಿಂದ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕು, ಇಂತಹ ದತ್ತಿಗಳನ್ನು ನೀಡುವುದರಿಂದ ಸಾಹಿತ್ಯ ಪರಿಷತ್ತು ನಿರಂತರವಾಗಿ ಆ ಕುಟುಂಬವನ್ನು ಸ್ಮರಣೆ ಮಾಡುತ್ತದೆ ಎಂದು ತಮ್ಮ ಉದ್ಘಾಟನಾ ನುಡಿಯಲ್ಲಿ ನುಡಿದರು.

# ಶಾಂತಿವರ್ಧಕ: ವಿದ್ಯಾರ್ಥಿಗಳಿಗೆ ಬಿಳ್ಕೊಡುಗೆ



• ಮಲ್ಲಮ್ಮ ನುಡಿ ವಾರ್ತೆಕಮಲನಗರ

ಪಟ್ಟಣದ ಶಾಂತಿವರ್ಧಕ ಪಪೂ ಕಾಲೇಜಿನ ಹಮ್ಮಿಕೊಂಡಿದ್ದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಬಿಳ್ಕೊಡುಗೆ ಅದ್ದೂ-ರಿಯಾಗಿ ನಡೆಯಿತು.ಪಾಲಕ ಪ್ರತಿನಿಧಿ ಬಾಬುರಾವ್ ಪಾಟೀಲ ಮಾತನಾಡಿ,ವಿದ್ಯಾರ್ಥಿಗಳು ನಿರಂತರ ಶ್ರದ್ಧೆಯಿಂದ ಅಧ್ಯಯನ ಮಾಡಿದರೆ ಉತ್ತಮ ಫಲಿತಾಂಶ ಬರುವ ಮೂಲಕ ಯಶಸ್ಸು ಲಭಿಸುತ್ತದೆ ಎಂದು ಹೇಳಿದರು.

ಮೊಬೈಲ್ ಸಂಸ್ಕೃತಿಯಿಂದ ದೂರವಿರಿ: ವಿದ್ಯಾರ್ಥಿಗಳು ಮೊಬೈಲ್, ವಾಟ್ಸಪ್, ಫೇಸ್‌ಬುಕ್ ಸಂಸ್ಕೃತಿಯಿಂದ ಹೊರಬಂದು ತಮ್ಮ ಪರಿಪೂರ್ಣ ಸಮಯವನ್ನು ಕಲಿಕಾ ಸಾಮರ್ಥ್ಯದ ಹೆಚ್ಚಳಕ್ಕೆ ಮೀಸಲಿಡಬೇಕು ಎಂದು ಅವರು ಸಲಹೆ ನೀಡಿದರು.

ಮುಖಂಡ ಪ್ರವೀಣ ಪಾಟೀಲ ಮಾತನಾಡಿ,ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಯುತ ಶಿಕ್ಷಣ ನೀಡುವುದು ಅತ್ಯಗತ್ಯ. ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಸಾಧನೆ ಮಾಡಬೇಕು ಹೇಳಿದರು.

ಪ್ರಾಚಾರ್ಯ ಶಿವಾಜಿ.ಆರ್.ಎಚ್: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳಿಗೆ ಭವಿಷ್ಯದಲ್ಲಿ ಉನ್ನತ ಸಾಧನೆ ಮಾಡಿ ಕಾಲೇಜಿನ ಹಾಗೂ ಸಂಸ್ಥೆ ಹೆಸರು ತರಂತೆ ಸಂಕಲ್ಪ ಇಟ್ಟುಕೊಳ್ಳಿ ಎಂದು ಸಲಹೆ ನೀಡಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಸಿದ್ದರಾಮೇಶ್ವರ ಪದವಿ ಕಾಲೇಜಿನ ಪ್ರಾಚಾರ್ಯ ರಮೇಶ ಚವ್ಹಾಣ, ಐಟಿಐ ಕಾಲೇಜಿನ ಪ್ರಾಚಾರ್ಯ ಯುವರಾಜ ಬಿರಾದಾರ, ಮುಖ್ಯಶಿಕ್ಷಕ ಜ್ಞಾನೇಶ್ವರ ಚಾಂಡೇಶ್ವರೆ, ರಾಮೇಶ್ವರ ಬಿರಾದಾರ ಹಾಗೂ ಕಾಲೇಜಿನ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸ್ವಾಗತ ಭಾಷಣ ಓಂಕಾಂತ ಸೂರ್ಯವಂಶಿ ಮಾಡಿದರು.ನಿರೂಪಣೆಯನ್ನು ವಿಜಯಕುಮಾರ್ ವಾರದ ಹಾಗೂ ಕಾದಂಬಿನಿ ಮೇತ್ರೆ ನಡೆಸಿಕೊಟ್ಟರು.ವಂದನಾರ್ಪಣೆ ಕಾಳಿದಾಸ ಬೋಥೆ ಮಾಡಿದರು.

# ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ(ಯುಗಮಾನೋತ್ಸವ) ಆಚರಣೆ ಕಾರ್ಯಕ್ರಮವನ್ನು ಮಾರ್ಚ್ 1 ರಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ರಾಬಕೊವಿ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷರು ಹಾಗೂ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ, ಗಂಗಾವತಿ ಶಾಸಕರಾದ ಜಿ.ಜನಾರ್ಧನರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ.ನಮೋಶಿ, ಡಾ.ಚಂದ್ರಶೇಖರ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ, ಮುನಿರಾಬಾದ್ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆಯ ಅಧ್ಯಕ್ಷರಾದ ಹಸನ್ ಸಾಬ್ ನಬೀಸಾಬ ದೋಟಿಹಾಳ, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರಸನ್ನ ವಿ. ಗಡಾದ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಪಾಲ್ಗೊಳ್ಳುವರು.

ವಿಶೇಷ ಆಹ್ವಾನಿತರಾಗಿ ಕೃಷ್ಣಭಾಗ್ಯ ಜಲ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನ್ ರಾಜ್ ಅವರು ಭಾಗವಹಿಸುವರು.

ಶಿವಮೊಗ್ಗದ ಸಹ್ಯಾದ್ರಿ ವಿಜ್ಞಾನ ವಿಭಾಗದ ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಪ್ರೊ.ಹಾ.ಮಾ.ನಾಗಾರ್ಜುನ ಅವರು ಜಗದ್ಗುರು ಶ್ರೀ ರೇಣುಕಾಚಾರ್ಯ ರವರ ಕುರಿತು ವಿಶೇಷ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ದಿ ಹಾಗೂ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಚಿವ ಸಂತೋಷ್ ಲಾಡ್ ಹುಟ್ಟುಹಬ್ಬವನ್ನು ಆಪತ್ ರಕ್ಷಕರ ದಿನಾಚರಣೆಯಾಗಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)



ಸಂಜೀವಿನಿ ಜೀವ ರಕ್ಷಕ ಟ್ರಸ್ಟ್(ರಿ) ಕರ್ನಾಟಕ ವತಿಯಿಂದ ಕಾರ್ಮಿಕ ಸಚಿವರಾದ ಸಂತೋಷ್ ಲಾಡ್ ಅವರ ಹುಟ್ಟುಹಬ್ಬದ ದಿನವನ್ನು ಆಪತ್ ರಕ್ಷಕರ ದಿನಾಚರಣೆಯನ್ನಾಗಿ ಆಚರಣೆ ಮಾಡಲಾಗುವುದು ಎಂದು ಸಂಜೀವಿನಿ ಜೀವ ರಕ್ಷಕ ಟ್ರಸ್ಟ್ ಸಂಸ್ಥಾಪಕರು ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಡಾ। ಸೌಮ್ಯ ಮಂಜುನಾಥ ಸ್ವಾಮಿಯವರು ತಿಳಿಸಿದರು. ಪತ್ರಿಕೆಗಾರರೊಂದಿಗೆ ಮಾತನಾಡಿದ ಅವರು, ಓರಿಸ್ಸಾದ ರೈಲು ದುರಂತ, ಕೇರಳದ ಗುಡ್ಡ ಕುಸಿತ, ಕೇದಾರನಾಥದಲ್ಲಿ ಪ್ರವಾಹ, ಬಾರಿ ಅಪಘಾತ, ತುರ್ತು ಪರಿಸ್ಥಿತಿಗಳಲ್ಲಿ ಸಾರ್ವಜನಿಕ ನೆರವಿಗೆ ನಿಂತು ಸಾವಿರಾರು ಜನರ ರಕ್ಷಣೆಯನ್ನ ಮಾಡಿದ್ದಾರೆ.ಸಾರ್ವಜನಿಕರ ನೆರವಿಗೆ ನಿಂತು ಸಾವಿರಾರು ಜನರ ರಕ್ಷಣೆ ಮಾಡುತಂತಹ ಸಚಿವರನ್ನು ಗೌರವಿಸುವುದು ನಾಗರಿಕರ ಕರ್ತವ್ಯವಾಗಿದೆ ಎಂದರು.ಕರ್ನಾಟಕ ರಾಜ್ಯದ 20 ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಸಚಿವ ಸಂತೋಷ್ ಲಾಡ್ ಅವರ ಹುಟ್ಟುಹಬ್ಬವನ್ನು ಆಪತ್ ರಕ್ಷಕಕರ ದಿನವೆಂದು ಆಚರಣೆ ಮಾಡಲಾಗುತ್ತಿದೆ ಎಂದು ವಿಜಯನಗರ ಜಿಲ್ಲಾಧ್ಯಕ್ಷರು ನೀಲಪ್ಪಬಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ವಿಜಯನಗರ ಜಿಲ್ಲೆ ಅಂಬೇಡ್ಕರ್ ಭವನ ಕಾಮಧೇನು ಸ್ವೀಟ್ ಬೇಕರಿ ಹತ್ತಿರ ಹೊಸಪೇಟೆಯಲ್ಲಿ ಫೆಬ್ರವರಿ 27 ರಂದು ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು.

ಈ ಸಂದರ್ಭದಲ್ಲಿ ವಿಜಯನಗರ ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದಂತಹ 30 ಜನರಿಗೆ ಸನ್ಮಾನ ಮಾಡಲಾಗುವುದು ಎಂದು ತಿಳಿಸಿದರು.

# ಕುರಿಗಾಹಿಗಳಿಗೆ ನೀಡುವ ಸೌಲಭ್ಯಗಳ ಆಯ್ಕೆ ಸಮಿತಿಗೆ ಸಿಇಓ ಅವರನ್ನೇ ಅಧ್ಯಕ್ಷರಾಗಿ ಮಾಡಿ: ಪಂಡಿತ ಚಿದ್ರಿ

• ಮಲ್ಲಮ್ಮ ನುಡಿ ವಾರ್ತೆ ಬೀದರ




ಈ ಹಿಂದೆ ರಾಜ್ಯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಮೂಲಕ ಕುರಿಗಾಹಿಗಳ ಸಂಘ-ಸಂಸ್ಥೆಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತಿತ್ತು. ಆದರೆ ಫೆ. 23 ರಂದು ಸರ್ಕಾರವು ಕುರಿಗಾಹಿಗಳಿಗೆ ಒದಗಿಸುವ ವಿವಿಧ ಸೌಲಭ್ಯಗಳ ಆಯ್ಕೆ ಸಮಿತಿಗೆ ಆಯಾ ಕ್ಷೇತ್ರದ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಇದರಿಂದ ಕುರಿಗಾಹಿಗಳ ಸಂಘಗಳಿಗೆ ಹಾಗೂ ಫಲಾನುಭವಿಗಳಿಗೆ ಅನ್ಯಾಯವಾಗುವ ಸಂಭವವೇ ಹೆಚ್ಚು. ಆದ್ದರಿಂದ ಅಧ್ಯಕ್ಷ ಸ್ಥಾನದಿಂದ ಶಾಸಕರನ್ನು ಕೈಬಿಡಬೇಕೆಂದು ಕುರಿ ಮತ್ತು ಮೇಕೆ ಮಹಾಮಂಡಳದ ರಾಜ್ಯ ನಿರ್ದೇಶಕ ಪಂಡಿತರಾವ ಚಿದ್ರಿ ತಿಳಿಸಿದರು.

ಈ ಕುರಿತು ಗುರುವಾರ ಜಿಲ್ಲಾ ಪತ್ರಿಕಾ ಭವನದಲ್ಲಿ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಡಿ.ದೇವರಾಜ್ ಅರಸ್ ಅಭಿವೃದ್ಧಿ ನಿಗಮದಲ್ಲಿ ಒಟ್ಟು 11 ನಿಗಮಗಳಿವೆ. ಜೊತೆಗೆ ಬಂಜಾರಾ ಅಭಿವೃದ್ಧಿ ನಿಗಮ, ಆದಿಜಾಂಬವ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ ಮತ್ತು ಅಂಬೇಡ್ಕರ್ ಅಭಿವೃದ್ಧಿ ನಿಗಮ ಈ 15 ನಿಗಮಗಳಿಗೆ ಜಿಲ್ಲಾ ಪಂಚಾಯತ್ ಸಿಇಓ ಅವರೇ ಅಧ್ಯಕ್ಷರಾಗಿದ್ದಾರೆ. ಆದರೆ ರಾಜ್ಯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮಕ್ಕೆ ಮಾತ್ರ ಕಳೆದ ಕೆಲವು ದಿವಸಗಳ ಹಿಂದೆ ಸರ್ಕಾರ ಆಯಾ ಕ್ಷೇತ್ರದ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ. ಶಾಸಕರು ತಮ್ಮ ಕಾರ್ಯಕರ್ತರ ಮೂಲಕ ಅಥವಾ ಮುಖಂಡರ ಮೂಲಕ ಅನ್ಯರಿಗೆ ಜವಾಬ್ದಾರಿ ಒಪ್ಪಿಸುತ್ತಾರೆ. ಹೀಗಿರುವಾಗ ನಿಜವಾದ ಕುರಿಗಾಹಿಗಳಿಗೆ, ಕುರಿಗಾಹಿ ಸಂಘ ಸಂಸ್ಥೆಗಳ ಫಲಾನುಭವಿಗಳಿಗೆ ಸೌಲಭ್ಯ ಸಿಗುವುದು ವಿರಳ.ಆದ್ದರಿಂದ ಕೂಡಲೇ ಆಯ್ಕೆ ಸಮಿತಿ ಅಧ್ಯಕ್ಷ ಸ್ಥಾನದಿಂದ ಶಾಸಕರನ್ನು ಕೈಬಿಟ್ಟು ಈ ಹಿಂದಿನಂತೆ ಜಿ.ಪಂ. ಸಿಇಓ ಅವರಿಗೆ ಅಧ್ಯಕ್ಷ ಸ್ಥಾನ ನೀಡಿ ಕುರಿಗಾಹಿಗಳಿಗೆ ಸೌಲಭ್ಯ ಒದಗಿಸಬೇಕೆಂದು ಪಂಡಿತರಾವ ಚಿದ್ರಿ ತಿಳಿಸಿದರು.

ರಾಜ್ಯದಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಡಿಯಲ್ಲಿ ಒಟ್ಟು 800 ಕುರಿ ಮತ್ತು ಮೇಕೆ ಸಹಕಾರ ಸಂಘಗಳಿವೆ.ಕುರಿ ಮತ್ತು ಮೇಕೆ ಮಹಾಮಂಡಳ ಅಡಿಯಲ್ಲಿ 400 ಸಹಕಾರ ಸಂಘಗಳು ಹಾಗೂ ಶೇರುದಾರರಿದ್ದಾರೆ. 1 ಕೋಟಿ 50 ಲಕ್ಷ ಕುರಿ ಹಾಗೂ ಮೇಕೆಗಳಿವಿ. ಎರಡೂ ಸಂಘ ಸೇರಿ 1 ಲಕ್ಷ 25 ಸಾವಿರ ಸದಸ್ಯರಿದ್ದಾರೆ. ಅವುಗಳಿಗೆ ನಿಗಮದ ವತಿಯಿಂದಲೇ ಜಿ.ಪಂ.ಸಿಇಓ ಅವರ ಅಧ್ಯಕ್ಷತೆಯಲ್ಲಿ ಔಷಧ, ಶಾಮಿಯಾನ, ಬ್ಯಾಟರಿ, ಸಾಲ ಸೌಲಭ್ಯ, ಕುರಿ ಸಂಘಗಳಿಗೆ 5 ಲಕ್ಷ ಸಹಾಯಧನ, ಕುರಿಗಾಹಿಗಳಿಗೆ ಗುರುತಿನ ಚೀಟಿ, ಸತ್ತ ಕುರಿಗಳಿಗೆ ಪರಿಹಾರವನ್ನು ಆಯಾ ಕುರಿಗಾಹಿ ಸಂಘಗಳ ಮೂಲಕ ಧೃಢೀಕರಣ ಪತ್ರ ತೆಗೆದುಕೊಂಡು ಸೌಲಭ್ಯ ನೀಡುತಿದ್ದರು. ಈ ಎಲ್ಲಾ ಮಾಹಿತಿ ಶಾಸಕರಿಗೆ ಗೊತ್ತಿರುವುದಿಲ್ಲ. ಆದ್ದರಿಂದ ನಿಜವಾದ ಫಲಾನುಭವಿಗಳಿಗೆ ಅನ್ಯಾಯವಾಗಬಾರದೆಂಬುದು ನಮ್ಮ ಅಭಿಪ್ರಾಯ.

ಒಂದು ವೇಳೆ ಶಾಸಕರನ್ನೇ ಆಯ್ಕೆ ಸಮಿತಿಗೆ ಅಧ್ಯಕ್ಷರನ್ನಾಗಿ ಮುಂದುವರೆಸುವುದಾದರೆ ಈ ಮೇಲಿನ ಎಲ್ಲಾ ಮಾಹಿತಿಯನ್ನು ಸಂಗ್ರಹಿಸಿ ಶಾಸಕರು ಕುರಿಗಾಹಿ ಸಂಘಗಳಿಗೆ ಧೃಢೀಕರಣ ಪತ್ರ ತೆಗೆದುಕೊಂಡು ಸೌಲಭ್ಯಗಳನ್ನು ಒದಗಿಸಬೇಕೆಂದು ಚಿದ್ರಿ ಸಿಎಂ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

ಕುರಿಗಾಹಿಗಳ ಹಿತದೃಷ್ಟಿಯಿಂದ ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಕುರಿ ಮತ್ತು ಮೇಕೆ ಸಂಘಗಳ ಹಾಗೂ ಮಹಾಮಂಡಳ ಪದಾಧಿಕಾರಿಗಳ ಸಭೆ ಕರೆದು ಇದರ ಸಾಧಕ ಬಾಧಕ ಕುರಿತು ಚರ್ಚಿಸಿ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ಪಂಡಿತರಾವ ಚಿದ್ರಿ ತಿಳಿಸಿದರು.

ಕರ್ನಾಟಕ ಸಹಕಾರ ಉಣ್ಣೆ, ಕೈಮಗ್ಗ ಮತ್ತು ನೇಕಾರರ ಮಹಾಮಂಡಳ ಚಳ್ಳಕೆರೆಯ ನಿರ್ದೇಶಕ ಶಿವರಾಜ ಮಲ್ಲೇಶಿ ಮಾತನಾಡಿ ಸುಮಾರು 777 ಜನರಿಗೆ ವರ್ಷಕ್ಕೆ 800 ಕೋಟಿ ಅನುದಾನ ಕೊಡಬೇಕೆಂಬ ನಿಯಮವಿದೆ. ಹೀಗಾಗಿ ಬೀದರ ಜಿಲ್ಲೆಯಲ್ಲಿಯೇ 40 ಕುರಿ ಸಂಘಗಳಿವೆ. ಅವುಗಳಲ್ಲಿ 38 ಸಂಘಗಳಿಗೆ ಕೊಡುತ್ತಾರೆ. ಉಳಿದ ಎರಡು ಸಂಘಗಳಿಗೆ ಮುಂದಿನ ವರ್ಷ ಆಯ್ಕೆ ಮಾಡುತ್ತಾರೆ. ಈ ಎಲ್ಲಾ ಮಾಹಿತಿ ಕೇವಲ ಅಧಿಕಾರಿಗಳ ಹತ್ತಿರವಿದೆ. ಶಾಸಕರಿಗೆ ಈ ಆಯ್ಕೆ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿ ಜವಾಬ್ದಾರಿ ನೀಡಿದಾಗ ಮಾಹಿತಿ ಕೊರತೆಯಿಂದ ನಿಜವಾದ ಕುರಿಗಾಹಿ ಫಲಾನುಭವಿಗಳಿಗೆ ಅನ್ಯಾಯವಾಗುವ ಸಂಭವವಿದೆ. ಆದ್ದರಿಂದ ಶಾಸಕರನ್ನೇ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಸುವುದಾದರೆ ಸಮಗ್ರ ಮಾಹಿತಿ ಪಡೆದು ಕೇವಲ ನಿಜವಾದ ಫಲಾನುಭವಿಗಳಿಗೆ ಮಾತ್ರ ನೀಡಬೇಕೆಂದು ತಿಳಿಸಿದರು.

ಇದೇ ವೇಳೆ ಪ್ರಮುಖರಾದ ಚಂದ್ರಕಾಂತ ನೇಳಗೆ, ಲೋಕೇಶ ಜಬಾಡೆ, ಅಮೃತ ವಗ್ಗೆ, ಶಾಮರಾವ ರಕ್ಷಾಳ, ಅಶೋಕ ಹಳೆಂಬುರ, ಶ್ರೀನಿವಾಸ ಮೇತ್ರೆ, ಬಾಲಾಜಿ ಜಬಾಡೆ, ನರಸಿಂಗ್ ಸೋನಾಳ, ಸಂಜುಕುಮಾರ ಅಲ್ಲೂರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮಾ.2 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ




**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಅಂಗನಾವಾಡಿ ಕಾರ್ಯಕತೆ-ಯರ, ಸಹಾಯಕಿಯರ ಗೌರವ ವೇತನವನ್ನು ಬರುವ ಬಜೆಟ್ ನಲ್ಲಿ ರಾಜ್ಯ ಸರ್ಕಾರ ಹೆಚ್ಚಳ ಮಾಡಬೇಕು ಎಂದು ಮಾ.2 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಎಐಟಿಯುಸಿಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ನ ರಾಜ್ಯ ಅಧ್ಯಕ್ಷ ಬಿ. ಅಮ್ಜದ್ ಹೇಳಿದ್ದಾರೆ.ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿದ ಅವರು. ಕಳೆದ 50 ವರ್ಷಗಳ ಹಿಂದೆ ಜಾರಿಗೆ ಬಂದ ಈ ಐಸಿಡಿಎಸ್ ಯೋಜನೆಯಡಿ ದೇಶದಲ್ಲಿ 28 ಲಕ್ಷ ದುಡಿಯುವ ನೌಕರರಿಗೆ ಗೌರವ ಧನ ನೀಡುತ್ತಲೇ ಬಂದಿವೆ ಕೇಂದ್ರ ಸರ್ಕಾರ ಮತ್ತು ರಾಜ್ಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರಿಗೂ ಉದ್ಯೋಗ ಭದ್ರತೆ ನೀಡಿಲ್ಲ. ಮಕ್ಕಳು, ಗರ್ಭಿಣಿಯರ ಹಾರೈಕೆ ಮರ್ದಲಾದವುಗಳಲ್ಲಿ ಪರಿಣಾಮಕಾರಿಯಾಗಿ ದುಡಿಯುವ ಇವರಿಗೆ ಸೂಕ್ತ ವೇತನ ಇಲ್ಲ. ನಮ್ಮ ರಾಜ್ಯದಲ್ಲಿ ಕಾರ್ಯಕರ್ತೆಗೆ ಮಾಸಿಕ 12 ಸಾವಿರ, ಸಹಸಯಕಿಯರಿಗೆ 7 ಸಾವಿರ ಇದ್ದು. ಅದನ್ನು 15 ಮತ್ತು 10 ಸಾವಿರಕ್ಕೆ ಹೆಚ್ಚಿಸುವುದಾಗಿ ಹೇಳಿದ್ದ ಸರ್ಕಾರ ಈ ವರಗೆ ಹೆಚ್ಚಿಸಿಲ್ಲ. ಜೊತೆಗೆ ಬಿಎಲ್ ಓ ಕರ್ತವ್ಯವನ್ನು ಮೊಬೈಲ್ ನಲ್ಲಿ ಮಾಡಬೇಕು. ಅದು ಸಾಧ್ಯವಾಗುತ್ತಿಲ್ಲ. ಈ ಹೊರೆ ನಮ್ಮ ಮೇಲೆ ಬೇಡ ಎಂದರು. ಕೇಂದ್ರ ಸರ್ಕಾರವೂ ಈ ಸಾಲಿನ ಬಜೆಟ್ ನಲ್ಲಿ ಅಂಗನವಾಡಿ ನೌಕರರ ಬೇಡಿಕೆ ಈಡೇರಿಸಿಲ್ಲ. ಅದಕ್ಕಾಗಿ ಮಾ.2 ರಂದು. ಬರುವ ರಾಜ್ಯದ ಬಜೆಟ್ ನಲ್ಲಿ ಸರ್ಕಾರಿ ನೌಕರರಿಗೆ ದೊರೆಯುವಂತೆ ವೇತನ ಹೆಚ್ಚಳ ಮಾಡಬೇಕು. ಗ್ರಾಚುಟಿ ನೀಡಬೇಕು. ಎಂದು ಪ್ರತಿಭಟನೆ ಮಾಡಲಿದೆಂದರು. ಸಂಘದ ರಾಜ್ಯ ಕಾರ್ಯದರ್ಶಿ ಜಯಮ್ಮ, ಜಿಲ್ಲಾ ಅಧ್ಯಕ್ಷೆ ಅರ್ಕಾಣಿ , ಕವಿತಾ, ಇಂದಿರಾ, ವೀಣಾ, ಈರಮ್ಮ,,ಜನಾರ್ಧನ ಮೊದಲದವರು ಸುದ್ದಿಗೋಷ್ಟಿಯಲ್ಲಿ ಇದ್ದರು.

## ಕರುವಿಗೆ ಜನ್ಮ ನೀಡಿದ ಗೋಮಾತೆಯ ರಕ್ಷಣೆ



ಗೋಕರ್ಣ:ಚಿನ್ನದಕೇರಿಯಲ್ಲಿ ಕರುವಿಗೆ ಜನ್ಮ ನೀಡಿದ ಗೋಮಾತೆಯ ರಕ್ಷಣೆ ಮಾಡಿದ ವಿದ್ಯಮಾನ ನಡೆದಿದೆ. ಕರುವಿಗೆ ಜನ್ಮ ನೀಡಿದ ಆಕಳು ಬೀದಿ ನಾಯಿಗಳಿಗೆ ಭಯಪಡುತ್ತಿದ್ದದ್ದನ್ನು ಗಮನಿಸಿದ ಸ್ಥಳೀಯ ನಿವಾಸಿ ಸುನೀತಾ ಸುಧೀರ ಶೆಟ್ಟಿ, ಕೃಷ್ಣಾಬಾಯಿ ಗೌಡ ಅವರು ಬೀದಿನಾಯಿಗಳಿಂದ ಆಕಳು ಕರುವನ್ನು ರಕ್ಷಿಸಿದರು. ಆಕಳ ಕಿವಿಯಲ್ಲಿ ಇಯರ್ ಟ್ಯಾಗ್ (ಕಿವಿ ಓಲೆ) ಇಲ್ಲದಿರುವುದರಿಂದ ಆಕಳ ಮಾಲೀಕರನ್ನು ಹುಡುಕಲು ಹರಸಾಹಸ ಪಡಬೇಕಾಯಿತು.ಕೊನೆಗೂ ವಿಳಾಸ ತಿಳಿದು ಪ್ರಾಣಿಪ್ರಿಯ ಸುಜಯ ಶೆಟ್ಟಿ ಗೋಕರ್ಣ ಇವರು ಆನಂದು ಗೌಡರ ಸಹಕಾರದಿಂದ ಸುರಕ್ಷಿತವಾಗಿ ಆಕಳು ಕರುವನ್ನು ಅದರ ಮಾಲೀಕರ ಕೊಟ್ಟಿಗೆಗೆ ಸೇರಿಸಿದ್ದಾರೆ.

## ಹಳ್ಳಿಗಳ ಏಳ್ಗೆ ದೇಶದ ಏಳ್ಗೆ : ಶ್ರೀ ಮಲ್ಲನಗೌಡ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಪ್ರತಿಷ್ಠಿತ ವೀರಶೈವ ವಿದ್ಯಾವರ್ಧಕ ಸಂಘದ ವೀರಶೈವ ಮಹಾವಿದ್ಯಾಲಯದಿಂದ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ 2025-26ನೇ ಸಾಲಿನ ಶಿಬಿರವನ್ನು ಕೊಟ್ಟೂರು ಸ್ವಾಮಿ ಮಠ, ಸೋಮಸಮುದ್ರ ಹಳ್ಳಿಯಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತ ಮಂಡಳಿ ಸದಸ್ಯರಾದ ಅಕ್ಕಿ ಶಿವರಾಜ್, ಕಾರದಪುಡಿ ಮುದ್ದನಗೌಡ ಮತ್ತು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಪರಶುರಾಮ್, ಕಾಲೇಜಿನ ಪ್ರಾಂಶುಪಾಲರಾದ .ಜಿ.ಮಲ್ಲನಗೌಡ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಐ.ಕ್ಯೂ.ಎ.ಸಿ ಸಂಯೋಜಕರಾದ ಡಾ.ವಿನೋದುಕುಮಾರ್,ಯು.ಸೋಮಶೇಖರ್ ನಿವೃತ್ತ ಶಿಕ್ಷಕರು ಪಾಲ್ಗೊಂಡಿದ್ದರು ವಿದ್ಯಾರ್ಥಿ ಜೀವನದಲ್ಲಿ ತುಂಬಾ ಪಾತ್ರ ವಹಿಸುತ್ತದೆ. ಸೇವೆಯ ಮನೋಭಾವ, ತ್ಯಾಗ ಮತ್ತು ಪರಿಶ್ರಮದಿಂದ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಾಗುತ್ತದೆ. ಹಳ್ಳಿಗಳು ಉದ್ದಾರ ಆದ್ರೆ ದೇಶ ಉದ್ದಾರ ಆಗುತ್ತದೆ ಎಂದು ಸ್ವಯಂ ಸೇವಕರಿಗೆ ತಮ್ಮ ಭಾಷಣದಲ್ಲಿ ಹೇಳಿದರು. ಈ ಕಾರ್ಯಕ್ರಮದಲ್ಲಿ ಡಾ.ಭ್ರಮರಾಂಭ ವೈ ಸ್ವಾಗತಿಸಿದರು. ಪ್ರತಿಜ್ಞಾ ವಿಧಿಯನ್ನು ಕುಮಾರಿ. ಕೀರ್ತನ, ಬಿ.ಎಸ್.ಸಿ ವಿದ್ಯಾರ್ಥಿ ಬೋಧಿಸಿದರು. ಕುಮಾರಿ ನಾಗಲಕ್ಷಿ, ಯಲ್ಲಪ್ಪ, ಸೌಮ್ಯ, ಸುಷ್ಮಾ, ರೋಹಿತ್, ರಾಜ, ವಿನು ಅರ್ಪಿತಾ, ಪ್ರಾರ್ಥನಾ ಗೀತೆಯನ್ನು ಹಾಡಿದರು. ಡಾ.ಶರಣಬಸವ ಇವರು ಕಾರ್ಯಕ್ರಮವನ್ನು ವಂದಿಸಿ, ನಿರೂಪಿಸಿದರು.

## ಪಶು, ಮೀನುಗಾರಿಕೆ ವಿವಿಯ 15ನೇ ಘಟಿಕೋತ್ಸವ: ವೀರಣ್ಣ

**ಮಲ್ಲಮ್ಮ ನುಡಿ ವಾರ್ತೆ ಬೀದರ**

ಕರ್ನಾಟಕ ಪಶುವೈದ್ಯಕೀಯ,ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ 15ನೇ ಘಟಿಕೋತ್ಸವವನ್ನು ಇಂದು ( ಫೆಬ್ರವರಿ 27) ರಂದು ಬೆಳಿಗ್ಗೆ 10.00 ಗಂಟೆಗೆ ವಿಶ್ವವಿದ್ಯಾಲಯದ ಆಡಿಟೊರಿಯಂ, ನಂದಿನಗರ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ.ಸಿ.ವೀರಣ್ಣ ಹೇಳಿದರು.

ಅವರು ಗುರವಾರ ನಗರದ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು.

ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಥಾವರ್‌ಚಂದ್ ಗೆಹೋಟ್ ರವರು 15ನೇ' ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ. ಅತಿಥಿಗಳಾಗಿ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಹಾಗೂ ವಿಶ್ವವಿದ್ಯಾಲಯದ ಸಹಕುಲಾಧಿಪತಿಗಳಾದ ಕೆ.ವೆಂಕಟೇಶ, ಮುಖ್ಯ ಅಥಿಗಳಾಗಿ ಇಕ್ರಿಸ್ಯಾಟ್, ಹೈದ್ರಾಬಾದನ ಮಹಾನಿರ್ದೇಶಕ ಡಾ. ಹಿಮಾಂಶು ಪಾಠಕ ಭಾಗವಹಿಸಲಿದ್ದಾರೆ.

ಘಟಿಕೋತ್ಸವದಲ್ಲಿ ಒಟ್ಟು 576 ವಿದ್ಯಾರ್ಥಿಗಳಿಗೆ ಪದವಿಯನ್ನು ಪ್ರದಾನ ಮಾಡಲಾಗುತ್ತಿದ್ದು, ಇದರಲ್ಲಿ 455 ಸ್ನಾತಕ ಪದವೀಧರರು, 107 ಸ್ನಾತಕೋತ್ತರ ಹಾಗೂ 14 ಡಾಕ್ಟರೇಟ್ ಪದವಿಧರರು ಸೇರಿದ್ದಾರೆ. ಘಟಿಕೋತ್ಸವದ ದಿನದಂದು 94 ಪದವೀಧರರು ಉಪಸ್ಥಿತರಾಗಿ ಪದವಿ ಪಡೆ-ಯುತ್ತಿದ್ದಾರೆ. ಅದೇ ರೀತಿ

ಒಟ್ಟು 34 ಪ್ರತಿಭಾನ್ವಿತ ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಧರರಿಗೆ ಚಿನ್ನದ ಪದಕಗಳನ್ನು ನೀಡಿ ಗೌರವಿಸಲಾಗುತ್ತಿದೆ. ಅದರಲ್ಲಿ 21 ವಿಶ್ವವಿದ್ಯಾಲಯದ ಪದಕಗಳು ಮತ್ತು 60 ಪ್ರಾಯೋಜಿತ ಚಿನ್ನದ ಪದಕಗಳಾಗಿವೆ.



ಸ್ನಾತಕ ಪದವಿಯಲ್ಲಿ 17 ವಿದ್ಯಾರ್ಥಿಗಳು- 49 ಚಿನ್ನದ ಪದಕಗಳು ಪಡೆಯಲಿದ್ದಾರೆ ಇದರಲ್ಲಿ ಶಿವಮೊಗ್ಗದ ಖುಷಿ 16 ಚಿನ್ನದ ಪದಕ, ಬೀದರನ ದೇವರಾಜ್ 4 ಪದಕ ಸೇರಿದಂತೆ ಇತರೆ ವಿದ್ಯಾರ್ಥಿಗಳು ಪದಕ ಪಡೆದಿದ್ದಾರೆ. ಸ್ನಾತಕೋತ್ತರ ಪದವಿಯಲ್ಲಿ 15 ವಿದ್ಯಾರ್ಥಿಗಳು 30 ಚಿನ್ನದ ಪದಕ, ಡಾಕ್ಟರೇಟ್ ಪದವಿಯಲ್ಲಿ 2 ವಿದ್ಯಾರ್ಥಿಗಳು 2 ಚಿನ್ನದ ಪದಗಳನ್ನು ಪಡೆದಿದ್ದಾರೆ.

ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ 9 ಮಹಾವಿದ್ಯಾಲಯಗಳಿವೆ. ನೂತನವಾಗಿ ಪುತ್ತೂರಿನಲ್ಲಿ ಒಂದು ಪಶುವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆ ಕಾರ್ಯ ಪ್ರಾರಂಭದಲ್ಲಿದೆ. ರೈತರ ಆದಾಯ ದ್ವಿಗುಣಗೊಳಿಸಲು ಮತ್ತು ಉತ್ಪಾದನೆ ಹೆಚ್ಚಿಸುವ ಉದ್ದಶದಿಂದ ಹತ್ತು ಸಂಶೋಧನೆ ಹಾಗೂ ಮಾಹಿತಿ ಕೇಂದ್ರಗಳು ಕೆಲಸ ಮಾಡುತ್ತಿವೆ.

ವಿವಿಧ ಸಂಸ್ಥೆಗಳಿಂದ ಧನಸಹಾಯ ಪಡೆದು ಸಂಶೋಧನೆ ಕೈಗೊಳ್ಳಲಾಗುತ್ತಿದೆ.

ಪಶುವೈದ್ಯಕೀಯ ವಿಜ್ಞಾನ ಕ್ಷೇತ್ರದ ವಿಜ್ಞಾನಿಗಳು ಮಾನವ ಮತ್ತು ಪ್ರಾಣಿಗಳ ಮೇಲೆ ಗಂಭೀರ ಪರಿಣಾಮ ಬೀರುವ ಬ್ರುಸಲೋಸಿಸ್, ರೆಬಿಸ್, ಎವಿಯನ್ ಇನ್ನು ಎಂಜಾ, ಅಂತ್ರಾಕ್ಸ್ ಮತ್ತು ಏಈಆ ಮೇಲೆ ಹೊಸ ಸಂಶೋಧನಾ ಯೋಜನೆಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಹಾವಿನ 'ಆಂಟಿ-ವೆನಮ್' ತಯ್ಯಾರಿಸುವ ಕೆಲಸ ಸಹ ಪ್ರಗತಿಯಲ್ಲಿದೆ ಎಂದರು.

ಪತ್ರಿಕಾಗೊಷ್ಟಿಯಲ್ಲಿ ವಿಶ್ವವಿದ್ಯಾಲಯ ಕುಲಸಚಿವ ಪ್ರೊ. ಪಿ.ಟಿ ರಮೇಶ್, ಪ್ರಮುಖರಾದ ಡಾ. ಮಂಜುನಾಥ್, ರಾಮಚಂದ್ರನಾಯಕ, ಶಿವಪ್ರಕಾಶ್, ಬಸವರಾಜ ಭತಮೂರ್ಗಿ, ಸೇರಿದಂತೆ ವ್ಯವಸ್ಥಾಪಕ ಮಂಡಳಿ ಹಾಗೂ ವಿದ್ಯಾವಿಷಯ ಪರಿಷತ್ ಸದಸ್ಯರು ಉಪಸ್ಥಿತರಿದ್ದರು.

## ಸಂಗನಕಲ್ಲಿನಲ್ಲಿ ಪಾಂಡು ವಿಜಯ ಬಯಲಾಟ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ತಾಲೂಕಿನ ಸಂಗನಕಲ್ಲು ಗ್ರಾಮದಲ್ಲಿ ಪಾಂಡು ವಿಜಯ ಬಯಲಾಟ ಪ್ರದರ್ಶನ ನಿನ್ನೆ ನಡೆಯಿತು.

ಡಿಸಿಸಿ ನಗರ ಜಿಲ್ಲಾ ಅಧ್ಯಕ್ಷ ಅಲ್ಲಂ ಪ್ರಶಾಂತ್ ಇದರಲ್ಲಿ ಪಾಲ್ಗೊಂಡು, ಬಯಲಾಟ ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚು ಪ್ರಸಿದ್ಧವಾದ ಕಲೆಯಾಗಿದೆ. ಈ ಸಂಗನಕಲ್ಲು ಗ್ರಾಮದಲ್ಲಿ ಸಾವಿರಾರು ಜನ ಸೇರಿ ಈ ಬೈಲಾಟ ವೀಕ್ಷಣೆ ಮಾಡುವುದು ಸಂತೋಷದ ಸಂಗತಿ. ನಮ್ಮ ಪುರಾತನ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವುದು, ಕಲೆಯನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಹಾಗೂ ಇಂದಿನ ಪೀಳಿಗೆಯ ಜವಾಬ್ದಾರಿಯು ಆಗಿದೆ, ಸಂಗನಕಲ್ಲು ಗ್ರಾಮವು ನಮ್ಮ ಅಲ್ಲಂ ಕುಟುಂಬದ ಸ್ವಂತ ಗ್ರಾಮವಿದ್ದಂತೆ.

ಶಾಸಕ ಬಿನಾಗೇಂದ್ರ ಅವರ ಪರವಾಗಿ ಅವರ ಆಪ್ತರು ಆರ್ಥಿಕವಾಗಿ ಸಹಕಾರ ನೀಡಿರುವುದು ಸಹ ಶ್ಲಾಘನೀಯ ಕಾರ್ಯ ಎಂದರು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ

ಕರಡಳ್ಳಿ ಈರಪ್ಪ, ಎಸ್.ಯುಧಿಷ್ಠರ, ಮಾಜಿ ಗ್ರಾಮ ಪಂಚಾಯತಿ ಸದಸ್ಯರು ಕೆಎಚ್ ಚಿದಾನಂದ, ಗ್ಯಾರೆಂಟಿ ಅನುಷ್ಠಾನ ಸಮಿತಿ ಜಿಲ್ಲಾ ಉಪಾಧ್ಯಕ್ಷರಾದ ಸಂಗನಕಲ್ಲು ವಿಜಯಕುಮಾರ್, ಎಸ್ ವೈ ಕಟ್ಟೆಗೌಡ, ನಾಗರಾಜ ಗೌಡ, ಜೋಗಿ ಚಂದ್ರಪ್ಪ, ತಿಮ್ಮನಗೌಡ ಮುಂತಾದವರು ಇದ್ದರು.

## ಕಾರವಾರ ಅಂಕೋಲಾ ಕ್ಷೇತ್ರದ ಶಾಸಕ ಸತೀಶ ಸೈಲ್ ಮೃತ ದ್ರಾಕ್ಷಾಯಿಣಿ ಕುಟುಂಬಸ್ಥರ ಭೇಟಿ



**ಮಲ್ಲಮ್ಮ ನುಡಿ ವಾರ್ತೆ ಕಾರವಾರ**

ಕಾರವಾರ-ಅಂಕೋಲಾ ಜನಪ್ರಿಯ ಶಾಸಕರಾದ ಸತೀಶ ಸೈಲ್ ಅವರು ನಗೆಕೋವೆ ಗ್ರಾಮದ ಶಾಲಾ ಬಾಲಕಿ ದ್ರಾಕ್ಷಾಯಿಣಿ ಯಶ್ವಂತ ಗೌಡ ವಾಹನ ಅಪಘಾತದಲ್ಲಿ ಮೃತಪಟ್ಟಿದ್ದು, ಅವಳ ಕುಟುಂಬಸ್ಥರೊಂದಿಗೆ ಭೇಟಿ ಮಾಡಿ ಸಾಂತ್ವನ ಹೇಳಿದರು. ತಾನು ಮೃತಳ ಮನೆಗೆ ತೆರಳಿ ವೈಯಕ್ತಿಕ ರೂ. 10 ಸಾವಿರವನ್ನು ಪೂರ್ವಭಾವಿಯಾಗಿ ನೀಡುವುದಾಗಿ ಘೋಷಿಸಿದರು.

ಮೃತಳ ಕುಟುಂಬದ ಸದಸ್ಯರಾದ ಅಜ್ಜ ನಾರಾಯಣ ಸೋಮಾ ಗೌಡ, ಚಿಕ್ಕಪ್ಪ ದಿನೇಶ ರುಮ್ಮಾ ಗೌಡ, ಚಿಕ್ಕಮ್ಮ ಲಲಿತಾ ದಿನೇಶ ಗೌಡ, ಚಿಕ್ಕಪ್ಪ ರವಿದಾ ರಾಮ ಗೌಡ, ಮಾವ ಜಯವಂತ ನಾಗಪ್ಪ ಗೌಡ ಹಾಗೂ ದಿ ಡೈಲಿ ನ್ಯೂಸ್ ಮತ್ತು ಮಲ್ಲಮ್ಮನುಡಿ ಜಿಲ್ಲಾ ವರದಿಗಾರ ಅಖ್ತರ ಜೆ. ಸೈಯದ್ ಅವರು ಶಾಸಕರ ಜೊತೆಯಲ್ಲಿದ್ದರು.

ಶಾಸಕರು ತನಗೆ ಮಗುವಿನ ಸಾವು ಬಹಳ ವೇದನೆ ತಂದಿದ್ದು, ಶಾಲಾ ಬಾಲಕಿಯ ಪ್ರತಿಭೆ ಅರಳುವಲ್ಲಿ ಮುದುಡಿ ಹೋಗಿದೆ. ಅವರ ಕುಟುಂಬಕ್ಕೆ ಆ ನೋವು ಭರಿಸುವ ಶಕ್ತಿ ದೇವರು ನೀಡಲಿ ಎಂದು ಹಾರೈಸುತ್ತೇನೆ ಹಾಗೂ ತಪ್ಪಿತಸ್ಥರಿಗೆ ಸೂಕ್ತ ಕ್ರಮವಾಗುವಂತೆ ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿಗಳಿಗೆ ಹಾಗೂ ಜಿಲ್ಲಾಡಳಿತಕ್ಕೆ ಸೂಚಿಸಲಾಗುವುದು ಎಂದು ತಿಳಿಸಿದರು.

## ಹಣ ವಸೂಲಿ ಮಾಡುವ ಗ್ರಾಮ ಪಂಚಾಯತ ಸ್ವಚ್ಛತೆಗೆ ಮಹತ್ವ ಏಕೆ ನೀಡುತ್ತಿಲ್ಲ ?

**ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ** : ಮಹಾಶಿವರಾತ್ರಿ ಮುಗಿದ ನಂತರ ಎಲ್ಲೆಂದರಲ್ಲಿ ಬಿದ್ದಿರುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಗ್ರಾಮ ಪಂಚಾಯತಿ ಅವರು ತೆರವುಗೊಳಿಸದೇ ಇರುವುದು ಸಹಜವಾಗಿಯೇ ಪ್ರವಾಸಿಗರ ಆಕ್ರೋಶಕ್ಕೆ ಕಾರಣವಾಗಿದೆ. ಅಂಗಡಿಕಾರರಿಂದ,ವಾಹನಗಳಿಂದ ಹಣವನ್ನು ಪಡೆಯುತ್ತಾರೆ. ಆದರೆ ಅದಕ್ಕೆ ತಕ್ಕಂತೆ ಸ್ವಚ್ಛತೆಯಲ್ಲಿ ಮಾತ್ರ ಯಾವುದೇ ಪ್ರಗತಿ ಕಂಡುಬಂದಂತಿಲ್ಲ.

ಮುಖ್ಯ ಕಡಲತೀರದಲ್ಲಿ ವಾಹನ ನಿಲುಗಡೆಗೆ ಹಣ ವಸೂಲಿ ಮಾಡಲು ಗ್ರಾ.ಪಂ. ಟೆಂಡರ್ ನೀಡುತ್ತದೆ. ಟೆಂಡರ್ ಪಡೆದವರು ಉಳಿದ ಸಮಯದಲ್ಲಿ ಮುಖ್ಯ ಕಡಲ ತೀರದಲ್ಲಿ ವಾಹನಗಳಿಂದ ಹಣ ಪಡೆಯುತ್ತಾರೆ.

ಶಿವರಾತ್ರಿ ಸಮೀಪಿಸುತ್ತಿದ್ದಂತೆ ಎಲ್ಲ ಬೀಚ್‌ಗಳಿಗೂ ತೆರಳುವ ಮುಖ್ಯ ರಸ್ತೆಯಲ್ಲಿಯೇ ಹೊರಗಡೆಯಿಂದ ಬರುವ ಎಲ್ಲ ವಾಹನಗಳಿಗೂ ಹಣ ವಸೂಲಿ ಮಾಡಲಾಗುತ್ತದೆ.




ಹೊರಗಡೆಯಿಂದ ಬಂದ ವಾಹನಗಳು ಎಲ್ಲಿಯೇ ನಿಲ್ಲಿಸಿಕೊಂಡರೂ ಕೂಡ ಈ ಗುತ್ತಿಗೆ ಪಡೆದವರಿಗೆ ಹಣ ನೀಡಲೇಬೇಕಾಗುತ್ತದೆ. ಹಾಗೇ ಸ್ವಚ್ಛತೆಯ ಬಗ್ಗೆ ಪಂಚಾಯಿತಿಯವರು ಅಷ್ಟೇ ಆಸಕ್ತಿಯಿಂದ ಏಕೆ ಗಮನಹರಿಸುತ್ತಿಲ್ಲ ಎಂಬ ಪ್ರಶ್ನೆ ಪ್ರವಾಸಿಗರಲ್ಲಿ ಕಾಡುತ್ತಿದೆ. ಹೀಗಾಗಿ ಎಲ್ಲೆಂದರಲ್ಲಿ ಬಿದ್ದಿರುವ ತ್ಯಾಜ್ಯವನ್ನು ತಕ್ಷಣ ತೆರವುಗೊಳಿಸುವ ಕಾರ್ಯವಾಗಬೇಕು ಎಂದು ಪ್ರವಾಸಿಗರು ಆಗ್ರಹಿಸಿದ್ದಾರೆ.

## ಕಾನಿಪ ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಬಳ್ಳಾರಿ ಜಿಲ್ಲಾ ಘಟಕದ 2026-27 ನೇ ಸಾಲಿನ ಸದಸ್ಯತ್ವಕ್ಕೆ ಅರ್ಹ ಸದಸ್ಯರಿಂದ ಅರ್ಜಿ ಆಹ್ವಾನಿಸಿದೆ ಎಂದು ಸಂಘದ ಜಿಲ್ಲಾ ಅಧ್ಯಕ್ಷ ಎನ್.ವೀರಭದ್ರಗೌಡ ತಿಳಿಸಿದ್ದಾರೆ. ಅರ್ಜಿಗಳನ್ನು ಮಾ.5 ಮತ್ತು 6 ರಂದು ನಗರದ ಪತ್ರಿಕಾ ಭವನದಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಅರ್ಜಿ ನೀಡಿ ತೆಗೆದುಕೊಳ್ಳಲಿದೆ. ಅರ್ಜಿಗಳನ್ನು ಸದಸ್ಯರಾಗಬಯಸುವವರು ಸ್ವತಃ ಭರ್ತಿ ಮಾಡಬೇಕು. ಪ್ರತಿ ಸದಸ್ಯರಿಗೆ 510 ರೂ ಶುಲ್ಕವಿದೆ. ಅರ್ಜಿ ಜೊತೆಗೆ

ಆಧಾರ್, ಈ ವರ್ಷ ಕೆಲಸ ಮಾಡುತ್ತಿರುವ ಸಂಸ್ಥೆಯ ನೇಮಕಾತಿ ಪತ್ರ, ಅಥವಾ ಐಡಿ ಕಾರ್ಡ್ ಇರಬೇಕು. ಹೊಸದಾಗಿ ಸದಸ್ಯರಾಗಲು ಬಯಸುವವರು ಕನಿಷ್ಟ ಎರೆಡು ವರ್ಷದ ಅನುಭವದ ದಾಖಲಾತಿ. ಎಸ್ ಎಸ್ ಎಲ್ ಸಿ ಅಂಕಪಟ್ಟಿಯನ್ನು ಸಹ ನೀಡಬೇಕು. ಅಗತ್ಯ ಬಿದ್ದರೆ ಕಿರು ಪರೀಕ್ಷೆ ನಡೆಸಲಿದೆ. ಅಪೂರ್ಣ ಅರ್ಜಿಗಳನ್ನು ತಿರಸ್ಕೃತ ಮಾಡಲಿದೆ. ನಿಗಧಿತ ದಿನದ ನಂತರ ಅರ್ಜಿ ಸ್ವೀಕರಿಸಲ್ಲ. ತಾಲೂಕು ಸಂಘಗಳು ಸಭೆ ನಡೆಸಿ ಅರ್ಕಿ ಸ್ವೀಕರಿಸಿ ಅನುಮೋದನೆಗೊಳಿಸಿ ಜಿಲ್ಲಾ ಸಮಿತಿಗೆ ಮಾ.6 ರೊಳಗೆ ನೀಡಬೇಕು. ಹೆಚ್ಚಿನ ಮಾಹಿತಿಗೆ ಪ್ರಧಾನ ಕಾರ್ಯದರ್ಶಿ ನರಸಿಂಹ ಮೂರ್ತಿ 9448757765 , ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್. ಬಸವರಾಜ್ 9480536199 ಇವರನ್ನು ಸಂಪರ್ಕಿಸಿ.

## ಅಜೀಂ ಪ್ರೇಮ್‌ಜಿ ವಿವಿಯಲ್ಲಿ ಎಬಿವಿಪಿ ದಾಂಧಲೆ: ಬಂಧನಕ್ಕೆ ಎಸ್‌ಎಫ್‌ಐ ಆಗ್ರಹ

**ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ)**

ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯಕ್ಕೆ ಅಕ್ರಮ ಪ್ರವೇಶ ಮಾಡಿ ಆಸ್ತಿಗಳನ್ನು ಧ್ವಂಸ ಮಾಡಿ, ಕೆಲವು ಭದ್ರತಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿರುವ ಎಬಿವಿಪಿ ಗೂಂಡಾಗಳನ್ನು ಬಂಧಿಸುವಂತೆ ಹಾಗೂ ಸೂಕ್ತ ತನಿಖೆ ನಡೆಸುವಂತೆ ಎಸ್ ಎಫ್ ಐ ಒತ್ತಾಯ.

ಬೆಂಗಳೂರಿನ ಆನೇಕಲ್ ತಾಲ್ಲೂಕಿನ ಸರ್ಜಾಪುರ ಬಳಿಯ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯಕ್ಕೆ ಮಂಗಳವಾರ ಸಂಜೆ 6 ಗಂಟೆ ಸುಮಾರಿಗೆ 20 ಜನರ ಎಬಿವಿಪಿ ಗುಂಡಾ ಗುಂಪು ಕ್ಯಾಂಪಸ್‌ಗೆ ಅಕ್ರಮವಾಗಿ ಪ್ರವೇಶ ಮಾಡಿ ವಿಶ್ವ ವಿದ್ಯಾಲಯದ ಆಸ್ತಿಗಳನ್ನು ಧ್ವಂಸ ಮಾಡಿ, ಕೆಲವು ಭದ್ರತಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಮೇಲೆ ಎಬಿವಿಪಿ ಗೂಂಡಾಗಳು ಹಲ್ಲೆ ನಡೆಸಿದ್ದಾರೆ. ಈ ಹಲ್ಲೆಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್ ಖಂಡಿಸುತ್ತದೆ ಹಾಗೂ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳ ಜೊತೆ ಎಸ್ ಎಫ್ ಐ ನಿಲ್ಲುತ್ತದೆ.

ಮಂಗಳವಾರ ಸಂಜೆ ಕಾಶ್ಮೀರದ ಬಗ್ಗೆ ಅನೌಪಚಾರಿಕ ಚರ್ಚೆ ಮಾಡಲು ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ತೀರ್ಮಾನಿಸಿರುವುದಾಗಿ ವರದಿಯಾಗಿದೆ. ಆದರೆ ಇದರ ಕುರಿತು ವಿಶ್ವ ವಿದ್ಯಾಲಯದಲ್ಲಿ ಯಾವುದೇ ಚರ್ಚೆ ನಡೆದಿರಲಿಲ್ಲ. ಮಂಗಳವಾರ ಸಂಜೆ 5 ಗಂಟೆ ಸುಮಾರಿಗೆ 20 ಕ್ಕೂ ಹೆಚ್ಚು ಎಬಿವಿಪಿ ಗೂಂಡಾಗಳು ವಿಶ್ವ ವಿದ್ಯಾಲಯಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ವಿಶ್ವವಿದ್ಯಾಲಯದ ಆಸ್ತಿಗಳನ್ನು ಧ್ವಂಸ ಮಾಡಿ, ಭದ್ರತಾ ಸಿಬ್ಬಂದಿಗಳ ಮೇಲೆ ಮಾತ್ರವಲ್ಲದೆ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿದ್ದಾರೆ.

ನಮ್ಮ ಕ್ಯಾಂಪಸ್‌ನಲ್ಲಿ ಹೊರಗಿನ ಜನರ ಗುಂಪೊಂದು ನಡೆಸಿದ ಗದ್ದಲ ಮತ್ತು ಹಿಂಸಾಚಾರವನ್ನು ನಾವು ಬಲವಾಗಿ ಖಂಡಿಸುತ್ತೇವೆ" ಎಂದು ವಿಶ್ವವಿದ್ಯಾಲಯ ಹೇಳಿಕೆ ಬಿಡುಗಡೆ ಮಾಡಿದೆ ಹಾಗೂ ಈ ವಿಶ್ವವಿದ್ಯಾಲಯದಲ್ಲಿ ಯಾವುದೇ ಕಾರ್ಯಕ್ರಮವು ನಡೆಯಲೇ ಇಲ್ಲ ಸ್ಪಷ್ಟಪಡಿಸಿದೆ.



ಈಗಾಗಲೇ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಆಸ್ತಿಯನ್ನು ಧ್ವಂಸಗೊಳಿಸಿ, ಕ್ಯಾಂಪಸ್‌ಗೆ ನುಗ್ಗಿ ಪ್ರತಿಭಟನೆ ನಡೆಸಿದ ಆರೋಪದ ಮೇಲೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಗೆ ಸೇರಿದ ವಿದ್ಯಾರ್ಥಿಗಳ ಗುಂಪನ್ನು ಮುನ್ನೆಚ್ಚರಿಕೆ ಕ್ರಮವಾಗಿ ವಶಕ್ಕೆ ತೆಗೆದುಕೊಳ್ಳಲಾಗಿದೆ.

ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿದ್ಯಮಾನಗಳು, ಪ್ರಸ್ತುತ ಆರ್ಥಿಕ, ಸಾಮಾಜಿಕ, ರಾಜಕೀಯ ಚರ್ಚೆ ನಡೆಸುವುದು ಸಾಮಾನ್ಯ

ಇದು ವಿದ್ಯಾರ್ಥಿಗಳಲ್ಲಿ ತಿಳುವಳಿಕೆ ಮಟ್ಟ ಹೆಚ್ಚಿಸುವುದಕ್ಕೆ ಸಹಾಯವಾಗುತ್ತದೆ. ಇದು ವಿಶ್ವವಿದ್ಯಾಲಯದ ಪ್ರಜಾಪ್ರಭುತ್ವವಾಗಿದೆ. ವಿಶ್ವ ವಿದ್ಯಾಲಯಗಳಲ್ಲಿ ಕ್ಯಾಂಪಸ್ ಡೆಮಾಕ್ರಸಿ ಇರಬೇಕೆಂದು ಎಸ್ ಎಫ್ ಐ ಒತ್ತಾಯಿಸುತ್ತದೆ. ಎಬಿವಿಪಿ ವಿದ್ಯಾರ್ಥಿ ಸಂಘಟನೆ ವಿಶ್ವ ವಿದ್ಯಾಲಯಗಳಲ್ಲಿ ಕೋಮುವಾದವನ್ನು ಉಂಟು ಮಾಡುತ್ತಿದೆ. ಕಾಲೇಜು ಕ್ಯಾಂಪಸ್ ಗಳಲ್ಲಿ, ವಿಶ್ವ ವಿದ್ಯಾಲಯಗಳಲ್ಲಿ ಎಬಿವಿಪಿ ಹಿಂಸೆ, ಪ್ರಚೋದನೆ ಹಾಗೂ ಉದ್ದೇಶಪೂರ್ವಕವಾಗಿ ಗಲಭೆಗಳನ್ನು ಸೃಷ್ಟಿಸಿ ವಿಶ್ವ ವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ನಡುವೆ ಭಯದ ವಾತಾವರಣ ಸೃಷ್ಟಿ ಮಾಡುತ್ತಿದ್ದೆ. ಎಓಗ ಸೇರಿದಂತೆ ದೇಶದ ಹಲವು ವಿಶ್ವ ವಿದ್ಯಾಲಯಗಳಲ್ಲಿ ಎಬಿವಿಪಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿರುವುದನ್ನು ನಾವು ಗಮನಿಸಬಹುದು. ಅದೇ ರೀತಿಯಲ್ಲಿ ರಾಜ್ಯದ ವಿಶ್ವ ವಿದ್ಯಾಲಯಗಳಲ್ಲಿ ಉದ್ದೇಶಪೂರ್ವಕವಾಗಿ ವಿದ್ಯಾರ್ಥಿಗಳಿಗೆ ಹಲ್ಲೆ ಹಾಗೂ ಗಲಭೆಗಳನ್ನು ಸೃಷ್ಟಿ ಮಾಡಲು ಮುಂದಾಗಿದೆ. ಆದರಿಂದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯಕ್ಕೆ ಅಕ್ರಮ ಪ್ರವೇಶ ಮಾಡಿ ಆಸ್ತಿಗಳನ್ನು ಧ್ವಂಸ ಮಾಡಿ, ಕೆಲವು ಭದ್ರತಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಮೇಲೆ ಉದ್ದೇಶ ಪೂರ್ವಕವಾಗಿ ಹಲ್ಲೆ ಮಾಡಿರುವ ಎಬಿವಿಪಿ ಗೂಂಡಾಗಳ ಮೇಲೆ ಪ್ರಕರಣ ದಾಖಲು ಮಾಡಬೇಕು ಹಾಗೂ ತಕ್ಷಣ ಈ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿರುವ ಎಬಿವಿಪಿ ಗುಂಡಾಗಳನ್ನು ಬಂಧಿಸಬೇಕೆಂದು ಹಾಗೂ ಎಬಿವಿಪಿ ಗೂಂಡಾಗಳನ್ನು ಉದ್ದೇಶಪೂರ್ವಕವಾಗಿ ನಡೆಸಿರುವ ಈ ಹಲ್ಲೆಯ ಬಗ್ಗೆ ಬಗ್ಗೆ ಸೂಕ್ತ ತನಿಖೆ ಮಾಡಬೇಕೆಂದು ಹಾಗೂ ವಿಶ್ವ ವಿದ್ಯಾಲಯಗಳಲ್ಲಿ ಪ್ರಜಾಪ್ರಭುತ್ವ( ಕ್ಯಾಂಪಸ್ ಡೆಮಾಕ್ರಸಿ) ಉಳಿಸಬೇಕಾಗಿ ಭಾರತ ವಿದ್ಯಾರ್ಥಿ ಫೆಡರೇಷನ್, ವಿಜಯನಗರ ಜಿಲ್ಲೆ ಸಮಿತಿ ಒತ್ತಾಯಿಸುತ್ತದೆ.ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಜಯಸೂರ್ಯ,ಕಾರ್ಯದರ್ಶಿ ಶಿವಾರೆಡ್ಡಿ,ಜಿಲ್ಲೆ ಜಂಟಿ ಕಾರ್ಯದರ್ಶಿ ಕೆ.ಎ.ಪವನ ಕುಮಾರ್

# ಆತ್ಮ ತೃಪ್ತಿಗಾಗಿ ಮಾಡುವ ಸಮಾಜ ಸೇವೆಯೇ ಶ್ರೇಷ್ಠ : ಮಂಗಲಾ ನಾಯಕ ಅಭಿಮತ

ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಇಂದಿನ ದಿನಗಳಲ್ಲಿ ಸಮಾಜ ಸೇವೆಯೆನ್ನುವುದು ತೋರಿಕೆಗಾಗಿ, ಪ್ರಚಾರಕ್ಕಾಗಿ ಮಾಡುವ ಸರಕಾಗಿರುವುದು ವಿಷಾದದ ಸಂಗತಿ. ಆತ್ಮ ತೃಪ್ತಿಗಾಗಿ ಮಾಡುವ ಸೇವೆಯು ಮನಸ್ಸಿಗೆ ಸಂತೃಪ್ತಿಯನ್ನು ತರುತ್ತದೆ. ಶತಮಾನದ ಇತಿಹಾಸವುಳ್ಳ, ಮಾನವ ಸೇವೆಯನ್ನು ಧ್ಯೇಯವನ್ನಾಗಿಸಿಕೊಂಡ ಲಾಯನ್ಸ್ ಅಂತರಾಷ್ಟ್ರೀಯ ಸೇವಾ ಸಂಸ್ಥೆಯ ಸದಸ್ಯರಾಗುವುದೇ ಸೌಭಾಗ್ಯ ಎಂದು ಲಾಯನ್ಸ್ ಕ್ಲಬ್‌ನ ಮಂಗಲಾ ನಾಯಕ ಹೇಳಿದರು.

ಪಟ್ಟಣದಲ್ಲಿ ಲಾಯನ್ಸ್ ಕ್ಲಬ್ ಅಂಕೋಲಾ ಕರಾವಳಿ ಅವರು ಬುಧವಾರ ಹಮ್ಮಿಕೊಂಡ ಸಲಹಾ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಪರಿಸರ, ಹಸಿವು ನಿವಾರಣೆ, ಕಣ್ಣಿನ ಆರೋಗ್ಯ,




ಯುವಜನರ ಏಳ್ಗೆ, ಚಿಕ್ಕಮಕ್ಕಳ ಕ್ಯಾನ್ಸರ್ ಬಗ್ಗೆ ತಿಳುವಳಿಕೆ ನೀಡುವ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕ್ಯಾನ್ಸರ್ ರೋಗಿಗೆ 25 ಸಾವಿರ ರೂಪಾಯಿ ನೆರವು ನೀಡಿದ ದಾನಿ ಅರುಣ ಅಂಕೋಲೇಕರ ಅವರನ್ನು ಸನ್ಮಾನಿಸಲಾಯಿತು. ದೇವಾನಂದ ಗಾಂವಕರ ಮಾತನಾಡಿದರು. ಸಂಜಯ ಅರುಂಧೇಕರ ಧ್ವಜವಂದನೆ ನಡೆಸಿದರು. ಕಾರ್ಯದರ್ಶಿ ಕೆ.ಎಂ.ಗೌಡ ವರದಿ ವಾಚಿಸಿದರು. ಲಾಯನ್ಸ್ ಹಿರಿಯ ಸದಸ್ಯ ಮಹಾಂತೇಶ ರೇವಡಿ ನಿರೂಪಿಸಿದರು. ಸದಾನಂದ ಶೆಟ್ಟಿ ವಂದಿಸಿದರು.

ಲಾಯನ್ಸ್ ಸದಸ್ಯರಾದ ಗಣಪತಿ ನಾಯಕ, ಮಂಜುನಾಥ ನಾಯಕ, ದುರ್ಗಾನಂದ ದೇಸಾಯಿ, ಕೇಶವಾನಂದ ನಾಯಕ, ಜಿ.ಆರ್.ತಾಂಡೇಲ, ಚೈನ್‌ಸಿಂಗ್ ಚವ್ಹಾಣ, ಗಿರೀಶ ಕುಚನಾಡ, ಆರ್.ಸಿ.ರಾಜೇಶ ಇತರರಿದ್ದರು.



ವಿಜೃಂಭಣೆಯಿಂದ ನೆರವೇರಿದ ಶ್ರೀಮಂಗಳೇಶ್ವರ ಸ್ವಾಮಿಗಳ ಮಹಾ ರಥೋತ್ಸವ ಕುಕನೂರ : ತಾಲೂಕಿನ ಮಂಗಳೂರು ಗ್ರಾಮದ ಶ್ರೀಮಂಗಳೇಶ್ವರ ಮಹಾಸ್ವಾಮಿ ಮಹಾರಥೋತ್ಸವ ಗುರುವಾರ ಸಂಜೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ಗ್ರಾಮದ ಆರಾಧ್ಯ ದೇವರೆಂದು ಪೂಜೆಗೊಳ್ಳುತ್ತಿರುವ ಶ್ರೀಮಂಗಳೇಶ್ವರ ಸ್ವಾಮಿಯ ಗರ್ಭಗುಡಿಯೊಳಗಿರುವ ಪವಿತ್ರ ಶಿವಲಿಂಗಕ್ಕೆ ಬೆಳಗಿನ ಜಾವ ಧಾರ್ಮಿಕ ವಿಧಿವತ್ತಾಗಿ ಮಹಾರುದ್ರಾ ಭಿಷೇಕ, ಸಹಸ್ರ ಬಿಲ್ವಾರ

# ಯುವನಿಧಿ ಪ್ಲಸ್ ಅಡಿ ಅರಿವು ಕಾರ್ಯಕ್ರಮ



- ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಕೊಪ್ಪಳ ಇವರುಗಳ ಸಂಯುಕ್ತಾಶ್ರಯದಲ್ಲಿ ಯುವನಿಧಿ ಯೋಜನೆಯಡಿಯಲ್ಲಿ ನಿರುದ್ಯೋಗ ಭತ್ಯೆ ಪಡೆಯುತ್ತಿರುವ ಪದವಿ ಹಾಗೂ ಡಿಪ್ಲೊಮಾ ಅಭ್ಯರ್ಥಿಗಳಿಗೆ ಯುವನಿಧಿ ಪ್ಲಸ್ ಅಡಿಯಲ್ಲಿ ಉಚಿತವಾಗಿ ಕೌಶಲ್ಯ ತರಬೇತಿ ನೀಡಲು ಗುರುವಾರದಂದು ಕೊಪ್ಪಳದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಒಂದು ದಿನದ ಅರಿವು ಮೂಡಿಸುವ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಟಾನ ಪ್ರಾಧಿಕಾರದ ಉಪಾಧ್ಯಕ್ಷ ಮಂಜುನಾಥ ಗೊಂಡಬಾಳ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಗವಿಶಂಕರ್ ಕೆ., ಜಿಲ್ಲಾ ಉದ್ಯೋಗಾಧಿಕಾರಿ ಮಂಜುಳಾ, ಪ್ರಥಮ ದರ್ಜೆ

ಕಾಲೇಜು ಪ್ರಾಂಶುಪಾಲರಾದ ವೈ.ಬಿ ಅಂಗಡಿ, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿ.ಟಿ.ಟಿ.ಸಿ) ಪ್ರಾಂಶುಪಾಲರಾದ ಮೌನೇಶ ರಾಠೋಡ್, ಸಹಾಯಕ ನಿರ್ದೇಶಕ ಮಂಜುನಾಥ ಬೆಲ್ಲದ್, ಸಿಡಾಕ್ ತರಬೇತಿ ಅಧಿಕಾರಿ ಶೋಭಾ, ಕುಕನೂರಿನ ಸರ್ಕಾರಿ ಕೈಗಾರಿಕಾ ಕೇಂದ್ರದ ಪ್ರಭಾರಿ ಪ್ರಾಂಶುಪಾಲರಾದ ಮಂಜಪ್ಪ, ಸರ್ಕಾರಿ ಕೈಗಾರಿಕಾ ಕೇಂದ್ರ ತಳಕಲ್‌ನ ಪ್ರಭಾರಿ ಪ್ರಾಂಶುಪಾಲರಾದ ಮಹ್ಮದ ರಫಿ, ತಾಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿಯವರು ಮತ್ತು 250ಕ್ಕೂ ಹೆಚ್ಚು ಅಭ್ಯರ್ಥಿಗಳು, ಯುವನಿಧಿ ಫಲಾನುಭವಿಗಳು ತರಬೇತಿ ಕಾರ್ಯಾಗಾರದಲ್ಲಿ ಹಾಜರಿದ್ದು ಮಾಹಿತಿ ಪಡೆದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಹಣ ಉಳಿತಾಯ ಜ್ಞಾನ ಅಗತ್ಯ :ಕಡಪಟ್ಟಿ



ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ವಿದ್ಯಾರ್ಥಿಗಳು ಹಣ ಉಳಿತಾಯ, ಹೂಡಿಕೆ ಹಾಗೂ ನಿರ್ವಹಣೆಯ ಬಗ್ಗೆ ಸಮರ್ಪಕ ಜ್ಞಾನವನ್ನು ಗಳಿಸಿಕೊಂಡಾಗ ಮಾತ್ರ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ಡಾ.ಮಹಾಂತೇಶ ಕಡಪಟ್ಟಿ ಹೇಳಿದರು. ಜಿಲ್ಲೆಯ ಹುನಗುಂದ ಪಟ್ಟಣದ ವಿಜಯ ಮಹಾಂತೇಶ ಎಸ್. ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದ ಐಕ್ಯೂಎಸಿ, ವಾಣಿಜ್ಯ ವೇದಿಕೆ,ಎನ್.ಎಸ್.ಎಸ್., ಎನ್.ಸಿ.ಸಿ. ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್ ಸಹಯೋಗದಲ್ಲಿ ಹಣದ ಉಳಿತಾಯ, ಹೂಡಿಕೆ ಹಾಗೂ ನಿರ್ವಹಣೆ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಜೊತೆಗೆ ಆಧುನಿಕ ಹಣಕಾಸು ನಿರ್ವಹಣೆಯ ತಂತ್ರಜ್ಞಾನದ ತಳುವಳಿಕೆ ಮೂಡಿಸುವದು ಅತೀ ಅವಶ್ಯವಾಗಿದೆ. ವಿದ್ಯಾರ್ಥಿಗಳು ಮೊಬೈಲ್‌ಗಳಲ್ಲಿ ಬರುತ್ತಿರುವ ವಂಚನಾತ್ಮಕ ಸುದ್ದಿಗಳಿಗೆ ಬಲಿಯಾಗಿ ಹಣ ಕಳೆದುಕೊಳ್ಳಬಾರದೆಂದು ಅವರು ಎಚ್ಚರಿಸಿದರು. ಎಸ್.ಬಿ.ಐ ಹುನಗುಂದ ಶಾಖಾ ವ್ಯವಸ್ಥಾಪಕ ಮೋಹನ ಮಾತನಾಡಿ, ಈಗಿನಂದಲೇ ಉಳಿತಾಯದ ಕಲ್ಪನೆ ಬೆಳೆಸಿಕೊಂಡರೆ ಆ ಹಣ ಮುಂದಿನ ಜೀವನದಲ್ಲಿ ಅನುಕೂಲವಾಗಲಿದೆ ಎಂದರು.

ಎಸ್.ಬಿ.ಐನ ಹಿರಿಯ ಅಧಿಕಾರಿ ರವಿ ಜೋಶಿ ಮಾತನಾಡಿ, ಎಸ್.ಬಿ.ಐ ಶಾಖೆಯಲ್ಲಿ ಅನೇಕ ಹುದ್ದೆಗಳು ಖಾಲಿ ಇದ್ದು ಪ್ರತಿವರ್ಷ ಸ್ಪರ್ಧಾತ್ಮಕ ಪರೀಕ್ಷೆಗಳ ಮುಖಾಂತರ ತುಂಬಿಕೊಳ್ಳಲಾಗುತ್ತದೆ. ವಿದ್ಯಾರ್ಥಿಗಳು ಈ ವಿಷಯಕ್ಕೆ ಹೆಚ್ಚಿನ ಒತ್ತು ಕೊಡಬೇಕೆಂದರು. ವಿಶ್ವಜೀತ ಹಾಗೂ ವೀರಣ್ಣ ಮಾತನಾಡಿ, ಎಸ್.ಬಿ.ಐ ಬ್ಯಾಂಕಿನಲ್ಲಿ ಲಭ್ಯವಿರುವ ವಿವಿಧ ಉಳಿತಾಯ ಯೋಜನೆಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು.ಪ್ರಾಚಾರ್ಯ ಡಾ. ಎಸ್.ಆರ್. ಗೋಲಗೊಂಡ ಪ್ರಾಸ್ತಾವಿಕವಾಗಿ ಮಾತನಾಡಿದರು.ಸಂಸ್ಥೆಯ ನಿರ್ದೇಶಕರಾದ ಬಿ.ಎಸ್. ಕೆಂದೂರ, ಎಸ್.ಎಸ್.ಮಠ, ದೇಸಾಯಪ್ಪ ಹವಾಲ್ದಾರ, ರಾಚಪ್ಪ ರಾಜಮನಿ, ಐ.ಕ್ಯೂ.ಎ.ಸಿ ಸಂಯೋಜಕ ಡಾ.ಎಲ್.ಎನ್. ಕುಲಕರ್ಣಿ, ಕಾಲೇಜು ಒಕ್ಕೂಟದ ಕಾರ್ಯಧ್ಯಕ್ಷ ಡಾ. ಭೀಮಾಶಂಕರ ಹಲಸಂಗಿ, ವಾಣಿಜ್ಯ ವಿಭಾಗದ ಮುಖ್ಯಸ್ಥ ಬಿ.ಎ.ಕಂಠಿ, ಪದವಿ ಪೂರ್ವ ಪ್ರಾಚಾರ್ಯ ಹೆಚ್.ಎಸ್.ಬೋಳಿಶೆಟ್ಟರ ಹಾಗೂ ವಿದ್ಯಾರ್ಥಿ ಪ್ರತಿನಿಧಿ ಸುರೇಖಾ ಪಿ. ಹೂಗಾರ ವೇದಿಕೆಯಲ್ಲಿದ್ದರು. ದೀಪಾ ದಾದ್ಮಿ, ರೇಷ್ಮಾ ಮನ್ನಾಪೂರ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ದೈಹಿಕ ನಿರ್ದೇಶಕ ಎಸ್.ಬಿ.ಚಳಗೇರಿ ಸ್ವಾಗತಿಸಿದರು. ಡಾ.ಎಸ್.ಆರ್.ನಾಗಣ್ಣವರ ನಿರೂಪಿಸಿದರು. ಪ್ರೊ.ಬಿ.ಎ. ಕಂಠಿ ವಂದಿಸಿದರು.

# ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ

ಭಾಲ್ಕಿ: ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀ–ಕ್ಷೆ ಎದುರಿಸಿದಾಗ ಮಾತ್ರ ಅಸಾಧ್ಯವನ್ನು ಸಾಧಿಸಲು ಸಾಧ್ಯ ಎಂದು ನಿರ್ಮಲಾ ಕ್ರಿಯೇಟಿವ್ ಸ್ಟಡೀಸ್ ಸಂಸ್ಥಾಪಕ ಅಧ್ಯಕ್ಷ ಮಲ್ಲಿಕಾರ್ಜುನ ಹಲಮಂಡಗೆ ಹೇಳಿದರು.

ಪಟ್ಟಣದ ನಿರ್ಮಲಾ ಹಲಮಂಡಗೆ ಗ್ರೂಪ್ ಆಫ್ ಇನ್ಸಿ ಇನ್‌ಟ್ಯೂಟ್‌ನ, ನಿರ್ಮಲಾ ಕ್ರಿಯೇಟಿವ್ ಸ್ಟಡೀಸ್ ಪ.ಪೂ ಕಾಲೇಜಿನಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಹಾಗು ದ್ವಿತೀಯ ಪಿ.ಯೂ ಕಾಲೇಜು ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಎಸ್.ಎಸ್. ಎಲ್.ಸಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು. ಆತ್ಮವಿಶ್ವಾಸ ಬೆಟ್ಟವನ್ನೇ ಕರಗಿಸಬಲ್ಲದು, ಹೀಗಾಗಿ ವಿದ್ಯಾರ್ಥಿಗಳು ಯಾವುದೇ ಭಯ ಪಡದೇ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು ಎಂದು ಹೇಳಿದರು.

ಭಾಲ್ಕೇಶ್ವರ ಪ್ರೌಢಶಾಲೆಯ ಮುಖ್ಯಶಿಕ್ಷಕ ಬಾಲಾಜಿ

ಬಿರಾದಾರ ಮಾತನಾಡಿ, ನಿರ್ಮಲಾ ಕ್ರಿಯೇಟಿವ್ ಸ್ಟಡೀಸ್ ವಿದ್ಯಾರ್ಥಿಗಳು ಪ್ರತಿವರ್ಷ ಉತ್ತಮ ಫಲಿತಾಂಶ ನೀಡುತ್ತಾರೆ. ಪ್ರಸ್ತುತ ಸಾಲಿನ ವಿದ್ಯಾರ್ಥಿಗಳೂ ಉತ್ತಮ ಫಲಿತಾಂಶ ನೀಡುವಲ್ಲಿ ತಯ್ಯಾರಿ ನಡೆಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಜಯರಾಜ ದಾಬಶೆಟ್ಟಿ ಮಾತನಾಡಿ, ಕಡಿಮೆ ಶುಲ್ಕದಲ್ಲಿಯೇ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ನಿರ್ಮಲಾ ಹಲಮಂಡಗೆ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ಉನ್ನತ ಹುದ್ದೆಯಲ್ಲಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಈ ಕಾಲೇಜು ವರಗಾಗಿ ಪರಿಣಮಿಸಿದೆ ಎಂದು ಹೇಳಿದರು.

ಭಾಲ್ಕೇಶ್ವರ ಪ್ರೌಢಶಾಲೆಯ ಶಿಕ್ಷಕಿ ಸುನಿತಾ ವಿದ್ಯಾರ್ಥಿಗಳ ಉನ್ನತಿಯ ಬಗ್ಗೆ ಮಾತನಾಡಿದು. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಅಮರ ಹಲಮಂಡಗೆ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ನಿರ್ಮಲಾ ಕ್ರಿಯೇಟಿವ್ ಸ್ಟಡೀಸ್ ಪಿ.ಯು. ಕಾಲೇಜಿನ ಪ್ರಾಚಾರ್ಯ ಜಾಲಿಂದರ ಮೇತ್ರೆ, ಶಿವಕುಮಾರ ಕಾಂಜೋಳಗೆ, ಪ್ರೌಢಶಾಲಾ ಮುಖ್ಯ ಶಿಕ್ಷಕಿ ಮೀನಾಕ್ಷಿ ಪಾಟೀಲ, ಸಂಜು ಮಾಶೆಟ್ಟೆ ಉಪಸ್ಥಿತರಿದ್ದರು.




# ಹಲಗೆ ಮಜಲು ಪರಂಪರೆ ಉಳಿಸಿ ಬೆಳೆಸಿ: ಡಿಸಿ ಸಂಗಪ್ಪ ಕರೆ

ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ದೇಶದಲ್ಲಿಯೇ ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದುಕೊಂಡಿರುವ ಬಾಗಲಕೋಟೆ ಹೋಳಿ ಹಬ್ಬದ ಹಲಗೆ ಮಜಲು ಪರಂಪರೆಯನ್ನು ಉಳಿಸಿ ಬೆಳೆಸುವ ಕೆಲಸ ಬಾಗಲಕೋಟೆಯ ಜನರಿಂದ ಆಗಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.




ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪತ್ರಕರ್ತ ದಿ.ಪ್ರಕಾಶ ಗುಳೇದಗುಡ್ಡ ವೇದಿಕೆಯಲ್ಲಿ ನಡೆದ ಹಲಗೆ ಮಜಲು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಎಲ್ಲ ವರ್ಗದವರು ಹೋಳಿ ಹಬ್ಬವನ್ನು ಭಾವೈಕ್ಯತೆಯಿಂದ ಆಚರಿಸುವ ಮೂಲಕ ಮುಂದಿನ ಪೀಳಿಗೆಗೆ ನಮ್ಮ ಹಬ್ಬದ ಪರಂಪರೆಯನ್ನು ತಿಳಿಸಿಕೊಡಬೇಕಾಗಿದೆ. ಹೋಳಿ ಹಬ್ಬವನ್ನು ಎಲ್ಲರೂ ಸಹೋದರರಂತೆ ಸ್ನೇಹಮಯವಾಗಿ ಆಚರಿಸಬೇಕು ಎಂದು ಹೇಳಿದರು.

ಎಲ್ಲರಲ್ಲೂ ಒಳ್ಳೆಯ ವಿಚಾರ, ಚಿಂತನೆಗಳು ಬರಬೇಕು. ಅಹಂಕಾರ ನಾಶ ಮಾಡುವುದು ಹೋಳಿ ಹಬ್ಬದ ಸಂಕೇತ. ಕೆಂಪು ಶೌರ್ಯ, ಹಸಿರು ಸಮೃದ್ಧಿ, ನೀಲಿ ವಿಶ್ವಾಸ, ಹಳದಿ ಆನಂದವನ್ನು ಉಂಟು ಮಾಡುತ್ತದೆ. ಪತ್ರಕರ್ತರು ಸಹ ಹಲಗೆ ಮಜಲು ಏರ್ಪಡಿಸಿ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸುವುದು ಶ್ಲಾಘನೀಯ ಎಂದರು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಹಬ್ಬಗಳು ಸಂಸ್ಕೃತಿಯ ಪ್ರತಿಬಿಂಬ. ಸಾಮರಸ್ಯ, ಸಂತಸವನ್ನು ಹಂಚಿಕೊಳ್ಳುವುದೇ ಹಬ್ಬಗಳ ಉದ್ದೇಶ. ಹಬ್ಬಗಳ ಪ್ರಾಮುಖ್ಯತೆಯನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕಾದ ಅಗತ್ಯವಿದೆ ಎಂದು ಹೇಳಿದರು.

ಬಾಗಲಕೋಟೆಯ ಹೋಳಿ ಹಬ್ಬಕ್ಕೆ ವಿಶೇಷತೆ ಇದೆ. ವಿವಿಧತೆಯಲ್ಲಿ ಏಕತೆ, ವೈಭೋವಿತವಾಗಿ ವಿಜೃಂಭಣೆಯಿಂದ ಹೋಳಿ ಹಬ್ಬವನ್ನು ಇಲ್ಲಿ ಆಚರಿಸಲಾಗುತ್ತದೆ. ಬಾಗಲಕೋಟೆಯ ಪತ್ರಕರ್ತರು ಕೂಡ ಇಲ್ಲಿಯ ಜನರೊಂದಿಗೆ ಮುಂಚೂಣಿಯಲ್ಲಿ ನಿಂತು ಹಲಗೆ ಮೇಳ ಕಾರ್ಯಕ್ರಮ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಮಾತನಾಡಿ, ನಗರದಲ್ಲಿ ಶಾಂತಿ ಸುವ್ಯವಸ್ಥೆ ಇದ್ದು ಎಲ್ಲರೂ ಹಬ್ಬವನ್ನು ಉತ್ಸಾಹದಿಂದ ಆಚರಿಸಬೇಕು. ಯಾರೂ ಶಾಂತಿಗೆ ಭಂಗವನ್ನು ಉಂಟು ಮಾಡದೇ ಹಬ್ಬ ಆಚರಿಸಬೇಕು. ಅಹಿತಕರ ಘಟನೆ ನಡೆಸುವವರ ಮೇಲೆ ಪೊಲೀಸ್ ಇಲಾಖೆ ಸದಾ ಕಣ್ಣು ಇಟ್ಟಿರುತ್ತದೆ. ಶಾಂತಿ ಸುವ್ಯವಸ್ಥೆ ನೆಲೆಸಲು ಇಲಾಖೆಯೊಂದಿಗೆ ಎಲ್ಲರೂ ಸಹಕಾರ ನೀಡಿದ್ದಾರೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ಈಶ್ವರ ಶೆಟ್ಟರ ಮಾತನಾಡಿ, ಬಾಗಲಕೋಟೆ ಹೋಳಿ ಹಬ್ಬವನ್ನು ಜಾತಿ,

ಮತ, ಬೇಧಭಾವ ಇಲ್ಲದೇ ಎಲ್ಲರೂ ಒಗ್ಗೂಡಿಕೊಂಡು ಸೌಹಾರ್ದತೆಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಹೋಳಿ ಹಬ್ಬಕ್ಕೆ ಬಾಗಲಕೋಟೆಯಲ್ಲಿ ತನ್ನದೇಯಾದ ವೈಶಿಷ್ಟತೆ ಇದ್ದು ಇದನ್ನು ಉಳಿಸಿಕೊಂಡು ಹೋಗಬೇಕಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷ ಮಹೇಶ ಅಂಗಡಿ ಮಾತನಾಡಿ, ಹಿರಿಯ ಪತ್ರಕರ್ತ ದಿ.ರಾಮ ಮನಗೂಳಿಯವರು ಪತ್ರಕರ್ತರು ಹಲಗೆ ಮೇಳ ಹಮ್ಮಿಕೊಂಡು ಹೋಳಿ ಹಬ್ಬವನ್ನು ಆಚರಿಸಲು ಬುನಾದಿ ಹಾಕಿಕೊಟ್ಟಿದ್ದು ಅದರಂತೆ ಅದನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ. ಮುಂದಿನ ವರ್ಷ ಪತ್ರಕರ್ತರಿಗೆ ಹಲಗೆ ಮೇಳ ಸ್ಪರ್ಧೆಯನ್ನು ಆಯೋಜಿಸಲಾಗುವುದು. ಇದ–ಕ್ಕೆ ಜಿಲ್ಲಾ ಆಡಳಿತ ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು.

ಕಾರ್ಯಕಾರಿಣಿ ಸದಸ್ಯ ಅಭಯ ಮನಗೂಳಿ ಪೂಜೆ ನೆರವೇರಿಸಿದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಗದೀಶ ಗಾಣಿಗೇರ ಸ್ವಾಗತಿಸಿದರು. ಕಾರ್ಯಕಾರಿಣಿ ಸದಸ್ಯ ಮಂಜುನಾಥ ತಳವಾರ ನಿರೂಪಿಸಿದರು. ಕೃಷ್ಣಾ ಹಾದಿಮನಿ ವಂದಿಸಿದರು.

# ಶಿವಾಜಿ ಜಯಂತಿ ವೇಳೆ ಕಲ್ಲು ತೂರಿದ ಘಟನೆ ಖಂಡಿಸಿ ಬೃಹತ್ ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ಫೆ.19 ರಂದು ನಡೆದ ಶಿವಾಜಿ ಮಹಾರಾಜರ ಭಾವಚಿತ್ರ ಮೆರವಣಿಗೆ ಕಾಲಕ್ಕೆ ನಗರದ ಪಂಖಾ ಮಸೀದಿಯಿಂದ ಕಲ್ಲು ಹಾಗೂ ಚಪ್ಪಲಿ ತೂರಿದ ಘಟನೆಯನ್ನು ಖಂಡಿಸಿ ಹಿಂದು ಹಿತರಕ್ಷಣಾ ಸಮಿತಿ ಗುರುವಾರ ಬೃಹತ್ ಧರಣಿ ನಡೆಸಿ ಪ್ರತಿಭಟಿಸಿತು.



ನವನಗರದ ಜಿಲ್ಲಾಡಳಿತ ಭವನದ ಎದುರುಗಡೆ ಧರಣಿ ನಡೆಸಿದ ಸಾವಿರಾರು ಜನ ಹಿಂದು ಕಾರ್ಯಕರ್ತರು ಚಪ್ಪಲಿ, ಕಲ್ಲು ತೂರಿ ಬಂದ ಪಂಖಾ ಮಸೀದಿಯನ್ನು ಸೀಜ್ ಮಾಡಿ ಬಂದ್ ಮಾಡಬೇಕು ಆಗ್ರಹಿಸಿದರು. ಈ ಸಮಯದಲ್ಲಿ ಹಿಂದು ಜಾಗರಣಾ ವೇದಿಕೆಯ ರಾಜ್ಯ ಮುಖಂಡ ಉಲ್ಲಾಸ್ ಮಾತನಾಡಿ, ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆಸಲಾದ ಘಟನೆಯನ್ನು ತೀವ್ರವಾಗಿ ಖಂಡಿಸಿ, ಆ ಮಸೀದಿಯ ಅಧ್ಯಕ್ಷನನ್ನು ಕೂಡಲೇ ಬಂಧಿಸಬೇಕು ಹಾಗೂ ಮಸೀದಿಯನ್ನು ಶಾಶ್ವತವಾಗಿ ಬಂದ್ ಮಾಡಬೇಕೆಂದು ಜಿಲ್ಲಾಡಳಿತಕ್ಕೆ ಆಗ್ರಹಿಸಿದರು.

ಹಿಂದೂಗಳ ಭಾವನಗೆ ಮತಾಂಧ ಶಕ್ತಿಗಳು ಧಕ್ಕೆತರುತ್ತಿದ್ದಾರೆ. ಇಂತಹ ದುಷ್ಟ ಶಕ್ತಿಗಳನ್ನು ಮಟ್ಟ ಹಾಕಬೇಕು. ಮೇಲಿಂದ ಮೇಲೆ ಇಂತಹ ಘಟನೆಗಳು ಪುನರಾವರ್ತನೆ ಆಗುತ್ತಿದ್ದರೂ ಸರ್ಕಾರ ಇಲ್ಲಿವರೆಗೂ ಎಚ್ಚೆತ್ತುಕೊಂಡಿಲ್ಲ. ಹಿಂದೂಗಳ ರಕ್ಷಣೆಯನ್ನು ಹಿಂದೂಗಳೇ ಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಹಿಂದೂ ಬಾಂಧವರು ಸಂಘಟಿತರಾಗಬೇಕಾಗಿದೆ. ಎಂದು ಹೇಳಿದ ಅವರು, ಮಸೀದಿ ಬಂದ್ ಮಾಡುವವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ. ಪೋಲಿಸರು ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸಿದರೆ ಅದಕ್ಕೆಲ್ಲ ನಾವು ಅಂಜುವುದಿಲ್ಲ. ನಮ್ಮ ಹೋರಾಟವು ಮುಂದುವರೆಯಲಿದೆ ಎಂದು ಹೇಳಿದರು. ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಹಿಂದು ಜಾಗರಣಾ ವೇದಿಕೆ ಸಹ ಸಂಚಾಲಕ ಶ್ರೀಕಾಂತ ಹೊಸಕೇರಿ, ಅಶೋಕ ಲಿಂಬಾವಳಿ, ರಾಜು ನಾಯ್ಕರ ಮತ್ತಿತರರು ಮಾತನಾಡಿ, ಕಲ್ಲು ತೂರಾಟದ ಘಟನೆಯನ್ನು ತೀವ್ರವಾಗಿ ಖಂಡಿಸಿ ಮಸೀದಿಯ ಆಡಳಿತ ಮಂಡಳಿಯವರನ್ನು ಬಂಧಿಸಿ ಮಸೀದಿಗೆ ಬೀಗ ಜಡಿಯಬೇಕು ಎಂದು ಒತ್ತಾಯಿಸಿದರು.

ವೇದಿಕೆ ಮೇಲೆ ಹಂಸನೂರ ಶ್ರೀಗಳು, ಮಾರುತಿ ಶಿಂಧೆ ಇದ್ದರು. ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಮಾಜಿ ಶಾಸಕ ರಾಜಶೇಖರ ಶೀಲವಂತ, ಕುಮಾರಸ್ವಾಮಿ ಹಿರೇಮಠ, ಅಶೋಕ ಮುತ್ತಿನಮಠ, ಬಸವರಾಜ ಕಟಗೇರಿ, ರಾಜು ನಾಯ್ಕರ್, ವಿಜಯ ಸುಲಾಖೆ, ಜಯಂತ ಕುರಂದವಾಡ, ಕಳಕಪ್ಪ ಬಾದೋಡಗಿ, ಅರುಣ ಲೋಕಾಪೂರ, ಗಂಗಾಧರ ಮುರನಾಳ, ಬಸವರಾಜ ಯಂಕಂಚಿ, ಶ್ರೀನಾಥ ಸಜ್ಜನ, ಸುರೇಶ ಮಜ್ಜಗಿ, ರಾಜು ಗೌಳಿ, ಶೈಲು ಅಂಗಡಿ ಸೇರಿದಂತೆ ಅನೇಕ ಹಿಂದೂ ಪ್ರಮುಖ ಕಾರ್ಯಕರ್ತರು ಧರಣಿಯಲ್ಲಿ ಭಾಗವಹಿಸಿದ್ದರು.


# ಡಾ: ಭೀಮರಾವ್ ಅಂಬೇಡ್ಕರ್ ಚಾರಿಟಬಲ್ ಸೇವಾ ಟ್ರಸ್ಟ್ ಆರಾಧ್ಯ ಭೂಮಿ ಪತ್ರಿಕೆ ಬಿಡುಗಡೆಗೊಳಿಸಿದ ಶಾಸಕ ಗಣೇಶ್

ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ ಪತ್ರಿಕಾ ರಂಗವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಂತೆ ಅತ್ಯಂತ ಪ್ರಮುಖವಾಗಿದೆ. ಸಮಾಜ ಮತ್ತು ಸರ್ಕಾರದ ನಡುವಿನ ಸೇತುವೆಯಾಗಿ, ಸಮಾಜದ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಮಹತ್ತರ ಪಾತ್ರ ವಹಿಸಲಿದೆ ಎಂದು ಶಾಸಕ ಜೆಎನ್ ಗಣೇಶ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಡಿಟೋರಿಯಂ ಸಭಾಂಗಣದಲ್ಲಿ ಡಾ: ಭೀಮರಾವ್ ಅಂಬೇಡ್ಕರ್ ಚಾರಿಟೇಬಲ್ ಸೇವಾ ಟ್ರಸ್ಟ್ (ರಿ) ಕಂಪ್ಲಿ, ಆರಾಧ್ಯ ಭೂಮಿ ಪಕ್ಷಿಕಾ ಪತ್ರಿಕೆ ಹಾಗೂ ಆರಾಧ್ಯ ಭೂಮಿ ಡಿಜಿಟಲ್ ನ್ಯೂಸ್ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ನೂತನವಾಗಿ ಆರಂಭವಾಗಿರುವ ಸೇವಾ ಟ್ರಸ್ಟ್ ಹಾಗೂ ಪತ್ರಿಕೆ ಸಮಾಜದ ಒಳಿತಿಗಾಗಿ ಬಡವರ, ದೀನ ದಲಿತರ ಧ್ವನಿಯಾಗಿ ಕೆಲಸ ನಿರ್ವಹಿಸಬೇಕು ಹಾಗೂ ಬುದ್ಧ ಬಸವ ಅಂಬೇಡ್ಕರ್ ತತ್ವ ಸಿದ್ಧಾಂತಗಳನ್ನು ಪಾಲಿಸಬೇಕು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಕ್ಕಿ ಗಿರಣಿ ಮಾಲೀಕರ ಸಂಘದ ಅಧ್ಯಕ್ಷ ಕೆ.ಎಂ ಹೇಮಯ್ಯಸ್ವಾಮಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ದಿವ್ಯ ಸಾನಿಧ್ಯ ವಹಿಸಿದ ಕಂಪ್ಲಿ ಕಲ್ಮಠ ಶ್ರೀಗಳಾದ ಪ್ರಭುಸ್ವಾಮಿ ಮಾತನಾಡಿ ಡಾ: ಭೀಮರಾವ್ ಅಂಬೇಡ್ಕರ್ ಚಾರಿಟೇಬಲ್ ಸೇವಾ ಟ್ರಸ್ಟ್ (ರಿ ) ಕಂಪ್ಲಿ ಹಾಗೂ ಆರಾಧ್ಯ ಭೂಮಿ ಪತ್ರಿಕೆ ಡಿಜಿಟಲ್ ನ್ಯೂಸ್ ಬಿಡುಗಡೆ ಸಮಾರಂಭದ ಪ್ರಯುಕ್ತ ಬುದ್ಧ, ಬಸವ, ಅಂಬೇಡ್ಕರ ತತ್ವ ಸಿದ್ಧಾಂತಗಳಂತೆ ವಿವಿಧ ರಂಗಗಳಲ್ಲಿ ಸಾಧನೆಗೈದ ಪ್ರಥಮ ದರ್ಜೆ ಕಾಲೇಜಿನ 21 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಬುಕ್ ಪೆನ್ನು ಸಂವಿಧಾನದ ಪುಸ್ತಕ, ಹಾಗೂ ಸಸಿಗಳನ್ನು ನೀಡಿ ಸನ್ಮಾನಿಸಿ ಗೌರವಿಸುತ್ತಿರುವುದು ತುಂಬಾ ಸಂತೋಷಕರವದ ವಿಷಯ. ಶಿಕ್ಷಣಕ್ಕೆ ಮತ್ತು ಪರಿಸರಕ್ಕೆ ಹೆಚ್ಚಿನ ಆದ್ಯತೆ ನೀಡಿದಂತಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ಸಿ ಆರ್ ಹನುಮಂತ, ಕೆ ಎಸ್ ಚಾಂದ್ ಭಾಷಾ, ಜಿ. ರಾಮಣ್ಣ, ಮುಖಂಡರಾದ ಮೂಕಯ್ಯಸ್ವಾಮಿ, ಮಾಜಿ ತಾ. ಪಂ. ಸದಸ್ಯರಾದ ಮಾನ್ವಿ ಶಿವರಾಜ್ ಜನೇಕಲ್,



ಎಪಿಎಂಸಿ ಅಧ್ಯಕ್ಷ ಹಬೀಬ್ ರೆಹಮಾನ್, ಸಿ. ಯಂಕಪ್ಪ, ಎಂಸಿ ಮಾಯಪ್ಪ, ಭಾವೈಕ್ಯ ವೆಂಕಟೇಶ್, ಜನಾರ್ದನ ಗವಿಸಿದ್ದಪ್ಪ, ಶಿಕಾರಿ ರಾಮು ವಸಂತ್ ರಾಜ್ ಕಹಳೆ, ಅಕ್ಕಿ ಜಿಲಾನ್, ಮಂಗಳಮುಖಿ ರಾಜಮ್ಮ, ಕೆ.ಕರಿಯಪ್ಪ ನಾಯಕ, ಮಣ್ಣೂರು ಬಸವರಾಜ, ಆರಾಧ್ಯ ಭೂಮಿ ಪತ್ರಿಕೆ ಸಂಪಾದಕ ರವಿ ಮಣ್ಣೂರು, ಉಪ ಸಂಪಾದಕ ಕೆ. ಲಕ್ಷ್ಮಣ, ಸಹ ಸಂಪಾದಕ, ರಾಜಶೇಖರ್ ಬೆಂಗಳೂರು , ಉಷಾ, ಸರಸ್ವತಿ, ರೇಣುಕಾ ಕಾಳಿ ಉಪನ್ಯಾಸಕರಾದ ಸಿದ್ದಪ್ಪ,

ರಮೇಶ್ ಸುಗ್ಗೇನಹಳ್ಳಿ, ರೈತ ಮುಖಂಡ ರಮೇಶ್ ಕೊಟ್ಟೂರು, ಬಾಲೆ ಸಾಬ್, ದೇವಸಮುದ್ರ ಷಣ್ಮುಖಪ್ಪ, ಸಣಾಪುರ ಮರಿಯಪ್ಪ, ಕಾಳಿಂಗ ವರ್ಧನ, ಬಳೆ ಮಲ್ಲಿಕಾರ್ಜುನ, ನಬೀಸಾಬ್, ಶ್ರೀನಿವಾಸ, ಸಣ್ಣಪ್ಪ ತಳವಾರ್, ಹುಸೇನಪ್ಪ, ಸಿಕ್ಲಿ ಬಸವರಾಜ್, ಅರಣ್ಯ ಇಲಾಖೆ ಅಧಿಕಾರಿ ಪರಶುರಾಮ್, ಮೆಹಬೂಬ್ ಬಾಷಾ, ಹಾಗೂ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು, ಉಪ ಪ್ರಾಂಶುಪಾಲರು, ವಿದ್ಯಾರ್ಥಿಗಳು ಸಾರ್ವಜನಿಕರು ಭಾಗವಹಿಸಿದ್ದರು.

# ಭ್ರಷ್ಟಾಚಾರ ಬಚ್ಚಿಟ್ಟ ಮಾಹಿತಿ ಬಹಿರಂಗ ಪಡಿಸಿದ ಭಕ್ತರು



**ಯಲಬುರ್ಗಾ:** ಶ್ರೀ ಸಿದ್ದರಾಮೇಶ್ವರ ಸಂಸ್ಥಾನ ಹಿರೇಮಠದ ಯಲಬುರ್ಗಾದ ಪೀಠಾಧಿಪತಿಗಳು ಹಾಗೂ ಭಕ್ತರ ಮಧ್ಯೆ ಎರಡು ವರ್ಷದಿಂದ ವಾದ ವಿವಾದಗಳಿಂದ ನಿರಂತರವಾಗಿ ಬೂದಿ ಮುಚ್ಚಿದ ಕೆಂಡದಂತೆ ವಾತವರಣ ನಿರ್ಮಾಣವಾಗಿದೆ, ಕೆಲವು ಭಕ್ತರು ಪೂಜ್ಯರ ಪರವಾಗಿ, ಇದರಲ್ಲಿ ಇನ್ನೂ ಕೆಲವು ಭಕ್ತರು ಪೂಜ್ಯರ ವಿರುದ್ಧವಾಗಿ ಈ ಭಕ್ತರು ಧಾರ್ಮಿಕ ಕಾರ್ಯಕ್ರಮವನ್ನು ಮಾಡುತ್ತಾ ಬಂದಿರುತ್ತಾರೆ.

**ವಾದ ವಿವಾದ ಜರುಗುವುದಕ್ಕೆ ಹಿನ್ನೆಲೆ ಎನು?:** ಶ್ರೀಮಠದಲ್ಲಿ ರೇವಣಸಿದ್ದಯ್ಯ ಎಂಬ ವ್ಯಕ್ತಿ ಮಠದಲ್ಲಿ ಸೇರಿಕೊಂಡು ಪೂಜಾ ಕಾರ್ಯದಲ್ಲಿ ನಿರತನಾದ ,ಶ್ರೀಗಳು ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಆತನಿಗೆ ಕೆಲಸ ಕೊಟ್ಟಿದ್ದರು, ಆದರೆ ಒಂದು ದಿನ ಶ್ರೀ ರೇವಣಸಿದ್ದಯ್ಯನನ್ನು ಪೀಠಾಧಿಪತಿಯವರ ಸಹೋದರ ಪ್ರಸನ್ನ ಅವರು ರೇವಣಸಿದ್ದಯ್ಯ ವ್ಯಕ್ತಿಗೆ ಕಪಾಳ ಮೋಕ್ಷ ಮಾಡಿದ್ದಾರೆ ಆಗ ,ಈ ವಿಷಯವನ್ನು ಹಿರಿಯರಾದ ಮುದಕಪ್ಪ ಮಾಸ್ತಾರ ನೇರೆಗಲ್ಲ್ ಹಾಗು ಫಕಿರಪ್ಪ ಬೇದವಟ್ಟಿ ಹಾಗು ಹಿರಿಯರಿಗೆ ತಿಳಿಸಿದಾಗ , ಹಿರಿಯರ ಸಮ್ಮುಖದಲ್ಲಿ ವೀರನಗೌಡ ಬನ್ನಪ್ಪಗೌಡ್ರ ಶ್ರೀಗಳನ್ನು ಪ್ರಶ್ನಿಸಿದಾಗ ಶ್ರೀ ಗಳು ನೀನು ಮಠಕ್ಕೆ ಸಂಬಂದವಿಲ್ಲ ಎಂದಿದ್ದಾರೆ, ಆಗ ಪ್ರಾರಂಭವಾದ ಕಿಡಿ ಇಂದು ಜ್ವಾಲೆಯಾಗಿ ಹೊತ್ತಿ ಉರಿಯುತ್ತಿದೆ. ಶ್ರೀಗಳವರ 26 ನೇ ಪಟ್ಟಾಧಿಕಾರ ಅಂಗವಾಗಿ ಕೆಲವು ಭಕ್ತರು ಸೇರಿ ಶ್ರೀಗಳವರಿಗೆ ಸನ್ಮಾನ ಗೌರವ ಅರ್ಪಿಸಿ ಮಾತನಾಡಿ ನಾವೇಲ್ಲರೂ ಒಂದೂ ಗೂಡಿ ಹೋಗೋಣ ಎಂದರು. ನಂತರ ಭಕ್ತರ ಸಮ್ಮುಖದಲ್ಲಿ 26 ವರ್ಷ ಪೀಠಾಧಿಕಾರವನ್ನು ವಹಿಸಿಕೊಂಡಿದ್ದ ಶ್ರೀಗಳವರು ಇಲ್ಲಿಯವರಿಗೆ ಪುರಾಣ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತುಲಾಭಾರ,ಗೌರವ ಕಾಣಿಕೆ, ದೇಣಿಗೆ ಹಿಗೇ ತನು ಮನದಿಂದ ಧವಸ ಧಾನ್ಯಗಳನ್ನು ಭಕ್ತರು ಶ್ರೀ ಮಠಕ್ಕೆ ಅರ್ಪಿಸಿದ್ದಾರೆ ಆದರೆ ಶ್ರೀ ಮಠದಲ್ಲಿರುವ ಪೂಜ್ಯರು ಹಾಗು ಇವರ ಹಿರಿಯ ಸಹೋದರ ಸೇರಿಕೊಂಡು ಭಕ್ತರು ಕೊಟ್ಟಿರುವ ಉತ್ತಮ ಅಕ್ಕಿ ಪಾಕೇಟ್ ಗಳನ್ನು ದಾಸೋಹದಲ್ಲಿ ಬಳಸಲಾರದೆ ರೇಷನ್ ಅಕ್ಕಿಗಳನ್ನು ಬಳಕೆಮಾಡಿದ್ದಾರೆ,ಇದಕ್ಕೆ ಮಲ್ಲಿಕಾರ್ಜುನ ಟೆಂಗಿನಕಾಯಿ,ಅಮರಪ್ಪ ಕಲಬುರ್ಗಿ ಕೈ ಜೋಡಿಸಿದ್ದಾರೆ ಮತ್ತು ಇಲ್ಲಿಯವರೆಗೂ ಲೇಖ್ಖಪತ್ರಗಳನ್ನು ನೀಡಿರುವದಿಲ್ಲ, ಸರಿದಾರಯಲ್ಲಿ ಬಾರದೆ ಇದ್ದರೆ ಇವರು ಪೀಠ ತ್ಯಾಗ ಮಾಡಲಿ,ಮುಂದೆ ಬೇರೆ ಸ್ವಾಮೀಜಿಯವರನ್ನು ಕರೆತಂದು ಪೀಠದಲ್ಲಿ ಕೂಡಿಸುವ ಮಾರ್ಗದಲ್ಲಿ ಮುಂದಾಗುತ್ತವೆ ಎಂದರು. ಹೀಗಾಗಿ ಇನ್ನೂ ಇವರ ಕಾರ್ಯ ವೈಖರಿಯ ಬಗ್ಗೆ ಸಭೆಯಲ್ಲಿ ಮಾತನಾಡಿ ಸಭೆಯಲ್ಲಿ ಮನವಿಯನ್ನ ಎಸಿ ಮಹೇಶ ಮಾಲಗಿತ್ತಿ ಅವರಿಗೆ ಆಸ್ತಿ ಕಬಳಿಸಿದ ವಿವರ ಸೇರಿದಂತೆ ಸಮಗ್ರ ಮಾಹಿತಿಯ ಮನವಿಯನ್ನು ತಶೀಲ್ದಾರ ಪ್ರಕಾಶ ನಾಶಿ, ಸಿಪಿಐ ಮೌನೇಶ ಮಾಲಿಪಾಟೀಲ, ಮುಖ್ಯಾಧಿಕಾರಿ ನಾಗೇಶ ಹಾಗು ಭಕ್ತರ ಸಮ್ಮುಖದಲ್ಲಿ ಸಲ್ಲಿಸಿದರು. ಈ ವೇಳೆ ಭಕ್ತರಾದ ಮಲ್ಲಿಕಾರ್ಜುನ್ ಪೊಲೀಸ್ ಪಾಟೀಲ್, ಶಿವಾನಂದ ಬಣಕಾರ, ಉಮೇಶಗೌಡ ಮಾಲಿ ಪಾಟೀಲ,ಬಸವರಾಜ ಅಧಿಕಾರ,ನೀಲನಗೌಡ ತಳುವಗೇರಿ,ರಾಮಣ್ಣ ಮೋರಗೇರ, ವೀರಯ್ಯ ಹಿತ್ತಲಮನಿ, ಶರಣಪ್ಪ ಕೊಡಗಲಿ, ಸುರೇಶ ಕಮ್ಮಾರ ಪಾಂಡು, ಮಂಜಪ್ಪ ಹಳ್ಳಿಕೇರಿ ,ಸಿದ್ರಾಮಗೌಡ ಮಾಲಿಪಾಟೀಲ, ಸೇರಿದಂತೆ ಇತರರು ಇದ್ದರು.ಎನೇ ಆಗಲಿ , ಮಠದ ಪೂಜ್ಯರು ಹಾಗು ಭಕ್ತರು ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ಸರಿದಾರಿಯಲ್ಲಿ ಹೋದರೆ ಎಲ್ಲರಿಗೂ ಸಂತಸವಾಗುತ್ತದೆ ಎನ್ನುವದು ಇನ್ನೂ ಕೇಲವ ಭಕ್ತರ ಆಶಯವಾಗಿದೆ.




**ಪೀಣ್ಯ,ದಾಸರಹಳ್ಳಿ: ಕಾಂಗ್ರೆಸ್ ಮುಖಂಡರು ಹಾಗೂ ಹೆಗ್ಗನಹಳ್ಳಿ, ಶ್ರೀಗಂಧನಗರ ವಾರ್ಡ್ ನ ಕಾಂಗ್ರೆಸ್ ಆಕಾಂಕ್ಷಿ ಅಭ್ಯರ್ಥಿ ಬಾ ನಾ ರವಿ ರವರ ಸಹೋದರರಾದ ಬಾ ನಾ ಮಧುಕುಮಾರ್ ರವರ ಹುಟ್ಟುಹಬ್ಬವನ್ನು ಹೆಗ್ಗನಹಳ್ಳಿಯ ಕಚೇರಿಯಲ್ಲಿ ಕೇಕ್ ಕತ್ತರಿಸಿ ಶಾಲು ಹೊದಿಸಿ ಸನ್ಮಾನಿಸುವ ಮೂಲಕ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಬಾ ನಾ ಗಿರೀಶ್ ಸೇರಿದಂತೆ ಹಲವಾರು ಮುಖಂಡರು, ಸ್ನೇಹಿತರು ಉಪಸ್ಥಿತರಿದ್ದು ಹುಟ್ಟುಹಬ್ಬಕ್ಕೆ ಶುಭಕೋರಿದರು.**

## ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ರಾಷ್ಟ್ರೀಯ ಭಾವೈಕ್ಯತೆ ದಿನ ಆಚರಣೆ

**ಕೊಪ್ಪಳ:** ತ್ರಿವಿಧ ದಾಸೋಹಿ, ಬಸವ ತತ್ವದ ದಂಡನಾಯಕರು, ಭಾರತ ಸರ್ಕಾರದ ರಾಷ್ಟ್ರೀಯ ಭಾವೈಕ್ಯತಾ ಹಾಗೂ ದೇಶದ ಏಕತಾ



ಪ್ರಶಸ್ತಿ ಪುರಸ್ಕೃತರಾದ ಪೂಜ್ಯಶ್ರೀ ಲಿಂಗೈಕ್ಯ ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳವರ 77ನೇ ಜಯಂತಿಯ ಅಂಗವಾಗಿ ಮಂಡಲಗಿರಿಯ ಶ್ರೀ ಜಗದ್ಗುರು ತೋಂಟದಾರ್ಯ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ಭಾವೈಕ್ಯತಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಮಂಡಲಗಿರಿಯ ಉದ್ದಿಮೆದಾರ ಪ್ರವೀಣ್ ಕುಮಾರ ಹಿರೇಮಠ, ಮುಖಂಡರಾದ ಲಿಂಗರಾಜಗೌಡ ಹೊರಪೇಟೆ, ನಿವೃತ್ತ ಪ್ರಾಚಾರ್ಯರಾದ ಎಸ್ ಆರ್ ಹಿರೇಮಠ, ಎಸ್ ಕೆ ಸಂಗಳದ, ಎಸ್ ಬಿ ಚಂಗಳಿ, ವಿ ಎಚ್ ಮೇಟಿ, ಎಸ್ ಸಿ ಪಾಟೀಲ್, ನಿವೃತ್ತ ಕಚೇರಿ ಅಧಿಕ್ಷಕ ಹೆಚ್ ವೈ ಉಪ್ಪಾರ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಭಾವೈಕ್ಯತಾ ದಿನಾಚರಣೆಯ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ತರಬೇತಿದಾರರಿಗೆ ಈ ಸಂದರ್ಭದಲ್ಲಿ ಬಹುಮಾನ ವಿತರಿಸಲಾಗುವುದು. ನಿವೃತ್ತ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ವರ್ಗದವರನ್ನು ಕುಟುಂಬ ಸಮೇತವಾಗಿ ಸನ್ಮಾನಿಸಲಾಗುವುದು ಎಂದು ಸಂಸ್ಥೆಯ ಪ್ರಾಚಾರ್ಯ ಸಿ ಎಸ್ ಅಂಗಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾನಾಮತಿ ಕಾಟ: ಮೈ ತುಂಬ ಹರಿಯುವ ರಕ್ತ...!

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಮನುಕುಲವೇ ನಂಬಲಸಾಧ್ಯ ಭಯಾನಕ ಘಟನೆಗಳಿಂದ ವಿಜಯಪುರ ಜಿಲ್ಲೆಯ ಉಮರಾಣಿಯ ಕುಟುಂಬವೊಂದು ಕಂಗಾಲಾಗಿದೆ. ಕುಟುಂಬದ ಅಣ್ಣ ತಂಗಿಗೆ ವಿಚಿತ್ರ ಕಾಟದಿಂದ ಬೆಚ್ಚಿ ಬಿದ್ದಿದ್ದಾರೆ. ಅಣ್ಣ ತಂಗಿಯ ಮೈಮೇಲೆ ಊರ್ದು ಭಾಷೆಯಲ್ಲಿ ಅಕ್ಷರಗಳು ಮೂಡಿ ರಕ್ತ ಸುರಿಯುತ್ತಿದೆ. ಹುಣ್ಣಿಮೆ ಅಮವಾಸ್ಯೆ ಬಂದ್ರೆ ಸಾಕು ಮನೆಯಲ್ಲಿ ಚಿತ್ರ ವಿಚಿತ್ರ ಬೆಚ್ಚಿಬೀಳಿಸುವ ಘಟನೆಗಳು ನಡೆಯುತ್ತಿವೆಯಂತೆ. ಈ ಭಯಾನಕ ಕಾಟದಿಂದ ನಮಗೆ ಮುಕ್ತಿ ಕೊಡಿಸಿ ಎಂದು ಕುಟುಂಬ ಕಂಡು ಕಂಡವರಲ್ಲಿ ಮೊರೆ ಇಡುತ್ತಿದ್ದಾರೆ. ಈ ಕುರಿತಾದ ಒಂದು ವರದಿ ಇಲ್ಲಿದೆ ನೋಡಿ...

ಹಣೆಯಿಂದ ಸುರಿಯುತ್ತಿರೋ ರಕ್ತ.. ಮೈಮೇಲೆ ರಕ್ತಸಿಕ್ತವಾದ ಉರ್ದು ಭಾಷೆ ಹೋಲುವ ಅಕ್ಷರಗಳು.. ಭಯಾನಕ ಕಾಟಕ್ಕೆ ಹೆದರಿ ಕಣ್ಣೀರು ಹಾಕುತ್ತಿರುವ ಕುಟುಂಬ. ಹೌದು ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಉಮರಾಣಿ ಗ್ರಾಮದ ಪಾಟೀಲ್ ಕುಟುಂಬ ಈಗ ಅಕ್ಷರಶಃ ಬೆಚ್ಚಿ ಬಿದ್ದಿದೆ. ಯಾವಾಗ ಏನಾಗುತ್ತೊ ಅನ್ನೋ ಭಯದಲ್ಲೆ ಕಾಲ ಕಳೆಯುತ್ತಿದೆ. ಅಂದಹಾಗೇ ಈ ಮನೆಯಲ್ಲಿರೋ ಸುನೀಲ್ ಪಾಟೀಲ್ ಹಾಗೂ ಸುನೀತಾ ಎನ್ನುವ ಅಣ್ಣ ತಂಗಿಗೆ ವಿಚಿತ್ರ, ಭಯಾನಕ ಅಘೋಚರ



ಕಾಟದಿಂದ ಬಳಲುತ್ತಿದ್ದಾರಂತೆ. ಅಮವಾಸ್ಯೆ, ಹುಣ್ಣಿಮೆ ಬಂದ್ರೆ ಸಾಕು ಸುನೀಲ್ ಹಾಗೂ ಸುನಿತಾ ಮೈಮೇಲೆ ಪರಚಿದ ಗಾಯಗಳು ಕಾಣುತ್ವಂತೆ. ಕೆಲವೆ ಕ್ಷಣಗಳಲ್ಲಿ ಈ ಗಾಯಗಳು ಉರ್ದು ಭಾಷೆ ಹೋಲುವ ಅಕ್ಷರಗಳಾಗಿ ರಕ್ತ ಸುರಿಯುತ್ತಂತೆ. ಈ ವಿಚಿತ್ರ- ಭಯಾನಕ ಕಾಟದಿಂದ ಪಾಟೀಲ್ ಕುಟುಂಬ ನಿತ್ಯ ಕಣ್ಣೀರಲ್ಲೆ ಕಾಲ ಕಳೆಯುತ್ತಿದೆ...

**ರುದ್ರಗೌಡ ಪಾಟೀಲ, ಸುನೀಲ್ ನ ಸಂಬಂಧಿ...**

ಇನ್ನು ಕಳೆದ 16 ವರ್ಷಗಳ ಹಿಂದೆ ಸುನೀಲ್ ಗೆ ಹುಲಕೋಟೆಯ ಹಾಸ್ಟೇಲ್ ಗೆ ಹಾಕಲಾಗಿತ್ತು. ಆಗ ಅರಿವೆ ಇಲ್ಲದಂತೆ ಆತ ಹಾಸ್ಟೇಲ್ ಬಿಟ್ಟು ಮನೆಗೆ ವಾಪಸ್ ಆಗಿದ್ದನಂತೆ. ಅಂದಿನಿಂದ ಅಣ್ಣ ಹಾಗೂ ತಂಗಿ ಸುನೀತಾ ದೇಹದ ಮೇಲೆ ವಿಚಿತ್ರ ಆಕೃತಿ, ಅಕ್ಷರಗಳು ಮೂಡುತ್ತಿವೆಯಂತೆ. ಇದಷ್ಟೇ ಅಲ್ಲ ಸುನೀಲ್ ಆಗಾಗ್ಗ ಪೆಟ್ರೋಲ್ ಇಲ್ಲದ ಬೈಕನ್ನ ಓಡಿಸಿಕೊಂಡು ಎಲ್ಲೆಲ್ಲಿಯೋ ಹೋಗಿ ಬಿಡುತ್ತಿದ್ದಾನಂತೆ. ಇನ್ನು ಮನೆಯಲ್ಲಿ ಸುನೀಲ್ ಹಾಗೂ ಸುನೀತಾಳ ಬಟ್ಟೆಗಳಿಗೆ ಏಕಾಏಕಿ ಬೆಂಕಿ ಬೀಳುತ್ತಂತೆ. ಮನೆಗೂ ಬೆಂಕಿ ತಗುಲಿ ಬಹಳಷ್ಟು ನಷ್ಟವಾಗುತ್ತಿದೆಯಂತೆ. ಇನ್ನೂ ಇದೆ ಕಾಟಕ್ಕಾಗಿ ಉಮರಾಣಿಯಿಂದ ವಿಜಯಪುರ ನಗರಕ್ಕೆ ಶಿಫ್ಟ್ ಆಗಿದ್ದಾರೆ, ಇಲ್ಲಿಯೂ ಅದೇ ರೀತಿಯ ಘಟನೆಗಳು ಮುಂದುವರೆದಾಗ ಈಗ ಕನ್ನೂರು ಗ್ರಾಮಕ್ಕೆ ಶೀಫ್ಟ್ ಆಗಿದ್ದಾರೆ. ಆದ್ರೆ ಮತ್ತೆ ಈಗ ಸುನೀಲ್ ಹಣೆಯಲ್ಲಿ ನಾಮದ ರೀತಿ ಆಕೃತಿ ಮೂಡಿ ರಕ್ತ ಸುರಿಯುತ್ತಿದೆ. ಹಲವಾರು ದೇವರು ದಿಂಡಿರು, ದರ್ಗಾ, ಮಾಟಗಾರರ ಬಳಿ ಹೋದರು ಸಮಸ್ಯೆಗೆ ಪರಿಹಾರ ಮಾತ್ರ ಸಿಕ್ಕಿಲ್ಲವಂತೆ. ಯಾರಾದ್ರೂ ಈ ಸಮಸ್ಯೆಯನ್ನ ಬಗೆ ಹರಿಸೋದಕ್ಕೆ ಸಹಾಯ ಮಾಡಿ ಎನ್ನುತ್ತಿದ್ದಾರೆ ಕುಟುಂಬಸ್ಥರು...


**ಸುನೀಲ ಪಾಟೀಲ, ನೊಂದ ಯುವಕ...**

ಸುನೀತಾ ಹಾಗೂ ಸುನೀಲ್ ಇಬ್ಬರೇ ಮನೆಯಲ್ಲಿದ್ದಾಗ ಘಟನೆಗಳು ನಡೆಯುತ್ತಿರೋದು ಹಲವು ಅನುಮಾನಗಳನ್ನ ಸೃಷ್ಟಿ ಮಾಡಿವೆ. ಈ ನಿಟ್ಟಿನಲ್ಲಿ ಅಣ್ಣ ತಂಗಿಗೆ ಮನೋವೈದ್ಯರ ಬಳಿ ಚಿಕಿತ್ಸೆ ಕೊಡಿಸಬೇಕು ಎನ್ನುವ ಸಲಹೆಗಳು ಕೇಳಿ ಬರ್ತಿವೆ. ಅದೇನಾದ್ರು ಆಗಲಿ ಪಾಟೀಲ್ ಕುಟುಂಬದಲ್ಲಿ ನಡೆಯುತ್ತಿರೋ ಭಯಾನಕ ಘಟನೆಗಳು ಬೇಗನೆ ನಿಲ್ಲಲಿ, ಈ ಕುಟುಂಬದಿಂದ ಮುಕ್ತಿ ಯಾವಾಗ ಸಿಗತ್ತೆ ಎಂಬುದು ಯಕ್ಷ ಪ್ರಶ್ನೆಯಾಗಿದೆ...

## ಕೀಹೋಲ್ ಶಸ್ತ್ರ ಚಿಕಿತ್ಸೆ ಯಶಸ್ವಿ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ ಶ್ರೀ ಬಿ. ಎಂ. ಪಾಟೀಲ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯಲ್ಲಿ ಹೃದಯದಲ್ಲಿ ಬೆಳೆದಿದ್ದ ಸುಮಾತು 200 ಗ್ರಾಂ ತೂಕದ ಗಡ್ಡೆಯನ್ನು ಕೀಹೋಲ್ ಶಸ್ತ್ರ ಚಿಕಿತ್ಸೆಯ ಮೂಲಕ ಯಶಸ್ವಿಯಾಗಿ ಹೊರ ತೆಗೆಯಲಾಗಿದೆ.ಎಂಡೊಸ್ಕೋಪಿಕ್ ಶಸ್ತ್ರಚಿಕಿತ್ಸಕ ಡಾ. ರವಿ ಘಟ್ನಟ್ಟಿ ಅವರ ನೇತೃತ್ವದ ತಂಡ ಈ ಯಶಸ್ವಿ ಶಸ್ತ ಚಿಕಿತ್ಸೆ ನಡೆಸಿದೆ. ಈ ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ಅರವಳಿಕೆ ತಜ್ಞ ಡಾ. ಪ್ರಶಾಂತ ಬಿರಾದಾರ, ಸಿಟಿವಿಎಸ್ ನರ್ಸಿಂಗ್ ಸಿಬ್ಬಂದಿ ಉಪಸ್ಥಿತರಿದ್ದರು.



ಈ ಕುರಿತು ಪ್ರತಿಕ್ರಿಯೆ ನೀಡಿರುವ ಡಾ. ರವಿ ಘಟ್ನಟ್ಟಿ, ಎಂಡೋಸ್ಕೋಪಿಕ್ ಹೃದಯ ಶಸ್ತ್ರಚಿಕಿತ್ಸೆ ತಂಡವು 48 ವರ್ಷದ ಮಹಿಳೆಯ ಹೃದಯದಲ್ಲಿ ಕಂಡುಬಂದ ಕ್ಯಾನ್ಸರ್‌ರಹಿತ ಗಡ್ಡೆಯನ್ನು (ಲೆಫ್ಟ್ ಏಟ್ರಿಯಲ್ ಮಿಕ್ಸೋಮ) ಸಂಪೂರ್ಣ ಎಂಡೋಸ್ಕೋಪಿಕ್ (ಕೀಹೋಲ್) ತಂತ್ರದ ಮೂಲಕ ಯಶಸ್ವಿಯಾಗಿ ತೆಗೆಯಲಾಗಿದೆ. ಆರು ಗಂಟೆಗಳ ಕಾಲ ಈ ಶಸ್ತ್ರಚಿಕಿತ್ಸೆನಡೆಸಲಾಯಿತು ಎಂದು ತಿಳಿಸಿದರು.

ಕಾರ್ಡಿಯಾಕ್ ಮಿಕ್ಸೋಮ ಎಂಬುದು ಹೃದಯದ ಒಳಭಾಗದಲ್ಲಿ ಬೆಳೆಯುವ ಸೌಮ್ಯ (ಬಿನೈನ್) ಗಡ್ಡೆಯಾಗಿದೆ. ಇದಕ್ಕೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡದಿದ್ದರೆ ರೋಗಿಯು ಉಸಿರಾಟದ ತೆ-ೂಂದರೆ, ಜ್ವರ, ದೌರ್ಬಲ್ಯ ಮುಂತಾದ ಲಕ್ಷಣಗಳನ್ನು ಎದುರಿಸುತ್ತಾರೆ. ಬೇರೆ ಕಡೆ ಸಾಮಾನ್ಯವಾಗಿ ಇಂಥ ಶಸ್ತ್ರಕ್ರಿಯೆಯನ್ನು, ಎದೆಮೂಳೆ ಕತ್ತರಿಸುವ ವಿಧಾನ ಬಳಸುತ್ತಾರೆ. ಆದರೆ, ಇಲ್ಲಿನ ಶಸ್ತ್ರಚಿಕಿತ್ಸೆ ತಂಡವು ಬಲ ಸ್ತನದ ಮೇಲ್ಭಾಗದ ಸುತ್ತ ಸಣ್ಣ ರಂದ್ರವನ್ನು ಮಾಡಿ, 'ಪೆರಿ-ಏರಿಯೋಲರ್ ಅಪ್ರೋಚ್' ವಿಧಾನವನ್ನು ಅನುಸರಿಸಿದೆ ಶಸ್ತ್ರಚಿಕಿತ್ಸೆ ನಡೆಸಿದೆ. ಕೂಡ ಕಡಿಮೆ ಇರುತ್ತದೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

## ಮಾಲಿನ್ಯ ನಿಯಂತ್ರಣಕ್ಕೆ ಮಾನದಂಡ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಷ್ಟ್ರ ರಾಜಧಾನಿ ದೆಹಲಿಯಂತೆ ಬೆಂಗಳೂರು ಸಹ ಮತ್ತೊಂದು ಗ್ಯಾಸ್ ಛೇಂಬರ್ ಆಗದಂತೆ ಕ್ರಮ ವಹಿಸಲು ಶೀಘ್ರವೇ ನಗರದ ಎಲ್ಲ 28 ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ರಾಜಾಜಿನಗರ ಶಾಸಕ ಸುರೇಶ್ ಕುಮಾರ್ ಅವರ ಕೋರಿಕೆಯ ಮೇರೆಗೆ ಅವರೊಂದಿಗೆ ಇಂದು ಉನ್ನತಾಧಿಕಾರಿಗಳ ಸಭೆ ನಡೆಸಿದ ಸಚಿವರು, ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ, ಜಲ ಮಾಲಿನ್ಯ ಮತ್ತು ಶಬ್ದ ಮಾಲಿನ್ಯ ಹೆಚ್ಚಾಗುತ್ತಿದ್ದು ಇದರ ನಿಯಂತ್ರಣಕ್ಕೆ ಎಲ್ಲ ಜನಪ್ರತಿನಿಧಿಗಳ ಸಹಕಾರದ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ವಿಷಯ ಪ್ರಸ್ತಾಪಿಸಿ ನಗರದಲ್ಲಿ ರಸ್ತೆಯಲ್ಲಿನ ಧೂಳಿನಿಂದಾಗಿ ವಾಯು ಗುಣಮಟ್ಟ ಕ್ಷೀಣಿಸುತ್ತಿದ್ದು, ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ವೈದ್ಯರು ಬೆಂಗಳೂರು ಹೊರವಲಯಕ್ಕೆ ಹೋಗುವಂತೆ ಸಲಹೆ ನೀಡುತ್ತಿದ್ದಾರೆ.



ವಾಯು ಗುಣಮಟ್ಟ ಕಾಪಾಡಲು ತುರ್ತು ಕ್ರಮ ಕೈಗೊಳ್ಳಬೇಕು ಎಂದರು.

**ಸ್ಥಳೀಯ ಸಂಸ್ಥೆಗೆ ನೋಟಿಸ್ ನೀಡಲು ಸೂಚನೆ:** ಇದಕ್ಕೆ ಸ್ಪಂದಿಸಿದ ಪರಿಸರ ಸಚಿವರು, ಈಗಾಗಲೇ ಬೆಂಗಳೂರಿನ 11 ಸ್ಥಳಗಳಲ್ಲಿ ಸ್ಥಾಪಿತ ಮತ್ತು 13 ಸಂಚಾರಿ ಘಟಕಗಳ ಮೂಲಕ ವಾಯು ಗುಣಮಟ್ಟ ಸೂಚ್ಯಂಕದ ಮೌಲ್ಯಮಾಪನ ಮಾಡಲಾಗುತ್ತಿದೆ ಎಂಬ ಮಾಹಿತಿ ನೀಡಿ, ವಾಯು ಗುಣಮಟ್ಟ ಸೂಚ್ಯಂಕ ಮೌಲ್ಯವು 100ದಾಟಿದರೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡ್ಲಿ ನಿಯಂತ್ರಿಸಲು ಕ್ರಮ ವಹಿಸದಿದ್ದರೆ ನಿಯಮಾನುಸಾರ ಮೊಕದ್ದಮೆ ದಾಖಲಿಸಿ ಎಂದು ಸೂಚನೆ ನೀಡಿದರು.

## ಶಾದಿ ಮಹಲ್‌ನಲ್ಲಿ ಕಮ್ಯುನಿಷ್ಟ್ ಪಕ್ಷದಿಂದ ವಿಚಾರ ಸಂಕಿರಣ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ನಗರದ ಶಾದಿ ಮಹಲ್ ನಲ್ಲಿ ಸಿಪಿಐ (ಎಂಎಲ್ ರೆಡ್ ಸ್ಟಾರ್ ಕಮ್ಯುನಿಷ್ಟ್ ಪಕ್ಷದ ವತಿಯಿಂದ ಇದೇ ಫೆಬ್ರವರಿ 28.ರಂದು ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ಎಂ. ಗಂಗಾಧರ್ ರಾಜ್ಯ ಸಮಿತಿ ಸದಸ್ಯರು ಸಿಪಿಐ (ಎಂಎಲ್) ರೆಡ್ ಸ್ಟಾರ್ ಅವರು ತಿಳಿಸಿದರು.

ನಗರದ ಪತ್ರಿಕಾ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಈ ವಿಚಾರ ಸಂಕಿರಣದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಮ್ಯುನಿಸ್ಟ್ ಪಕ್ಷದ ದವರ ಪಾತ್ರ. ಮತ್ತು ಜಾತಿ ನಿರ್ಮೂಲನೆಗಾಗಿ. ಮಾರ್ಕ್ಸ್ ವಾದಿ ಹಾಗೂ ಅಂಬೇಡ್ಕರ್ ವಾದಿಗಳು ಐಕ್ಯತೆಯ ಸವಾಲುಗಳು ಎಂಬ ಎರಡು ಮಹತ್ವದ ರಾಷ್ಟ್ರೀಯ ವಿಷಯಗಳು ಆಧಾರವಾದ ಮೇಲೆ ಚರ್ಚೆ ನಡೆಸಲಾಗುತ್ತದೆ ಎಂದರು




ಈ ಎರಡು ಮಹತ್ವದ ವಿಷಯಗಳ ಮಂಡನೆಗಾಗಿ ಕಮ್ಯುನಿಷ್ಟ್ ಪಕ್ಷದ ಪಾಲಟಿ ಬ್ಯುರೊ ಸದಸ್ಯರಾದ ಆರ್ ಮಾನಸಯ್ಯ. ಹಾಗೂ ಕಾಮ್ರೇಡ್ ಬಿ ರುದ್ರಯ್ಯ. ಉಪನ್ಯಾಸಕರು ಹಾಗೂ ಪ್ರಗತಿಪರ ಚಿಂತಕ ನಾರಾಯಣ ಬೆಳೆಗುರ್ಕಿ ಸಾಮಾಜಿಕ ಹೋರಾಟಗಾರ ಹಾಗೂ ಸಾಂಸ್ಕೃತಿಕ ಚಿಂತಕ ಹೆಚ್ ಎನ್ ಬಡಿಗೇರ್ ಸಂಪಾದಕರಾಗಿ ಮಾತನಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ ಡಿ ಅಮೀರ್ ಅಲಿ ವಹಿಸಲಿದ್ದಾರೆ ಎಂದು ಹೇಳಿದರು

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ರೈತರು ಕಾರ್ಮಿಕರು ಆದಿವಾಸಿಗಳ ಸಂಘಟಿಸಿ ಬಹುದೊಡ್ಡ ಬಲಿದಾನ ಮಾಡಿದ ಕಮ್ಯುನಿಷ್ಟ್ ರೈ ಪಾತ್ರವನ್ನು ವಹಿಸುತ್ತಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಕಮ್ಯುನಿಸ್ಟ್ ರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಎಂಬ ಸತ್ಯಾಂಶವನ್ನು ಹೊಸ ತಲೆಮಾರಿನ ಜನಗಳಿಗೆ ಅಪರಿಚಿತ. ಹಾಗಾಗಿ ಸ್ವಾತಂತ್ರ್ಯ ಚಳುವಳಿಯ ಆಶೋತ್ತರಗಳು ಇದುವರೆಗೂ ಈಡೇರಿದೆ ಹೋದ ವಾಸ್ತುವನ್ನು ಮತ್ತೆ ಚರ್ಚಿಸಲಾಗುವುದು ಎಂದರು

ಪ್ರತ್ಯೇಕ ಗೊಳ್ಳದ ಜಂಟಿ ಸವಾಲ್ ಎಂದು ಕಮ್ಯುನಿಷ್ಟ್ ಪಕ್ಷಗಳು ಮಾರ್ಕ್ವಾದಿ ಗಳು ಹಾಗೂ ಅಂಬೇಡ್ಕರ್ ವಾದಿಗಳೊಂದಿಗೆ ಐಕ್ಯ ಹೋರಾಟ ಕಟ್ಟಲು ಅಡ್ಡ ಬರುವ ಸಮಸ್ಯೆಗಳು ಪರಿಹಾರಕ್ಕೆ ಮುಂದಾಗ ಬೇಕಾಗಿದೆ ಎಂದರು. ಹಾಗಾಗಿ ಮಹತ್ವದ ವಿಷಯಗಳ ಬಗ್ಗೆ ವಿಚಾರ ಸಂಕಿರಣದಲ್ಲಿ ಎಲ್ಲಾ ಪ್ರಗತಿಪರ ಸ್ನೇಹಿತರು ವಿವಿಧ ಕಮ್ಯುನಿಷ್ಟ್ ಪಕ್ಷಗಳು ವಿವಿಧ ದಲಿತ ಸಂಘಟನೆಗಳು ಚಿಂತಕರು ಮುಂದಾಳುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಸಿಪಿಐ ಎಂಎಲ್ ರೆಡ್ ಸ್ಟಾರ್ ರಾಜ್ಯ ಸಮಿತಿ ಸದಸ್ಯರು ಎಂ ಗಂಗಾಧರ್ ರವರು ಮನವಿ ಮಾಡಿದರು.

# ಸಂಸ್ಕೃತಿ, ಸೌಹಾರ್ದತೆ-ಸಂಭ್ರಮದ ಸಂಕೇತ



ಕರಾವಳಿ-ಕಂಪು

● ಇಬ್ರಾಹಿಂ ಕೋಟ

ಉಡುಪಿ ಜಿಲ್ಲಾ ವರದಿಗಾರರು

ಕರ್ನಾಟಕದ ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಭಾಗಗಳಲ್ಲಿ ಹೋಳಿ ಹಬ್ಬವು ಧಾರ್ಮಿಕ ಭಾವನೆ, ಸಾಂಸ್ಕೃತಿಕ ವೈವಿಧ್ಯತೆ ಹಾಗೂ ಸಮಾಜಸೌಹಾರ್ದತೆಯ ಸಂಕೇತವಾಗಿ ವಿಶಿಷ್ಟವಾಗಿ ಆಚರಿಸಲಾಗುತ್ತದೆ. ಬಣ್ಣಗಳ ಹಬ್ಬವೆಂದೇ ಪ್ರಸಿದ್ಧಿಯಾದ ಹೋಳಿ, ಈ ಪ್ರದೇಶದಲ್ಲಿ ಕೇವಲ ಉಲ್ಲಾಸದ ಆಚರಣೆಯಷ್ಟೇ ಅಲ್ಲದೆ, ಪರಂಪರೆ ಮತ್ತು ಸಾಮಾಜಿಕ ಬಾಂಧವ್ಯದ ಹಬ್ಬವಾಗಿಯೂ ರೂಪುಗೊಂಡಿದೆ.

**ಕಾಮದಹನದಿಂದ ಆರಂಭ:** ಹೋಳಿ ಹಬ್ಬದ ಮುನ್ನದಿನ 'ಕಾಮದಹನ' ಆಚರಣೆ ಪ್ರಮುಖ ಸ್ಥಾನ ಹೊಂದಿದೆ. ಗ್ರಾಮ-ನಗರಗಳಲ್ಲಿನ ದೇವಾಲಯಗಳ ಆವರಣದಲ್ಲಿ, ಬಯಲು ಪ್ರದೇಶಗಳಲ್ಲಿ ಕಡ್ಡಿ-ಮರದ ತುಂಡುಗಳನ್ನು ರಾಶಿ ಮಾಡಿ ಅಗ್ನಿ ಹಚ್ಚುವ ಮೂಲಕ ದುರಾಚಾರಗಳ ನಾಶ ಹಾಗೂ ಸತ್ವವೃತ್ತಿಗಳ ಜಯವನ್ನು ಸಂಕೇತವಾಗಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಮಹಿಳೆಯರು, ಮಕ್ಕಳು ಹಾಗೂ ಹಿರಿಯರು ಭಾಗವಹಿಸಿ ವಿಶೇಷ ಪೂಜೆ ಸಲ್ಲಿಸುತ್ತಾರೆ.

**ಬಣ್ಣಗಳ ಸಂಭ್ರಮ:** ಮುಂದಿನ ದಿನ ಯುವಕರು ಹಾಗೂ ಮಕ್ಕಳು ಪರಸ್ಪರ ಬಣ್ಣ ಎರಚಿಕೊಂಡು ಸಂಭ್ರಮಿಸುತ್ತಾರೆ. ನಗರ ಪ್ರದೇಶಗಳಲ್ಲಿ ಆಧುನಿಕ ಶೈಲಿಯ ಡಿಜೆ ಸಂಗೀತ, ಮೆರವಣಿಗೆಗಳು ಕಂಡುಬಂದರೆ, ಗ್ರಾಮೀಣ ಭಾಗಗಳಲ್ಲಿ ಸಾಂಪ್ರದಾಯಿಕ ಡೋಲು-ಕುಣಿತ, ಹಾಡು-




ನೃತ್ಯಗಳೊಂದಿಗೆ ಹಬ್ಬದ ರಂಗು ಹೆಚ್ಚುತ್ತದೆ. ಕೆಲವೆಡೆ ಸಂಘ-ಸಂಸ್ಥೆಗಳು ಸಮೂಹ ಹೋಳಿ ಕಾರ್ಯಕ್ರಮಗಳನ್ನು ಆಯೋಜಿಸಿ ಎಲ್ಲ ವಯೋಮಾನದವರನ್ನೂ ಒಂದೇ ವೇದಿಕೆಯಲ್ಲಿ ಒಂದಾಗಿಸುತ್ತವೆ.

**ದೇವಾಲಯ ಮತ್ತು ಸಮುದಾಯ ಆಧಾರಿತ ಆಚರಣೆ:** ಕರಾವಳಿ ಭಾಗದ ಹಲವಾರು ದೇವಾಲಯಗಳಲ್ಲಿ ಹೋಳಿ ಹಬ್ಬದ ಪ್ರಯುಕ್ತ ವಿಶೇಷ ಪೂಜೆ, ಅನ್ನಸಂತರ್ಪಣೆ ಹಾಗೂ ಭಜನೆ ಕಾರ್ಯಕ್ರಮಗಳು ನಡೆಯುತ್ತವೆ. ಕೆಲವು ಕಡೆ ಯಕ್ಷಗಾನ, ನಾಟಕ, ಭಕ್ತಿ ಸಂಗೀತ ಕಾರ್ಯಕ್ರಮಗಳ ಮೂಲಕ ಹಬ್ಬಕ್ಕೆ ಸಾಂಸ್ಕೃತಿಕ ಮೆರಗು ನೀಡಲಾಗುತ್ತದೆ. ಹೀಗಾಗಿ ಹೋಳಿ ಕೇವಲ ಬಣ್ಣಗಳ ಹಬ್ಬವಲ್ಲ, ಅದು ಸಂಸ್ಕೃತಿ ಮತ್ತು ಭಕ್ತಿಯ ಹಬ್ಬವೂ ಆಗಿದೆ.

**ಸೌಹಾರ್ದತೆಯ ಸಂದೇಶ:** ಬಹುಭಾಷಾ, ಬಹುಸಂಸ್ಕೃತಿಗಳ ನೆಲೆಯಾದ ಕರಾವಳಿಯಲ್ಲಿ ಹೋಳಿ ಹಬ್ಬವು ಪರಸ್ಪರ ಗೌರವ ಮತ್ತು ಸಹಬಾಳ್ವೆಯ ಸಂದೇಶ ಸಾರುತ್ತದೆ. ವಿಭಿನ್ನ ಸಮುದಾಯಗಳ ಜನರು ಪರಸ್ಪರ ಶುಭಾಶಯ ಕೋರಿಕೊಂಡು, ಹಬ್ಬದ ಸಿಹಿ ಹಂಚಿಕೊಂಡು, ಸಾಮರಸ್ಯದ ಉದಾಹರಣೆಯಾಗುತ್ತಾರೆ.

**ಪರಿಸರ ಜಾಗೃತಿ:** ಇತ್ತೀಚಿನ ವರ್ಷಗಳಲ್ಲಿ ರಾಸಾಯನಿಕ ಬಣ್ಣಗಳ ಬದಲಿಗೆ ನೈಸರ್ಗಿಕ ಬಣ್ಣಗಳನ್ನು ಬಳಸುವ ಪ್ರವೃತ್ತಿ ಹೆಚ್ಚುತ್ತಿದೆ. ನೀರಿನ ಸಂರಕ್ಷಣೆ, ಶಬ್ದಮಾಲಿನ್ಯ ನಿಯಂತ್ರಣದ ಕುರಿತು ಯುವಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಪರಿಸರ ಸ್ನೇಹಿ ಹೋಳಿ ಆಚರಣೆ-ಯತ್ತ ಕರಾವಳಿ ಭಾಗ ಕ್ರಮೇಣ ಹೆಜ್ಜೆ ಹಾಕುತ್ತಿದೆ.

ಒಟ್ಟಾರೆ, ಕರಾವಳಿ ಭಾಗದಲ್ಲಿ ಹೋಳಿ ಹಬ್ಬವು ಧಾರ್ಮಿಕ ಭಾವನೆ, ಸಾಂಸ್ಕೃತಿಕ ವೈಭವ ಮತ್ತು ಸಾಮಾಜಿಕ ಸೌಹಾರ್ದತೆಯ ಸಮನ್ವಯವಾಗಿ ಆಚರಿಸಲಾಗುತ್ತಿದ್ದು, ಜನರ ಹೃದಯಗಳನ್ನು ಒಂದಾಗಿಸುವ ಹಬ್ಬವಾಗಿ ತನ್ನ ವಿಶಿಷ್ಟತೆ ಉಳಿಸಿಕೊಂಡಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)